## ಮಾನವ ಹಕ್ಕುಗಳ ಆಯೋಗಗಳು – ಕಿರುನೋಟ ಮತ್ತು ಪರಿಚಯ

ಮಾನವ ಹಕ್ಕುಗಳು ಉತ್ತಮ ಆಡಳಿತ, ಅಭಿವೃದ್ಧಿ ಹಾಗೂ ಪ್ರಜಾಪ್ರಭುತ್ವದ ಅಂತರಾಳದಲ್ಲಿ ಅಡಗಿದ್ದು ಅದರಿಂದಲೇ ಅವುಗಳನ್ನು ಸಿದ್ಧಿಸಲು ಸಾಧ್ಯ. ಹೆಚ್ಚು ಹೆಚ್ಚು ರಾಷ್ಟ್ರಗಳು ಕಡು ಬಡತನದಲ್ಲಿರುವ ನಾಗರೀಕನಿಗೂ ಸಹ ನಿಜವಾಗಿಯೂ ಮಾನವ ಹಕ್ಕುಗಳನ್ನು ದೊರಕಿಸಿಕೊಡಬೇಕೆಂದು ಬಯಸುವುದರಿಂದ ಮಾನವ ಹಕ್ಕುಗಳನ್ನು ಸಂರಕ್ಷಿಸಿ, ಅಭಿವೃದ್ಧಿಗೊಳಿಸಿ ಹಾಗೂ ರಾಜ್ಯವು ಅದನ್ನು ಉಲ್ಲಂಘನೆ ಮಾಡದಂತೆ ತಡೆಗಟ್ಟುವ ಸಲುವಾಗಿ ಮಾನವ ಹಕ್ಕುಗಳ ಆಯೋಗಗಳನ್ನು ಅಥವಾ ಅದೇ ರೀತಿಯ ಸಂಸ್ಥೆಗಳನ್ನು ಸ್ಥಾಪಿಸಲಾಗಿವೆ.

ಭಾರತವು 1993ನೇ ಇಸವಿಯಲ್ಲಿ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮದಡಿಯಲ್ಲಿ ತನ್ನ ಪ್ರಥಮ ಮಾನವ ಹಕ್ಕುಗಳ ಆಯೋಗವನ್ನು ರಚಿಸಿತು – ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್.ಹೆಚ್.ಆರ್.ಸಿ.). ಹದಿನೆಂಟು ರಾಜ್ಯಗಳೂ ಕೂಡ ತಮ್ಮ ತಮ್ಮ ರಾಜ್ಯಗಳಲ್ಲಿ ಉಲ್ಲಂಘನೆಗಳನ್ನು ತಡೆಗಟ್ಟುವ ಸಲುವಾಗಿ ತಮ್ಮದೇ ಆದ ಮಾನವ ಹಕ್ಕುಗಳ ಆಯೋಗಗಳನ್ನು ರಚಿಸಿಕೊಂಡಿವೆ. ಪ್ರತಿಯೊಬ್ಬರೂ, ಅವರು ಯಾರೇ ಆಗಿರಲಿ, ರಾಷ್ಟ್ರದ ಯಾವುದೇ ಭಾಗದಲ್ಲಿ ನೆಲೆಸಿರಲಿ ಮತ್ತು ಅವರು ಏನೇ ಮಾಡುತ್ತಿರಲಿ ಅವರು ಮಾನವ ಹಕ್ಕುಗಳನ್ನು ಚಲಾಯಿಸಲು ಹಾಗೂ ಅವುಗಳನ್ನು ಅನುಭವಿಸುವಂತೆ ನೋಡಿಕೊಳ್ಳುವುದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಜವಾಬ್ದಾರಿಯಾಗಿದೆ. ಮಾನವ ಹಕ್ಕುಗಳ ಉಲ್ಲಂಘನೆ ಮಾಡುವವರು ಅವರು ಮಾಡಿದ ಕೆಲಸಗಳಿಗೆ ಅವರನ್ನೇ ಹೊಣೆಗಾರರನ್ನಾಗಿ ಮಾಡಿ ನ್ಯಾಯಾಂಗದಿಂದ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳುವುದು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರ ಕರ್ತವ್ಯವಾಗಿರುತ್ತದೆ.

ದೂರುಗಳ ಪರಾಮರ್ಶೆಯ ಜೊತೆಗೆ ಮಾನವ ಹಕ್ಕುಗಳ ಆಯೋಗಗಳು ಮಾನವ ಹಕ್ಕುಗಳ ಬಗ್ಗೆ ಗೌರವ ತಳೆದು ಅವುಗಳನ್ನು ಅರ್ಥಮಾಡಿಕೊಳ್ಳುವಂತಹ ಸಂಸ್ಕೃತಿಯನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಸಕ್ರಿಯವಾದ ಕೊಡುಗೆಯನ್ನು ನೀಡುವುದೆಂದು ನಿರೀಕ್ಷಿಸಲಾಗಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಯಾವಾಗಲೂ ಭಾರತದ ಮುಖ್ಯ ನ್ಯಾಯಾಧೀಶರಾಗಿದ್ದವರೇ ಆಗಿರುತ್ತಾರೆ ಹಾಗೂ ರಾಜ್ಯ ಆಯೋಗದ ಅಧ್ಯಕ್ಷರು ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದವರೇ ಆಗಿರಬೇಕು. ಗರಿಷ್ಠ ಇತರ ನಾಲ್ಕು ಜನರನ್ನು ಸದಸ್ಯರುಗಳನ್ನಾಗಿ ನೇಮಕ ಮಾಡಬಹುದಾಗಿದ್ದು ಅದರಲ್ಲಿ ಇಬ್ಬರು ನ್ಯಾಯಾಧೀಶರಾಗಿ ಕೆಲಸ ಮಾಡಿದಂತಹವರಾಗಿದ್ದು ಇತರ ಇಬ್ಬರಿಗೆ ಮಾನವ ಹಕ್ಕುಗಳ ವಿಷಯಗಳಲ್ಲಿ ಅನುಭವ ಮತ್ತು ಜ್ಞಾನ ಇರಬೇಕು. ರಾಜ್ಯಗಳ ಮಾನವ ಹಕ್ಕುಗಳ ಆಯೋಗಗಳು ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನು ಹೊಂದಿವೆ. ಒಬ್ಬ ಸದಸ್ಯರು ನ್ಯಾಯಾಧೀಶರಾಗಿದ್ದು ಮತ್ತೋರ್ವ ಸದಸ್ಯರು ಮಾನವ ಹಕ್ಕುಗಳ ವಿಷಯಗಳಲ್ಲಿ ಅನುಭವ ಮತ್ತು ಜ್ಞಾನ ಹೊಂದಿರಬೇಕು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರನ್ನು ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ ಹಾಗೂ ರಾಜ್ಯಗಳ ಸದಸ್ಯರನ್ನು ಆ ರಾಜ್ಯದ ರಾಜ್ಯಪಾಲರು ನೇಮಕ ಮಾಡುತ್ತಾರೆ. ಆಡಳಿತ ನಡೆಸುವ ಹಾಗೂ ವಿರೋಧ ಪಕ್ಷಗಳ ನಾಯಕರುಗಳನ್ನೊಳಗೊಂಡ ಸಮಿತಿಯು ರಾಷ್ಟ್ರಪತಿಗಳು ಅಥವಾ ರಾಜ್ಯಪಾಲರಿಗೆ ಅವರ ನೇಮಕಾತಿಯ ಬಗ್ಗೆ ಶಿಫಾರಸ್ಸನ್ನು ಮಾಡುತ್ತದೆ. ನೇಮಕಾತಿಯ ಅವಧಿಯು ಐದು ವರ್ಷಗಳು ಅಥವಾ 70 ವರ್ಷಗಳ ವಯಸ್ಸು ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ

ಇರುತ್ತದೆ. ಖಾಯಂ ಸದಸ್ಯರ ಜೊತೆಗೆ ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗದ ಅಧ್ಯಕ್ಷರು, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗಗಳ ರಾಷ್ಟ್ರೀಯ ಆಯೋಗದ ಹಾಗೂ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರನ್ನು ಸದಸ್ಯರುಗಳನ್ನಾಗಿ ಪರಿಗಣಿಸಲಾಗುವುದು, ಅಂದರೆ ವಿಚಾರಣೆಗಳನ್ನು ಕೈಗೊಳ್ಳುವುದನ್ನು ಹೊರತುಪಡಿಸಿ ಆಯೋಗದ ಇತರ ಎಲ್ಲಾ ಕೆಲಸಕಾರ್ಯಗಳಲ್ಲಿ ನೆರವನ್ನು ನೀಡಬಹುದು.

ಮಾನವ ಹಕ್ಕುಗಳ ಆಯೋಗಗಳಲ್ಲಿ ಐದು ಜನ ಸದಸ್ಯರು ಇರಬೇಕಾಗಿದ್ದರೂ, ಬಹುಪಾಲು ಆಯೋಗಗಳು ನಿಗಧಿತ ಸಂಖ್ಯೆಗಿಂತಲೂ ಕಡಿಮೆ ಪ್ರಮಾಣದಲ್ಲಿ ಕೆಲಸ ಮಾಡುತ್ತಿದೆಯೆಂದು ಅನುಭವದಿಂದ ಕಂಡುಬರುತ್ತದೆ.

ಆಯೋಗಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದಕ್ಕೆ ಅವಕಾಶ ಕಲ್ಪಿಸುವ ಸಲುವಾಗಿ, ರಾಷ್ಟ್ರೀಯ ಆಯೋಗದ ಅಧ್ಯಕ್ಷರಿಗೆ ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಸರಿಸಮನಾದ ಸ್ಥಾನ ಮಾನ ಹಾಗೂ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ರಾಷ್ಟ್ರೀಯ ಆಯೋಗಗಳ ಇತರ ಸದಸ್ಯರಿಗೆ ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ ಸರಿಸಮನಾದ ಸ್ಥಾನಮಾನವಿರುತ್ತದೆ. ರಾಜ್ಯ ಆಯೋಗದ ಅಧ್ಯಕ್ಷರಿಗೆ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ ಸರಿಸಮನಾದ ಸ್ಥಾನಮಾನವಿದ್ದು ಸದಸ್ಯರುಗಳಿಗೆ ಉಚ್ಛ ನ್ಯಾಯಾಲಯದ ನ್ಯಾಯಾಧೀಶರಿಗೆ ಸರಿಸಮನಾದ ಸ್ಥಾನಮಾನವಿರುತ್ತದೆ. ಮಾನವ ಹಕ್ಕುಗಳ ಸಂರಕ್ಷಣಾ

ಅಧಿನಿಯಮದ ಕಲಂ 5ರಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ತಮ್ಮ ಅಧಿಕಾರ ತ್ಯಜಿಸಲು ರಾಜೀನಾಮೆ ನೀಡಿದರೆ ಅದನ್ನು ರಾಷ್ಟ್ರಪತಿಗಳಿಗೆ ನೀಡಬೇಕೆಂದೂ ಹಾಗೂ ಅಧ್ಯಕ್ಷರು ಮತ್ತು ಸದಸ್ಯರನ್ನು ಕಲಂ 5(2)(3)ರಲ್ಲಿ ನಮೂದಿಸಿರುವ ರೀತಿಯಲ್ಲಿ ತೆಗೆದುಹಾಕುವ ಅವಕಾಶವಿರುತ್ತದೆ. ಅದೇ ರೀತಿ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ಕಲಂ 23(1)ರಲ್ಲಿ ತಮ್ಮ ಸ್ಥಾನಕ್ಕೆ ರಾಜ್ಯಪಾಲರಿಗೆ ರಾಜೀನಾಮೆ ನೀಡಿ ಅಧಿಕಾರ ತ್ಯಜಿಸಲು ಹಾಗೂ ಕಲಂ 23(1)(ಎ) ಮತ್ತು (2)ರಲ್ಲಿ ಯಾವ ರೀತಿ ಮತ್ತು ಯಾವ ಕಾರಣಕ್ಕಾಗಿ ಅವರನ್ನು ತೆಗೆದುಹಾಕಬಹುದು ಎನ್ನುವುದನ್ನು ನಮೂದಿಸಲಾಗಿದೆ.

ಏನಾದರೂ, ಆಯೋಗಗಳಿಗೆ ತಮ್ಮದೇ ಆದ ಸ್ವತಂತ್ರ ಪದವೃಂದ (ಕಾಡರ್) ಇರುವುದಿಲ್ಲ. ಅವುಗಳು ಸಾಮಾನ್ಯವಾಗಿ ಸಿಬ್ಬಂದಿಯನ್ನು ಸರ್ಕಾರಿ ಇಲಾಖೆಗಳಿಂದ ಹಾಗೂ ಆಡಳಿತದಲ್ಲಿ ಮತ್ತು ನ್ಯಾಯಾಲಯಗಳಲ್ಲಿ ಅನುಭವವಿರುವ ಜನರನ್ನು ತೆಗೆದುಕೊಳ್ಳುತ್ತವೆ. ರಾಷ್ಟ್ರೀಯ ಆಯೋಗದ ಮಹಾ ಕಾರ್ಯದರ್ಶಿಗಳು ಭಾರತ ಸರ್ಕಾರದ ಕಾರ್ಯದರ್ಶಿಗಳ ದರ್ಜೆಯವರಾಗಿರುತ್ತಾರೆ. ರಾಜ್ಯ ಆಯೋಗಗಳಲ್ಲಿ, ಕಾರ್ಯದರ್ಶಿಗಳು ರಾಜ್ಯ ಸರ್ಕಾರದ ಕಾರ್ಯದರ್ಶಿಗಳ ದರ್ಜೆಯವರಾಗಿರುತ್ತಾರೆ. ರಾಷ್ಟ್ರೀಯ ಆಯೋಗದ ಮಹಾ ಕಾರ್ಯದರ್ಶಿಗಳು ಭಾರತ ಸರ್ಕಾರದ ಕಾರ್ಯದರ್ಶಿಗಳ ಮಟ್ಟಕ್ಕಿಂತಲೂ ಕಡಿಮೆ ಇರಬಾರದು. ಅದೇ ರೀತಿ ರಾಜ್ಯ ಆಯೋಗಗಳ ಕಾರ್ಯದರ್ಶಿಗಳು ರಾಜ್ಯ ಸರ್ಕಾರದ ಕಾರ್ಯದರ್ಶಿಗಳ ಮಟ್ಟಕ್ಕಿಂತಲೂ ಕಡಿಮೆ ಇರಬಾರದು.

ಮಾನವ ಹಕ್ಕುಗಳ ಆಯೋಗಗಳು ಸಮರ್ಥವಾಗಿ ಕೆಲಸ ಮಾಡಬೇಕಾದರೆ ಸ್ವತಂತ್ರ ತನಿಖೆಯು ಪ್ರಮುಖವಾಗಿದ್ದು, ಅತ್ಯಂತ ಹಿರಿಯ ಪೊಲೀಸ್ ಅಧಿಕಾರಿಗಳು ತನಿಖಾ ವಿಭಾಗದ ಮುಖ್ಯಸ್ಥರಾಗಿರಬೇಕಾಗುತ್ತದೆ. ರಾಷ್ಟ್ರೀಯ ಆಯೋಗದ ಮುಖ್ಯಸ್ಥರು ಆರಕ್ಷಕ ಮಹಾ ನಿರ್ದೇಶಕರ ದರ್ಜೆಯವರಾಗಿದ್ದು ರಾಜ್ಯ ಆಯೋಗಗಳಲ್ಲಿ ಕನಿಷ್ಠ ಪಕ್ಷ ಆರಕ್ಷಕ ಮಹಾ ನಿರೀಕ್ಷಕರಾಗಿರಬೇಕು. ತನಿಖಾಧಿಕಾರಿಗಳು ಸಾಮಾನ್ಯವಾಗಿ ಪೊಲೀಸ್ ಇಲಾಖೆಯಿಂದ, ಗುಪ್ತವಾರ್ತಾ ಸಂಸ್ಥೆಯಿಂದ ಅಥವಾ ಕೇಂದ್ರ ಅರೆ ಸೇನಾ ಪಡೆಯಿಂದ ನಿಯೋಜನೆಯ ಮೇಲೆ ಬಂದಿರುತ್ತಾರೆ.

ಕಾಲಕಾಲಕ್ಕೆ, ಒಂದು ಆಯೋಗವು ಖಚಿತವಾದ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಪರಿಶೀಲಿಸುವ ಸಲುವಾಗಿ ತಜ್ಞರನ್ನು ವಿಶೇಷ Rapporteurs ಗಳನ್ನು ನೇಮಕ ಮಾಡಬಹುದು ಅಥವಾ ಹೊರಗಿನಿಂದ ಸಲಹೆಗಾರರ ಸಹಾಯವನ್ನು ಪಡೆಯಬಹುದು.

[ವಿಶೇಷ Rapporteurs - ವಿಶೇಷ Rapporteursಗಳು ಅವರ ಬಹಳಷ್ಟು ಬೇಡಿಕೆಯುಳ್ಳ ಹಾಗೂ ಸೂಕ್ಷ್ಮವಾದ ಜವಾಬ್ದಾರಿಗಳನ್ನು ನಿಭಾಯಿಸಿ ಮಾನವ ಹಕ್ಕುಗಳ ಆಯೋಗಕ್ಕೆ ಸಹಾಯ ಮಾಡುವ ತಜ್ಞರು. ಅವರು ವಿಶೇಷ ಮಾನವ ಹಕ್ಕುಗಳ ವಿಷಯಗಳನ್ನು ಅಥವಾ ತುರ್ತು ವಿಷಯಗಳನ್ನು ಕೈಗೆತ್ತಿಕೊಂಡು ತನಿಖೆಗಳನ್ನು ಕೈಗೊಂಡು ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರುವುದರ ಉಸ್ತುವಾರಿ ವಹಿಸಿಕೊಳ್ಳುತ್ತಾರೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಬಂಧನದಲ್ಲಿರುವವರ ಸಂರಕ್ಷಣೆ, ಬಾಲ ಕಾರ್ಮಿಕ ಪದ್ಧತಿ, ಜೀತದಾಳು

ಪದ್ಧತಿ, ಕೋಮು ಗಲಭೆ, ಆಹಾರದ ಅಭಾವ ಮತ್ತು ಅಂಗವಿಕಲರ ಸಂರಕ್ಷಣೆಗಾಗಿ ವಿಶೇಷ Rapporteursಗಳನ್ನು ನೇಮಿಸಿದೆ.]

ಪ್ರತಿ ವರುಷ, ಸರ್ಕಾರವು ಮಾನವ ಹಕ್ಕುಗಳ ಆಯೋಗಗಳಿಗೆಂದು ಅನುದಾನವನ್ನು ನಿಗಧಿಪಡಿಸಿ ಅವುಗಳನ್ನು, ಸಂಸತ್ತು ಅಥವಾ ರಾಜ್ಯ ವಿಧಾನ ಮಂಡಲವು ಅನುಮೋದಿಸುತ್ತದೆ. ಮಾನವ ಹಕ್ಕುಗಳ ಆಯೋಗಗಳು ಕಾನೂನಿನ ಪ್ರಕಾರ ತಮ್ಮ ವಾರ್ಷಿಕ ಹಾಗೂ ವಿಶೇಷ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಸರ್ಕಾರ ಅದನ್ನು ಪರಿಶೀಲಿಸಿ ಶಿಫಾರಸ್ಸುಗಳ ಬಗ್ಗೆ ತೆಗೆದುಕೊಳ್ಳುವ ಕ್ರಮಗಳನ್ನು ನಮೂದಿಸಿ ಸಂಸತ್ತು ಅಥವಾ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಬೇಕಾಗಿರುತ್ತದೆ. ಒಂದು ವೇಳೆ ವರದಿಯಲ್ಲಿರುವ ಶಿಫಾರಸ್ಸುಗಳನ್ನು ಸರ್ಕಾರ ಒಪ್ಪದಿದ್ದರೆ ಏಕೆ ಒಪ್ಪಿಕೊಳ್ಳುವುದಿಲ್ಲ ಎನ್ನುವ ಬಗ್ಗೆ ಕಾರಣ ನೀಡಿ ಸಂಸತ್ ಅಥವಾ ರಾಜ್ಯ ವಿಧಾನ ಮಂಡಲಕ್ಕೆ ವರದಿ ಮಾಡಬೇಕಾಗುತ್ತದೆ.

## 2. ಮಾನವ ಹಕ್ಕುಗಳು ಎಂದರೇನು?

ಈ ಭಾಗದಲ್ಲಿ ಕೆಳಕಂಡವುಗಳನ್ನು ಚರ್ಚಿಸಲಾಗುತ್ತದೆ:

- ಮಾನವ ಹಕ್ಕುಗಳು
- ಮಾನವ ಹಕ್ಕುಗಳ ಅಂತರರಾಷ್ಟ್ರೀಯ ಘೋಷಣೆ
- ಅಂತರರಾಷ್ಟ್ರೀಯ ಒಡಂಬಡಿಕೆಗಳು
- ಮೂಲಭೂತ ಹಕ್ಕುಗಳು
- ಮಾನವ ಹಕ್ಕುಗಳ ಉಲ್ಲಂಘನೆ

**ಮಾನವ ಹಕ್ಕುಗಳು ಎಂದರೇನು?**

ನಮ್ಮ ಬದುಕನ್ನು ಅರ್ಥಪೂರ್ಣವನ್ನಾಗಿಸಿ ತೃಪ್ತಿದಾಯಕವಾಗುವಂತೆ ಮಾಡುವಂತಹ ಮೂಲಭೂತ ಅರ್ಹತೆಗಳು ಹಾಗೂ ಸ್ವಾತಂತ್ರ್ಯಗಳನ್ನು ಮಾನವ ಹಕ್ಕುಗಳೆಂದು ಕರೆಯಲಾಗುತ್ತದೆ. ನಿರ್ಭೀತಿಯಿಂದಿರುವುದು, ಕಸಿದುಕೊಳ್ಳುವುದರಿಂದ ಮುಕ್ತಿ ಪಡೆಯುವುದು ಹಾಗೂ ನಮ್ಮ ಎಲ್ಲ ಸಾಮರ್ಥ್ಯಗಳ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಪಡೆಯುವುದು ಮನುಷ್ಯನ ಮೂಲಭೂತ ಆಕಾಂಕ್ಷೆಯಾಗಿದೆ. ಆದಕಾರಣದಿಂದಲೇ ಮಾನವ ಹಕ್ಕುಗಳನ್ನು ಕೆಲವೊಮ್ಮೆ 'ಸಹಜವಾದ ಹಕ್ಕುಗಳು' ಎಂದು ಕರೆಯಲಾಗುತ್ತವೆ.

ಎಲ್ಲಾ ಅಂತರರಾಷ್ಟ್ರೀಯ ಸಮುದಾಯವು, ಭಾರತವೂ ಸೇರಿದಂತೆ, ಏನು ಈ ಹಕ್ಕುಗಳು ಹಾಗೂ ಅದರ ಅರ್ಥವೇನು ಎಂಬುದನ್ನು ಒಪ್ಪಿಕೊಂಡಿವೆ. ಉದಾಹರಣೆಗೆ, ಜೀವಿಸುವ

ಹಕ್ಕಿನಲ್ಲಿ ಘನತೆಯಿಂದ ಜೀವಿಸುವ ಹಕ್ಕೂ ಸೇರಿದ್ದು, ತಾರತಮ್ಯವಿಲ್ಲದೆ ಸಮಾನವಾಗಿ ಕಾಣುವ ಹಕ್ಕು, ಚಿತ್ರಹಿಂಸೆಯಿಂದ ಬಿಡುಗಡೆ, ಬಲವಂತದಿಂದ ಕೆಲಸ ಮಾಡಿಸುವುದರಿಂದ ಬಿಡುಗಡೆ, ತಪ್ಪಾಗಿ ಬಂಧಿಸುವುದರಿಂದ ಸ್ವಾತಂತ್ರ್ಯ, ಮುಕ್ತವಾದ ವಿಚಾರಣೆಯ ಹಕ್ಕು, ಮಾಹಿತಿಯನ್ನು ಪಡೆಯುವ ಹಕ್ಕು, ಆಲೋಚಿಸುವ, ಮನಸ್ಸಾಕ್ಷಿಯ, ಧರ್ಮದ, ಏಕಾಂತತೆಯ ಹಕ್ಕುಗಳು, ಮುಕ್ತವಾಗಿ ಮಾತನಾಡುವ ಮತ್ತು ವ್ಯಕ್ತಪಡಿಸುವ ಹಕ್ಕು, ಇತರರೊಡನೆ ಸಹವರ್ತಿಯಾಗಿ, ಸರ್ಕಾರದೊಡನೆ, ಸಾರ್ವಜನಿಕ ಹಾಗೂ ಸಮುದಾಯದ ವಿಷಯಗಳಲ್ಲಿ ಭಾಗವಹಿಸುವ ಹಕ್ಕು, ಊಟ, ವಸತಿ, ಆರೋಗ್ಯ, ಶುದ್ಧವಾದ ಪರಿಸರ, ಶಿಕ್ಷಣ, ಕೆಲಸ ಮಾಡುವ, ಸಮಾನ ಕೆಲಸಕ್ಕೆ ಸಮಾನ ವೇತನ, ಮುಷ್ಕರ ಮತ್ತು ಒಬ್ಬನ ಸಂಸ್ಕೃತಿಯನ್ನು ಹಾಗೂ ಬದುಕುವ ರೀತಿಯನ್ನು ಕಾಪಾಡುವ ಹಕ್ಕುಗಳು ಸೇರಿರುತ್ತವೆ.

**ಮಾನವ ಹಕ್ಕುಗಳ ವಿಶೇಷ ಗುಣಗಳೇನು?**

ಮಾನವರಾದ ಕಾರಣ ಪ್ರತಿಯೊಬ್ಬ ಮಾನವನ ಜನ್ಮದ ಜೊತೆಯಲ್ಲೇ ಬರುವ ಅವುಗಳನ್ನು ಜನ್ಮಸಿದ್ಧಹಕ್ಕುಗಳೆಂದು ಗುರುತಿಸಲಾಗುತ್ತದೆ. ಈ ಹಕ್ಕುಗಳನ್ನು ಯಾರೂ ನೀಡುವುದಿಲ್ಲ ಹಾಗೂ ಯಾರೂ ನ್ಯಾಯಸಮ್ಮತವಾಗಿ ತೆಗೆದುಹಾಕಲು ಸಾಧ್ಯವಿಲ್ಲವಾದ್ದರಿಂದ ಈ ಹಕ್ಕುಗಳನ್ನು **'ಬೇರ್ಪಡಿಸಲಾಗದ ಹಕ್ಕುಗಳು'** ಎಂದು ಕರೆಯಲಾಗುತ್ತದೆ.

ಮಾನವ ಹಕ್ಕುಗಳನ್ನು 'ವಿಶ್ವವ್ಯಾಪಿ' ಎಂದೂ ಸಹ ಗುರುತಿಸಲಾಗುತ್ತದೆ. ಅಂದರೆ, ಅವುಗಳನ್ನು ಎಲ್ಲರೂ, ಅವರು ಯಾವುದೇ ಜಾತಿ, ಪಂಗಡ, ಧರ್ಮ, ಲಿಂಗ, ಸಾಮಾಜಿಕ ಅಥವಾ ಆರ್ಥಿಕ ಸ್ಥಾನಮಾನ, ಅಂಗವಿಕಲತೆ, ವಯಸ್ಸು ಅಥವಾ ಹುಟ್ಟಿದ ಸ್ಥಳವಿರಲಿ,

ಎಲ್ಲರಿಗೂ ಸೇರಿದ್ದು ಎಲ್ಲರಿಂದಲೂ ಜಾರಿಗೊಳಿಸುವಂತಹದ್ದು. ಅವುಗಳು ವಿಶ್ವವ್ಯಾಪಿ ಎಂದು ಕರೆಯಲಾಗುವ ಮತ್ತೊಂದು ಕಾರಣವೆಂದರೆ ಅವುಗಳಲ್ಲಿರುವ ಮುಖ್ಯ ವಿಚಾರಗಳು ಎಲ್ಲಾ ಪ್ರಮುಖ ಧರ್ಮಗಳು, ನಂಬುಗೆಗಳು ಮತ್ತು ನೀತಿ ಸಂಹಿತೆಗಳು ಮತ್ತು ರಾಷ್ಟ್ರಗಳು ನಡುವೆ ಮತ್ತು ಸಾಂಸ್ಕೃತಿಕ ಚೌಕಟ್ಟುಗಳು ಎಲ್ಲದರಲ್ಲೂ ಒಂದೇ ಆಗಿರುತ್ತದೆ. ಅವು ವಿಶ್ವವ್ಯಾಪಿಯಾಗುವುದಕ್ಕೆ ಮತ್ತೊಂದು ಕಾರಣವೆಂದರೆ ಅವು ಕೇವಲ ವ್ಯಕ್ತಿಗತವಾಗಿರದೆ ಸಮುದಾಯಗಳಿಗೂ ಸೇರಿರುತ್ತವೆ. ಉದಾಹರಣೆಗೆ, ಬುಡಕಟ್ಟು ಜನಾಂಗದ ಒಂದು ಸಮುದಾಯವು ಓರ್ವ ವ್ಯಕ್ತಿಯ ಅಥವಾ ಗುಂಪುಗಳ ಮಾನವ ಹಕ್ಕುಗಳ ಉಲ್ಲಂಘನೆ ಮಾಡದಿದ್ದರೆ, ಅದಕ್ಕೆ ತನ್ನದೇ ಆದ ಭಾಷೆಯಲ್ಲಿ ಮಾತನಾಡುವುದಕ್ಕೆ ಹಾಗೂ ತನ್ನದೇ ಆದ ಬದುಕಿನ ರೀತಿಯನ್ನು ಕಾಪಾಡಿಕೊಳ್ಳುವ ಹಕ್ಕಿರುತ್ತದೆ.

ಅವುಗಳನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟು ಕೆಲವೊಮ್ಮೆ ಬೇರೆ ಬೇರೆ ವರ್ಗಗಳನ್ನಾಗಿ ವಿಂಗಡಿಸಿದರೂ – ಅಂದರೆ ನಾಗರೀಕ ಅಥವಾ ರಾಜಕೀಯ ಹಕ್ಕುಗಳು, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು – ಪ್ರತಿಯೊಂದು ಹಕ್ಕೂ ತನ್ನ ಪೂರೈಕೆಗಾಗಿ ಇತರ ಹಕ್ಕನ್ನು ಅವಲಂಬಿಸಿದೆ. ಯಾವುದೇ ಹಕ್ಕನ್ನು ಇತರ ಹಕ್ಕುಗಳಿಲ್ಲದೆ ಅನುಷ್ಠಾನಗೊಳಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಮಾನವ ಹಕ್ಕುಗಳನ್ನು "ಒಂದಕ್ಕೊಂದು ಸಂಬಂಧವಿದ್ದು ಅವಿಭಾಜ್ಯ'ವೆಂದು ಕರೆಯಲಾಗಿದೆ. ಉದಾಹರಣೆಗೆ, ಶಿಕ್ಷಣ ಹಕ್ಕನ್ನು ಸಾಮಾಜಿಕ ಹಕ್ಕೆಂದು ವಿಂಗಡಿಸಲಾಗಿದೆಯಾದರೂ ಸಮಾನತೆಯ ಹಕ್ಕಿಲ್ಲದಿದ್ದರೆ ಅಥವಾ ಅಂಥಹ ಹಕ್ಕನ್ನು

ಎತ್ತಿಹಿಡಿಯಲು ನ್ಯಾಯಾಲಯಗಳಿಲ್ಲದಿದ್ದರೆ ಆ ಹಕ್ಕನ್ನು ಎಲ್ಲಾ ಜನರೂ ಪಡೆಯಲು ಅಸಾಧ್ಯ. ಅದಿಲ್ಲದೆ, ಕೆಲವರು ಮಾತ್ರ ಶಾಲೆಗೆ ಹೋಗುವಂತಾಗಿ ಮತ್ತೆ ಕೆಲವರನ್ನು ಬಿಟ್ಟುಬಿಡುವ ಸಾಧ್ಯತೆ ಇದೆ.

---

- ಸಾಮಾಜಿಕ ಹಕ್ಕುಗಳು ಎಲ್ಲರಿಗೂ ಸಮಾನತೆ ಮತ್ತು ಸ್ವೇಚ್ಛೆಯನ್ನು ಖಾತ್ರಿಗೊಳಿಸುತ್ತದೆ.
- ರಾಜಕೀಯ ಹಕ್ಕುಗಳು ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಹಾಗೂ ರಾಷ್ಟ್ರ, ರಾಜ್ಯ, ಸ್ಥಳೀಯ ಅಥವಾ ಸಮುದಾಯ ಮಟ್ಟದ ಆಡಳಿತದಲ್ಲಿ ಭಾಗವಹಿಸುವ ಹಕ್ಕನ್ನು ಖಾತ್ರಿಗೊಳಿಸುತ್ತದೆ.
- ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳು ಒಂದು ಒಳ್ಳೆಯ ಹಾಗೂ ಅರ್ಥಪೂರ್ಣ ಜೀವನವನ್ನು ನಡೆಸಲು ಬೇಕಾದ ಮೂಲಭೂತ ಅಗತ್ಯತೆಗಳನ್ನು ಖಾತ್ರಿಗೊಳಿಸುತ್ತವೆ. ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳು ಆರೋಗ್ಯಕರವಾದ, ನಿಷ್ಪಕ್ಷಪಾತವಾದ ಹಾಗೂ ನ್ಯಾಯಪೂರ್ಣವಾದ ಅಗತ್ಯತೆಗಳನ್ನು ಕಾರ್ಯಕ್ಷೇತ್ರದಲ್ಲಿ ಹಾಗೂ ಸಮುದಾಯದಲ್ಲಿ ನೀಡುವತ್ತ ಗಮನಕೊಟ್ಟರೆ, ಸಾಂಸ್ಕೃತಿಕ ಹಕ್ಕುಗಳು ಸಮುದಾಯಗಳಲ್ಲಿ ಅವರು ಜೀವಿಸುವ ರೀತಿಗೆ ಭದ್ರತೆ ಹಾಗೂ ಸಂರಕ್ಷಣೆಯನ್ನು ಒದಗಿಸುತ್ತದೆ.

---

**ಮಾನವ ಹಕ್ಕುಗಳು ಏಕೆ ಮಹತ್ವದ್ದು?**

ಅವು ಏಕೆ ಮಹತ್ವದ್ದೆಂದರೆ ಅವು ಪ್ರತಿಯೊಬ್ಬ ಮನುಷ್ಯನೂ ವಿಶೇಷ ವ್ಯಕ್ತಿಯಾಗಿದ್ದು ತನ್ನದೇ ಆದ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಹೊಂದಿದ್ದು ಯಾರೂ ಮತ್ತೊಬ್ಬ ವ್ಯಕ್ತಿಗಿಂತ ಕಡಿಮೆಯೂ ಅಲ್ಲ ಅಥವಾ ಹೆಚ್ಚೂ ಅಲ್ಲ ಎಂಬುದನ್ನು ಗುರುತಿಸುತ್ತವೆ. ಎಲ್ಲಾ ಮಾನವರೂ ಮುಕ್ತವಾಗಿ ಹಾಗೂ ಸಮಾನವಾಗಿ ಜನಿಸಿರುವರೆಂಬುದು ಮಾನವ ಹಕ್ಕುಗಳ ವಿಚಾರದ ತಳಹದಿಯಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಘನತೆಯಿಂದ ಜೀವಿಸಲು ಅರ್ಹತೆ ಹೊಂದಿದ್ದು ರಾಜ್ಯವಾಗಲಿ, ಸಮುದಾಯವಾಗಲಿ, ಕುಟುಂಬವಾಗಲಿ, ಸಮಾಜವಾಗಲಿ ನ್ಯಾಯಸಮ್ಮತವಲ್ಲದ ಅಥವಾ ಪಕ್ಷಪಾತದಿಂದ ನೋಡಲು ಯಾರಿಗೂ ಹಕ್ಕಿಲ್ಲ. ಮಾನವ ಹಕ್ಕುಗಳ ಅಂತರರಾಷ್ಟ್ರೀಯ ಪದ್ಧತಿಯು ಹಾಗೂ ನಮ್ಮದೇ ಆದ ಸಂವಿಧಾನವು ಎಲ್ಲಾ ವ್ಯಕ್ತಿಗಳ ಮಾನವ ಹಕ್ಕುಗಳನ್ನು ಸಮಾನವಾಗಿ ನೋಡಬೇಕೆಂದು ಒತ್ತಾಯಿಸುತ್ತವೆ.

**ಮಾನವ ಹಕ್ಕುಗಳ ವಿಶ್ವ ಘೋಷಣೆ ಎಂದರೇನು?**

ಮಾನವ ಹಕ್ಕುಗಳ ವಿಶ್ವ ಘೋಷಣೆಯೆಂದರೆ 1948ರಲ್ಲಿ ಭಾರತವೂ ಸೇರಿದಂತೆ, ಒಕ್ಕೂಟ ರಾಷ್ಟ್ರಗಳ ಸದಸ್ಯರು ಅಳವಡಿಸಿದ ಘೋಷಣೆ. ಅವು ಎರಡು ವಿಶ್ವ ಮಹಾ ಯುದ್ಧಗಳಿಂದ ಉಂಟಾದ ಅಪಾರ ಸಾವು ನೋವುಗಳು ಮುಂದೆಂದೂ ಮರುಕಳಿಸದಂತೆ ಮಾಡುವ ಸಲುವಾಗಿ ಹೊಸ ಪ್ರಪಂಚಕ್ಕೆ ನಾಂದಿಯಾಗುವಂತಹ ಸಿದ್ಧಾಂತಗಳಿರುವ ಹೇಳಿಕೆಗಳು.

ವಿಶ್ವ ಘೋಷಣೆಯಲ್ಲಿ 'ಪ್ರಪಂಚದಲ್ಲಿ ಶಾಂತಿ, ನ್ಯಾಯ ಹಾಗೂ ಸ್ವಾತಂತ್ರ್ಯವನ್ನು ಸ್ಥಾಪಿಸಲು ಮಾನವ ಕುಟುಂಬದ ಎಲ್ಲಾ ಸದಸ್ಯರಲ್ಲೂ ಅಡಕವಾಗಿರುವ ಘನತೆ ಹಾಗೂ ಸಮಾನವಾದ ಮತ್ತು ಬೇರ್ಪಡಿಸಲಾಗದಂತಹ ಹಕ್ಕುಗಳನ್ನು ಗುರುತಿಸುವುದು' ಎಂದು ತಿಳಿಸಲಾಗಿದೆ. ಆದಕಾರಣ ಪ್ರತಿಯೊಂದು ರಾಜ್ಯವೂ ಪ್ರತಿಯೊಬ್ಬ ವ್ಯಕ್ತಿಯ ಮಾನವ ಹಕ್ಕುಗಳನ್ನು ಸಂರಕ್ಷಿಸುವ ಕರ್ತವ್ಯವನ್ನು ಈ ಘೋಷಣೆಯಲ್ಲಿ ತಿಳಿಸಲಾಗಿದ್ದು ಎಲ್ಲಾ ರಾಷ್ಟ್ರಗಳೂ ಅನುಸರಿಸಬಹುದಾದಂತಹ ತತ್ವಗಳನ್ನು ಅಥವಾ ಮಾನದಂಡವನ್ನು ವಿಧಿಸುತ್ತವೆ.

ಸಮಯವು ಕಳೆದಂತೆ, ವಿಶ್ವ ಘೋಷಣೆಯಲ್ಲಿರುವ ವಿಚಾರಗಳನ್ನು ನಿರಂತರವಾಗಿ ಪರಿಷ್ಕರಿಸಲಾಗುತ್ತಿದ್ದು ಅದರಲ್ಲಿ ನಾಗರೀಕ ಹಾಗೂ ರಾಜಕೀಯ ಹಕ್ಕುಗಳನ್ನು ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳು, ಮಹಿಳೆಯರ ಹಕ್ಕುಗಳು, ಮಕ್ಕಳ ಹಕ್ಕುಗಳು, ಚಿತ್ರಹಿಂಸೆಯ ವಿರುದ್ಧದ ಹಕ್ಕುಗಳು ಹಾಗೂ ಇನ್ನೂ ಹಲವಾರು ಹಕ್ಕುಗಳನ್ನು ಖಾತ್ರಿಗೊಳಿಸುವ ಪ್ರತ್ಯೇಕ ದಾಖಲೆಗಳನ್ನು ಅಳವಡಿಸಲಾಗಿದೆ.

ಅಂತರರಾಷ್ಟ್ರೀಯ ಸಮುದಾಯವು ಈ ದಾಖಲೆಗಳಲ್ಲಿರುವ ಮಾನದಂಡಗಳನ್ನು ವ್ಯಾಪಕವಾಗಿ ಒಪ್ಪಿಕೊಂಡಿದ್ದು ಹಲವಾರು ರಾಷ್ಟ್ರಗಳು ಅದರ ಮೇಲೆ ಸಹಿ ಹಾಕಿವೆ. ಹಲವಾರು ರಾಷ್ಟ್ರಗಳು ಮಾಡಿಕೊಳ್ಳುವ ಈ ರೀತಿಯ ಒಪ್ಪಂದಗಳಿಗೆ ಒಡಂಬಡಿಕೆಗಳು ಎಂದು ಕರೆಯಲಾಗುತ್ತದೆ. ಒಮ್ಮೆ ಒಂದು ರಾಷ್ಟ್ರವು ಒಂದು ಒಡಂಬಡಿಕೆಗೆ ಸಹಿ ಹಾಕಿದರೆ ಆ

ಒಡಂಬಡಿಕೆಯಲ್ಲಿ ಖಾತ್ರಿಗೊಳಿಸಲಾದ ಹಕ್ಕುಗಳನ್ನು ಶಾಸನ ರೂಪದಲ್ಲಿ ಜಾರಿಗೆ ತರುವುದು ಆ ರಾಷ್ಟ್ರದ ಕರ್ತವ್ಯವಾಗುತ್ತದೆ.

---

**ಅಂತರರಾಷ್ಟ್ರೀಯ ಒಡಂಬಡಿಕೆಗಳು ಎಲ್ಲರಿಗೂ ಏಕೆ ಮಹತ್ವವಾದದ್ದು?**

"ಅಂತರರಾಷ್ಟ್ರೀಯ ಒಡಂಬಡಿಕೆ ಅಥವಾ ಒಪ್ಪಂದ"ವು ಹಲವು ಅಥವಾ ಎಲ್ಲಾ ರಾಷ್ಟ್ರಗಳು ಸ್ಥಿರೀಕರಿಸಿರುವಂತಹ (ಅಥವಾ ಅನುಮೋದಿಸಿರುವಂತಹ) ಕರಾರಾಗಿದೆ. ಒಮ್ಮೆ ಒಂದು ಒಪ್ಪಂದವನ್ನು ಒಂದು ರಾಷ್ಟ್ರವು ಸ್ಥಿರೀಕರಿಸಿದರೆ, ಅದನ್ನು ಪಾಲಿಸಲೇಬೇಕಾಗುತ್ತದೆ. ಅಂದರೆ, ಸರ್ಕಾರವು ಒಪ್ಪಂದದಲ್ಲಿರುವ ಎಲ್ಲಾ ಅಗತ್ಯತೆಗಳನ್ನು ಪೂರೈಸಿ ಅದರ ಪ್ರಕಾರ ನಡೆದುಕೊಳ್ಳಲೇಬೇಕಾಗುತ್ತದೆ. ರಾಷ್ಟ್ರೀಯ ಅಥವಾ ದೇಶೀಯ ಶಾಸನಗಳು ಒಡಂಬಡಿಕೆಗಳಲ್ಲಿರುವ ಅಗತ್ಯತೆಗಳಿಗಿಂತ ಕಡಿಮೆ ಮಟ್ಟದ್ದಾಗಿರುವುದಿಲ್ಲ. ಒಂದು ರಾಷ್ಟ್ರದ ಕಾನೂನು ಮತ್ತು ಆಚರಣೆಗಳು ಒಡಂಬಡಿಕೆಗಳಿಗಿಂತ ಭಿನ್ನವಾಗಿರುವುದಿಲ್ಲ. ನ್ಯಾಯಾಲಯಗಳು ದೇಶೀಯ ಕಾನೂನುಗಳನ್ನು ಒಡಂಬಡಿಕೆಗಳಲ್ಲಿರುವ ಅಂಶಗಳಿಗೆ ತಕ್ಕ ಹಾಗೆ ಅರ್ಥೈಸಬೇಕೆಂದೂ ಸಹ ವ್ಯಕ್ತವಾಗುತ್ತದೆ. ಒಂದು ಒಪ್ಪಂದ ಅಥವಾ ಒಡಂಬಡಿಕೆಯನ್ನು ಸ್ಥಿರೀಕರಿಸುವ ಪ್ರತಿಯೊಂದು ದೇಶವೂ, ಕಾಲ ಕಾಲಕ್ಕೆ, ತನ್ನ ಪ್ರಗತಿಯನ್ನು ಅಂತರರಾಷ್ಟ್ರೀಯ ಸಮುದಾಯಕ್ಕೆ ಒಕ್ಕೂಟ ರಾಷ್ಟ್ರಗಳ ವ್ಯವಸ್ಥೆಯ ಮೂಲಕ ವರದಿ ಮಾಡತಕ್ಕದ್ದು.

---

**ಭಾರತವು ಇಂತಹ ಯಾವುದಾದರೂ ಒಡಂಬಡಿಕೆಗೆ ಸಹಿ ಹಾಕಿದೆಯೇ?**

ಮಾನವ ಹಕ್ಕುಗಳ ಎರಡು ಮುಖ್ಯ ಅಂತರರಾಷ್ಟ್ರೀಯ ಒಡಂಬಡಿಕೆಗಳಿಗೆ, ಅಂದರೆ – ಅಂತರರಾಷ್ಟ್ರೀಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಒಡಂಬಡಿಕೆ [International Covenant on Economic, Social and Cultural Rights (ICESCR)] ಮತ್ತು ಅಂತರರಾಷ್ಟ್ರೀಯ ನಾಗರೀಕ ಮತ್ತು ರಾಜಕೀಯ ಹಕ್ಕುಗಳು [International Covenant on Civil and Political Rights (ICCPR)]. ಇವೆರಡೂ ವಿಶ್ವ ಮಾನವ ಹಕ್ಕುಗಳ ಘೋಷಣೆಯೊಡನೆ ಸೇರಿದರೆ ಆಗುವ ಅಂತರರಾಷ್ಟ್ರೀಯ ಹಕ್ಕುಗಳ ವಿಧೇಯಕಕ್ಕೆ ಭಾರತವು ಸಹಿ ಹಾಕಿ ಸ್ಥಿರೀಕರಿಸಿದೆ.

ಭಾರತವು ಸ್ಥಿರೀಕರಿಸಿ ಸಹಿ ಹಾಕಿರುವ ಇತರ ಪ್ರಮುಖ ಅಂತರರಾಷ್ಟ್ರೀಯ ಒಡಂಬಡಿಕೆಗಳೆಂದರೆ:

- ಎಲ್ಲಾ ರೀತಿಯ ವರ್ಣಭೇದವನ್ನು ನಿರ್ಮೂಲನ ಮಾಡುವ ಅಂತರರಾಷ್ಟ್ರೀಯ ಒಪ್ಪಂದ [International Covenant on Elimination of all forms of Racial Discrimination (ICERD)]
- ಮಹಿಳೆಯರ ವಿರುದ್ಧ ತೋರುವ ಎಲ್ಲಾ ರೀತಿಯ ಭೇದಭಾವವನ್ನು ನಿರ್ಮೂಲನ ಮಾಡುವ ಒಪ್ಪಂದ [Convention against the Elimination of all Forms of Discrimination against Women (CEDAW)]
- ಮಕ್ಕಳ ಹಕ್ಕುಗಳ ಬಗ್ಗೆ ಒಪ್ಪಂದ [Convention on Rights of the Child (CRC)]

1997ರಲ್ಲಿ ಭಾರತವು ಚಿತ್ರಹಿಂಸೆ ಹಾಗೂ ಇತರ ಕ್ರೂರ, ಅಮಾನವೀಯ ಅಥವಾ ಕೀಳು ದರ್ಜೆಯ ವರ್ತನೆ ಅಥವಾ ಶಿಕ್ಷೆ ನೀಡುವ ವಿರುದ್ಧದ [Convention against Torture and Other Cruel, Inhuman or Degrading Treatment or Punishment (CAT)] ಒಪ್ಪಂದಕ್ಕೆ ಸಹಿ ಹಾಕಿದೆಯಾದರೂ ಅದನ್ನು ಇನ್ನೂ ಸ್ಥಿರೀಕರಿಸಿಲ್ಲ. ಆದರೆ ಪೊಲೀಸರು ಅಥವಾ ಭದ್ರತಾ ಪಡೆಗಳವರು ಅಥವಾ ಬೇರೆ ಯಾರಾದರೂ ಜನರಿಗೆ ಹೊಡೆಯಬಹುದು, ಚಿತ್ರಹಿಂಸೆ ನೀಡಬಹುದು ಅಥವಾ ಅವಮಾನ ಮಾಡಬಹುದು ಎಂಬುದು ಇದರರ್ಥವಲ್ಲ. ಮಾನಸಿಕ ಅಥವಾ ದೈಹಿಕ ಕಿರುಕುಳ ನೀಡಿದರೆ ಅದರಿಂದ ಸಂವಿಧಾನದಲ್ಲಿ ಹಾಗೂ ಅಂತರರಾಷ್ಟ್ರೀಯ ಹಕ್ಕುಗಳ ವಿಧೇಯಕದಲ್ಲಿ ಖಾತ್ರಿಪಡಿಸಿರುವ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತವೆ. ಅದು ಭಾರತೀಯ ದಂಡ ಸಂಹಿತೆಯಲ್ಲಿ ಅಪರಾಧವಾಗುತ್ತದೆ ಹಾಗೂ ಯಾರಾದರೂ ಅದರಲ್ಲಿ ಭಾಗಿಯಾದರೆ ಕಾನೂನಿನ ದೃಷ್ಠಿಯಲ್ಲಿ ಅವರನ್ನು ಅಪರಾಧಿ ಎಂದು ಕರೆಯಲಾಗುತ್ತದೆ.

---

ಒಂದು ರಾಷ್ಟ್ರವು ಅಂತರರಾಷ್ಟ್ರೀಯ ಒಪ್ಪಂದಗಳನ್ನು ಸ್ಥಿರೀಕರಿಸಿದರೆ ಅಂತರರಾಷ್ಟ್ರೀಯ ಸಮುದಾಯದಲ್ಲಿ ಅದನ್ನು ಜವಾಬ್ದಾರಿಯುತ ಸದಸ್ಯ ಎಂದು ಗುರುತಿಸಲ್ಪಟ್ಟು ಅದರಿಂದ ವಿಶ್ವಾಸಾರ್ಹತೆಯನ್ನು ಗಳಿಸುತ್ತದೆ.

**ಅಂತರರಾಷ್ಟ್ರೀಯ ಮಾನವ ಹಕ್ಕುಗಳ ತತ್ವಗಳನ್ನು ಭಾರತ ದೇಶದಲ್ಲಿ ಗುರುತಿಸಲಾಗಿದೆಯೇ?**

---

1993ರ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮವು ಮಾನವ ಹಕ್ಕುಗಳನ್ನು "ಭಾರತದ ಸಂವಿಧಾನದಲ್ಲಿ ಅಥವಾ ಅಂತರರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಖಾತ್ರಿಗೊಳಿಸಿರುವ ಹಾಗೂ ಭಾರತದ ನ್ಯಾಯಾಲಯಗಳಲ್ಲಿ ಜಾರಿಗೊಳಿಸುವಂತಹ ವ್ಯಕ್ತಿಗಳ ಬದುಕಿನ, ಸ್ವಾತಂತ್ರ್ಯದ, ಸಮಾನತೆಯ ಹಾಗೂ ಘನತೆಯ ಹಕ್ಕುಗಳು" ಎಂದು ವರ್ಣಿಸಲಾಗಿದೆ.

---

ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಲ್ಪಟ್ಟಿರುವ ಮಾನವ ಹಕ್ಕುಗಳ ತತ್ವಗಳು ಹಾಗೂ ಮಾನದಂಡಗಳಿಗೆ ಭಾರತದಲ್ಲಿ ಒಂದು ವಿಶೇಷ ಹಾಗೂ ಮಹತ್ವದ ಸ್ಥಾನವಿದೆ. ನಮ್ಮ ನೆಲದ ಅತ್ಯುನ್ನತ ಕಾನೂನಾದ ಸಂವಿಧಾನದಲ್ಲಿ ಅವುಗಳನ್ನು ಸಂರಕ್ಷಿಸಲಾಗಿದೆ. ವಿಶ್ವ ಘೋಷಣೆಯಲ್ಲಿ ಗುರುತಿಸಿರುವ ಹಕ್ಕುಗಳು ಭಾರತದ ಸಂವಿಧಾನದಲ್ಲಿ ಪ್ರತಿಬಿಂಬಿತವಾಗಿವೆ. ಕೆಲವು ಮೂಲ ಭೂತ ಹಕ್ಕುಗಳ ಅಧ್ಯಾಯದಲ್ಲಿದ್ದು ಮತ್ತೆ ಕೆಲವು ರಾಜ್ಯ ನೀತಿಯ ನಿರ್ದೇಶಕ ತತ್ವಗಳಲ್ಲಿ ಅಡಕವಾಗಿವೆ. ಉದಾಹರಣೆಗೆ, ವಿಶ್ವ ಘೋಷಣೆಯ 25ನೇ ಅನುಚ್ಛೇದದಲ್ಲಿ ಪ್ರತಿಯೊಬ್ಬರಿಗೂ ಅವರ ಮತ್ತು ಅವರ ಕುಟುಂಬದ ಆರೋಗ್ಯ ಮತ್ತು ಸ್ವಾಸ್ಥ್ಯಕ್ಕೆ ಸಾಕಾಗುವಷ್ಟು ಜೀವನದ ಮಟ್ಟವನ್ನು ಹೊಂದುವ ಹಕ್ಕಿರುತ್ತದೆಂದು ತಿಳಿಸಲಾಗಿದೆ. ಈ ಹಕ್ಕನ್ನು ಭಾರತ ಸಂವಿಧಾನದ 47ನೇ ಅನುಚ್ಛೇದದಲ್ಲಿ ನಿರ್ದೇಶಕ ತತ್ವವೆಂದು ಸೇರಿಸಲಾಗಿದ್ದು, ಅದರಲ್ಲಿ ಸಾರ್ವಜನಿಕ ಆರೋಗ್ಯ ಹಾಗೂ ಪೌಷ್ಟಿಕ ಆಹಾರದ ಮಟ್ಟವನ್ನು ಹೆಚ್ಚಿಸಿ ಜೀವನದ ಮಟ್ಟವನ್ನು ಹೆಚ್ಚಿಸುವಂತೆ ನೋಡಿಕೊಳ್ಳುವುದು ರಾಜ್ಯದ ಜವಾಬ್ದಾರಿ ಎಂದು ಹೇಳಲಾಗಿದೆ.

ಸಂವಿಧಾನವಲ್ಲದೆ, ಕೆಲವು ಮಾನವ ಹಕ್ಕುಗಳನ್ನು ಹಲವಾರು ಶಾಸನಗಳಲ್ಲಿ ಸಂರಕ್ಷಿಸಲಾಗಿದೆ. ಉದಾಹರಣೆಗೆ: 1995ರ ನಾಗರಿಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1961ರ ವರದಕ್ಷಿಣೆ ನಿಷೇಧ ಅಧಿನಿಯಮ; 1976ರ ಜೀತದಾಳು ಪದ್ಧತಿ (ರದ್ದತಿ) ಅಧಿನಿಯಮ, 1986ರ ಬಾಲ ಕಾರ್ಮಿಕ (ರದ್ದತಿ ಹಾಗೂ ನಿಯಂತ್ರಣ) ಅಧಿನಿಯಮ, 1989ರ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ವರ್ಗಗಳ (ದೌರ್ಜನ್ಯ ತಡೆ) ಅಧಿನಿಯಮ ಇತ್ಯಾದಿ.

---

## ನಮ್ಮ ಸಂವಿಧಾನದಲ್ಲಿರುವ ಮಾನವ ಹಕ್ಕುಗಳ ವಿಶೇಷ ಸ್ಥಾನ

ಸಂವಿಧಾನವನ್ನು ಬರೆದಾಗ, ಮಾನವ ಹಕ್ಕುಗಳನ್ನು ಮೂಲ ಭೂತ ಹಕ್ಕುಗಳು ಮತ್ತು ರಾಜ್ಯ ನೀತಿಯ ನಿರ್ದೇಶನ ತತ್ವವಿರುವ ಭಾಗ 3 ಮತ್ತು ಭಾಗ 4ರಲ್ಲಿ ಸೇರಿಸಲಾಗಿತ್ತು. ಅವುಗಳೆಲ್ಲವೂ ಸೇರಿ 'ಸಂವಿಧಾನದ ಪ್ರಜ್ಞೆ' ಎಂದು ರೂಪುಗೊಂಡಿವೆ. ನ್ಯಾಯಸಮ್ಮತವಾದ ಸಾಮಾಜಿಕ ವ್ಯವಸ್ಥೆಯನ್ನು ಎಲ್ಲರಿಗೂ ದೊರಕಿಸಿಕೊಡುವ ಸಲುವಾಗಿ ನಾಗರೀಕ ಹಾಗೂ ರಾಜಕೀಯ ಸ್ವಾತಂತ್ರ್ಯಗಳನ್ನು ಒಟ್ಟಿಗೆ ಸೇರಿಸಬೇಕೆಂದು ಸಂವಿಧಾನದ ಚಿಂತಕರು ಭಾವಿಸಿದರು. ನಿರ್ದೇಶಕ ತತ್ವಗಳ ಉದ್ದೇಶ ಎಲ್ಲಾ ನೀತಿಗಳು ಮತ್ತು ಕಾನೂನು ರಚನೆಗಳಿಗೆ ಮಾರ್ಗದರ್ಶನ ನೀಡುವುದಾಗಿದೆ; ಬದಲಾವಣೆಯ ದಿಕ್ಸೂಚಿಯಾಗುವುದು; ಮತ್ತು ರಾಜ್ಯವು ಯಾವ ಗುರಿಯತ್ತ ಸಾಗಬೇಕೆಂಬುದನ್ನು ತಿಳಿಸುವುದಾಗಿದೆ. ನಿರ್ದೇಶಕ ತತ್ವಗಳು ಮೂಲಭೂತ ಹಕ್ಕುಗಳಿಗಿಂತ ಯಾವುದೇ ರೀತಿಯಲ್ಲಿ ಕಡಿಮೆ ಮಹತ್ವವನ್ನು ಹೊಂದಿರುವುದಿಲ್ಲವಾದರೂ ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಲ್ಲಿ ಒಬ್ಬ ವ್ಯಕ್ತಿ ರಾಜ್ಯವನ್ನು ನ್ಯಾಯಾಲಯದ ಮುಂದೆ ಕರೆದುಕೊಂಡು ಹೋಗಬಹುದಾಗಿದ್ದು ಅದೇ ರೀತಿಯ ನಿರ್ದೇಶಕ ತತ್ವಗಳಲ್ಲಿ ತಿಳಿಸಲಾದ ಯಾವುದಾದರೂ ನೀತಿಯ ಉಲ್ಲಂಘನೆಯಾದಲ್ಲಿ ವ್ಯಕ್ತಿಗಳು ರಾಜ್ಯವನ್ನು ನ್ಯಾಯಾಲಯದ ಮುಂದೆ ಕರೆದುಕೊಂಡು

ಹೋಗಲು ಸಾಧ್ಯವಿಲ್ಲ. ಏನೇ ಆದರೂ ನಿರ್ದೇಶಕ ತತ್ವಗಳು ನಿರ್ಜೀವ ಸಿದ್ಧಾಂತಗಳಲ್ಲ, ಆದರೆ ಹೊಸದಾದ ಹಕ್ಕುಗಳು ಸೃಜನೆಯಾಗುವುದಕ್ಕೆ ನಾಂದಿಯಾಗಿದ್ದು ಉದಾ: ಶಿಕ್ಷಣದ ಹಕ್ಕಿನಿಂದ ಆಹಾರದ ಹಕ್ಕು ಅಭಿವೃದ್ಧಿಯಾಗುತ್ತಿದೆ.

---

**ಮೂಲಭೂತ ಹಕ್ಕುಗಳೆಂದರೇನು?**

ಅವು ಸಂವಿಧಾನದ ಭಾಗ 3ರಲ್ಲಿ ಭರವಸೆ ನೀಡಿ ಸಂರಕ್ಷಿಸಲಾಗಿರುವ ಮಾನವ ಹಕ್ಕುಗಳು. ಅವುಗಳು ಎಷ್ಟು ಪ್ರಮುಖವಾದವು ಎಂದರೆ ಅವುಗಳನ್ನು ಅನುಭವಿಸುವುದರಲ್ಲಿ ಅಡ್ಡಿ ಬರುವಂತಹ ಯಾವುದೇ ಶಾಸನವನ್ನು ಸಂಸತ್ತು ಅಥವಾ ರಾಜ್ಯ ಶಾಸನಸಭೆಗಳು ರಚಿಸುವುದನ್ನಾಗಲಿ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳು ಯಾವುದೇ ಆದೇಶ ಹೊರಡಿಸುವುದನ್ನಾಗಲಿ ಅಥವಾ ಬೇರಾವುದಾದರೂ ರೀತಿಯಲ್ಲಿ ಅಡ್ಡಿಪಡಿಸುವುದನ್ನಾಗಲಿ ಸಂವಿಧಾನವು ನಿಷೇಧಿಸುತ್ತದೆ.

ಮನುಷ್ಯನ ಘನತೆ, ಭದ್ರತೆ, ಸಮಾನತೆ ಮತ್ತು ಸ್ವಾತಂತ್ರ್ಯ ಇವುಗಳ ಮಧ್ಯೆ ಪ್ರವೇಶ ಮಾಡದಂತೆ ರಕ್ಷಿಸುವುದೇ ಮೂಲಭೂತ ಹಕ್ಕುಗಳ ಉದ್ದೇಶವಾಗಿದೆ. ರಾಜ್ಯವು ಅಥವಾ ಅದರ ಪ್ರತಿನಿಧಿಗಳು ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ತಡೆಗಟ್ಟಲು ರಚಿಸಿರುವ ಭದ್ರತಾ

ಕ್ರಮಗಳನ್ನಲ್ಲದೆ, ಖಾಸಗಿ ವ್ಯಕ್ತಿಗಳಿಂದ ವ್ಯಕ್ತಿಗಳ ಹಕ್ಕುಗಳ ಉಲ್ಲಂಘನೆಯಾಗುವುದರಿಂದ ರಕ್ಷಿಸಲು ರಾಜ್ಯವು ಉದಾಸೀನ ತೋರಿದರೆ ರಾಜ್ಯವನ್ನು ಹೊಣೆಗಾರನನ್ನಾಗಿ ಮಾಡುವುದು.

**ಕೆಲವು ಹಕ್ಕುಗಳನ್ನು ಮೂಲ ಭೂತ ಹಕ್ಕುಗಳೆಂದು ಖಾತರಿಗೊಳಿಸಲಾಗಿವೆ:**

- ಸಮಾನತೆಯ ಹಕ್ಕು: ರಾಜ್ಯವು ಎಲ್ಲರನ್ನೂ ಸಮಾನವಾಗಿ ನೋಡಬೇಕು ಹಾಗೂ ಸಮಾನವಾಗಿ ಎಲ್ಲರಿಗೂ ರಕ್ಷಣೆ ನೀಡಬೇಕು ಎನ್ನುವುದನ್ನು ಖಾತರಿಪಡಿಸುತ್ತದೆ. ಅಂದರೆ, ಯಾವುದೇ ಒಬ್ಬ ನಾಗರೀಕನಿಗೆ ಸಲ್ಲಬೇಕಾದ ಸಮಾನತೆಯ ಅವಕಾಶಗಳನ್ನು ವಂಚಿಸುವುದಾಗಲಿ ಅಥವಾ ತಾರತಮ್ಯ ವನ್ನಾಗಲಿ ಮಾಡುವಂತಿಲ್ಲ. ಇದಕ್ಕಾಗಿ ರಾಜ್ಯವು ಸಮಾಜದ ದುರ್ಬಲವರ್ಗಗಳ ಹಾಗೂ ಕಡು ಬಡತನದಲ್ಲಿರುವ ಜನರಿಗಾಗಿ ರಾಜ್ಯವು ವಿಶೇಷ ಅವಕಾಶಗಳನ್ನು ಕಲ್ಪಿಸಬಹುದು. ಇನ್ನೊಂದು ಅರ್ಥದಲ್ಲಿ ಯಾರನ್ನೇ ಆಗಲಿ ಧರ್ಮ, ಜಾತಿ, ಲಿಂಗ ಅಥವಾ ಜನ್ಮ ಸ್ಥಳದ ಆಧಾರದ ಮೇಲೆ ರಸ್ತೆಗಳು, ಒಗೆಯುವ ಸ್ಥಳ, ಬಾವಿ, ಉಪಹಾರಗೃಹ ಅಥವಾ ಅಂಗಡಿಗೆ ಪ್ರವೇಶ ಮಾಡದಂತೆ ತಡೆಗಟ್ಟುವ ಅಥವಾ ಅಸ್ಪೃಶ್ಯನೆಂದು ಪರಿಗಣಿಸುವ ಹಾಗೆ ಮಾಡದಿರುವಂತೆ ನೋಡಿಕೊಳ್ಳುವುದನ್ನು ರಾಜ್ಯವು ಖಚಿತಪಡಿಸುವುದು.
- ಸ್ವಾತಂತ್ರ್ಯದ ಹಕ್ಕು ನಾಗರೀಕರಿಗೆ ಮುಕ್ತವಾಗಿ ಮಾತನಾಡಲು, ಮುಕ್ತವಾಗಿ ಬರೆಯಲು, ಮುಕ್ತವಾಗಿ ಮಾಹಿತಿಯನ್ನು ಪಡೆಯಲು, ರಾಷ್ಟ್ರದ ಯಾವುದೇ ಭಾಗಕ್ಕೆ ಪ್ರವಾಸ ಮಾಡಿ ಅಲ್ಲಿ ನೆಲೆಸಲು; ತಾವೇ ಆಯ್ಕೆ ಮಾಡಿಕೊಂಡ ವ್ಯಾಪಾರ ಅಥವಾ ವೃತ್ತಿಯನ್ನು ಕೈಗೆತ್ತಿಕೊಳ್ಳಲು; ಒಕ್ಕೂಟಗಳು ಅಥವಾ ಸಂಘಗಳನ್ನು ರಚಿಸಲು; ಶಾಂತಿಯುತ ಮೆರವಣಿಗೆಗಳನ್ನು ಅಥವಾ ಪ್ರತಿಭಟನೆಯನ್ನು ನಡೆಸಲು; ಮುಷ್ಕರ ಅಥವಾ

ಶಾಂತಿಯುತವಾಗಿ ಸರ್ಕಾರದ ನ್ಯಾಯಸಮ್ಮತವಲ್ಲದ ನೀತಿಗಳನ್ನು ಪ್ರತಿಭಟಿಸಲು ಅವಕಾಶ ಕಲ್ಪಿಸುವುದು.

- ಬದುಕುವ ಮತ್ತು ವೈಯುಕ್ತಿಕ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬ ವ್ಯಕ್ತಿಗೂ ಘನತೆಯ ಮತ್ತು ದೈಹಿಕ ಭದ್ರತೆಯನ್ನು ಒದಗಿಸುವ ಭರವಸೆಯನ್ನು ನೀಡುತ್ತದೆ. ಅದು ಎಲ್ಲರಿಗೂ ನ್ಯಾಯವನ್ನು ಒದಗಿಸುವ ಭರವಸೆಯನ್ನು ನೀಡುವುದಲ್ಲದೆ ನ್ಯಾಯಸಮ್ಮತವಾದ ವಿಚಾರಣೆ ಮತ್ತು ಕಾನೂನಿನ ಕಾರ್ಯವಿಧಾನದ ವಿನಹ ಯಾರ ಸ್ವಾತಂತ್ರ್ಯದ ಹಕ್ಕನ್ನೂ ಕಸಿದುಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸುತ್ತದೆ. ಜೀವಿಸುವ ಹಕ್ಕಿನಿಂದಾಗಿ ಶುದ್ಧವಾದ ಹಾಗೂ ಆರೋಗ್ಯಕರ ವಾತಾವರಣ, ಜೀವನೋಪಾಯದ ದಾರಿ, ಶಿಕ್ಷಣ ಮುಂತಾದ ಉತ್ತಮ ಹಾಗೂ ಗೌರವಯುತ ಜೀವನ ನಡೆಸಲು ಬೇಕಾದ ಮೂಲಭೂತ ಅಗತ್ಯತೆಗಳನ್ನು ವಾಸ ಮಾಡುವ ಎಲ್ಲರಿಗೂ ಒದಗಿಸುವ ಭಾಧ್ಯತೆಯನ್ನು ರಾಜ್ಯದ ಮೇಲೆ ಹೊರಿಸುತ್ತದೆ.
- ಶೋಷಣೆಯ ವಿರುದ್ಧದ ಹಕ್ಕು ದುರ್ಬಲ ವರ್ಗದವರಿಂದ ಮತ್ತು ತುಳಿತಕ್ಕೆ ಒಳಗಾದವರಿಂದ ಬಲವಂತವಾಗಿ ಕೆಲಸ ಮಾಡಿಸುವುದು ಅಥವಾ ಅವರನ್ನು ಮಾರಾಟ ಮಾಡುವುದರಿಂದ ರಕ್ಷಿಸುತ್ತದೆ.
- ಧರ್ಮ ಸ್ವಾತಂತ್ರ್ಯದ ಹಕ್ಕು ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಧರ್ಮವನ್ನು ಪ್ರಚಾರ ಮಾಡಲು, ಆಚರಣೆ ಮಾಡಲು, ವೃತ್ತಿಯಾಗಿ ತೆಗೆದುಕೊಳ್ಳಲು ಹಾಗೂ ಆಯ್ಕೆ ಮಾಡಿಕೊಳ್ಳುವ ಹಕ್ಕಿನ ಭರವಸೆಯನ್ನು ನೀಡುತ್ತದೆ ಹಾಗೂ ಧಾರ್ಮಿಕ ಗುಂಪುಗಳು ಸಂಸ್ಥೆಗಳನ್ನು ಸ್ಥಾಪಿಸಿ ಅವರ ಧರ್ಮವನ್ನು ಅಭಿವೃದ್ಧಿಪಡಿಸಲು ಅನುಮತಿ ನೀಡಿ

ರಾಜ್ಯದ ಮಧ್ಯಪ್ರವೇಶವಿಲ್ಲದೆ ತಮ್ಮ ವ್ಯವಹಾರಗಳನ್ನು ತಾವೇ ನಿಭಾಯಿಸುವ ಸ್ವಾತಂತ್ರ್ಯವನ್ನು ನೀಡುತ್ತದೆ.

- ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳು ಜನರಿಗೆ ತಮ್ಮ ಭಾಷೆ, ಸಂಸ್ಕೃತಿ ಹಾಗೂ ಬದುಕುವ ರೀತಿಯನ್ನು ಸಂರಕ್ಷಿಸಿಕೊಂಡು ಕಾಪಾಡಿಕೊಳ್ಳುವ ಭರವಸೆಯನ್ನು ನೀಡುತ್ತವೆ. ಧಾರ್ಮಿಕ ಅಥವಾ ಭಾಷಾ ಅಲ್ಪ ಸಂಖ್ಯಾತರು ತಮ್ಮದೇ ಆದ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳನ್ನು ನಡೆಸಲು ಅವರಿಗೆ ಅಧಿಕಾರವಿದ್ದು ರಾಜ್ಯವು ಯಾವುದೇ ರೀತಿಯ ತಾರತಮ್ಯ ಮಾಡದಂತೆ ಅವರನ್ನು ರಕ್ಷಿಸುವ ಭರವಸೆಯನ್ನು ನೀಡುತ್ತದೆ.
- ಸಂವಿಧಾನದಿಂದ ಪರಿಹಾರಗಳ ಹಕ್ಕು ರಾಜ್ಯದಿಂದ ಸಂರಕ್ಷಿಸಲಾಗದ ಅಥವಾ ಮೂಲಭೂತ ಹಕ್ಕುಗಳು ಉಲ್ಲಂಘನೆಯಾದ ಪ್ರತಿಯೊಬ್ಬ ವ್ಯಕ್ತಿಯೂ ಸರ್ವೋಚ್ಛ ರಕ್ಷಣೆಗಾಗಿ ನ್ಯಾಯಾಲಯದ ಮೊರೆ ಹೋಗುವ ಹಕ್ಕನ್ನು ಖಾತ್ರಿಗೊಳಿಸುತ್ತದೆ. ತಪ್ಪಿತಸ್ಥರನ್ನು ಶಿಕ್ಷಿಸಿ ತಕ್ಷಣ ಮೂಲಭೂತ ಹಕ್ಕಿನ ಉಲ್ಲಂಘನೆಯನ್ನು ತಡೆಗಟ್ಟಲು ತಕ್ಷಣ ಕ್ರಮ ತೆಗೆದುಕೊಳ್ಳಲು ಸರ್ವೋಚ್ಛ ನ್ಯಾಯಾಲಯಕ್ಕೆ ಅಧಿಕಾರವನ್ನು ನೀಡುತ್ತದೆ.

---

## <u>ಮೂಲಭೂತ ಹಕ್ಕುಗಳ ಕಮಾನಿನ (Anchor) ವಿಸ್ತಾರ ಹಾಗೂ ಸ್ಥಾನ</u>

ಸರ್ಕಾರದ ಪ್ರತಿಯೊಂದು ವಿಭಾಗವೂ, ಅವು ಎಷ್ಟೇ ಪ್ರಬಲವಾಗಿರಲಿ ಹಾಗೂ ಪ್ರತಿಯೊಬ್ಬ ನಾಗರೀಕನು, ಆತ ಎಷ್ಟೇ ಸಿರಿವಂತನಾಗಿರಲಿ ಅಥವಾ ಬಡವನಾಗಿರಲಿ ಸಂವಿಧಾನದಲ್ಲಿ ಅಡಕವಾಗಿರುವ ಉಪಬಂಧಗಳೆಲ್ಲವನ್ನೂ ಗೌರವಿಸಬೇಕು. ಸಂವಿಧಾನದಲ್ಲಿ ಪ್ರತಿಯೊಬ್ಬ ಮನುಷ್ಯನ ಮಾನವ ಹಕ್ಕುಗಳನ್ನು ಸಂರಕ್ಷಿಸುವಂತೆಯೂ ಹಾಗೂ ಈ ಹಕ್ಕುಗಳನ್ನು

ಕಡಿಮೆ ಮಾಡುವುದಾಗಲಿ ಅಥವಾ ಅದರ ವಿರುದ್ಧ ಹೋಗುವಂತಹ ಯಾವುದೇ ಕೆಲಸವನ್ನು ರಾಜ್ಯವಾಗಲಿ ಅಥವಾ ಅದರ ಅಧೀನದಲ್ಲಿರುವ ಅಧಿಕಾರಿಗಳಾಗಲಿ ಮಾಡಬಾರದೆಂದು ಸೂಚಿಸಲಾಗಿದೆ. ವಾಸ್ತವವಾಗಿ ಕಾನೂನಿನ ಪ್ರಕಾರ ಪ್ರತಿಯೊಂದು ಹಕ್ಕನ್ನು ಬೆಂಬಲಿಸಿ, ರಕ್ಷಿಸಿ ಸಮರ್ಥಿಸಿಕೊಳ್ಳುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ರಾಜ್ಯದ ಎಲ್ಲಾ ಕಾರ್ಯಗಳು ಮತ್ತು ಶಾಸನಗಳು ಮೂಲಭೂತ ಹಕ್ಕುಗಳನ್ನು ಸಂರಕ್ಷಿಸಿ ವೃದ್ಧಿಗೊಳಿಸುವಂತಿರಬೇಕು.

ಉದಾಹರಣೆಗೆ, ಸಂಸತ್ತು ಭಯೋತ್ಪಾದಕ ಎಂದೆನಿಸುವ ವ್ಯಕ್ತಿಗಳಿಗೆಲ್ಲಾ ಚಿತ್ರಹಿಂಸೆ ನೀಡಲು ಸೇನೆಗೆ ಅನುಮತಿ ನೀಡುವ ಶಾಸನವನ್ನು ಮಾಡಿದರೆ, ಸರ್ವೋಚ್ಚ ನ್ಯಾಯಾಲಯವು ಅಂತಹ ಶಾಸನವನ್ನು ಹೊಡೆದುಹಾಕುವುದು, ಕಾರಣ ಅದರಿಂದ ಪ್ರತಿಯೊಬ್ಬ ವ್ಯಕ್ತಿಗೂ ಜೀವನದ ಹಾಗೂ ವೈಯುಕ್ತಿಕ ಸ್ವೇಚ್ಛೆಯ ಮೂಲಭೂತ ಹಕ್ಕಿನಲ್ಲಿರುವ ಮಾನವನ ಘನತೆ ಹಾಗೂ ದೈಹಿಕ ಭದ್ರತೆಯ ಉಲ್ಲಂಘನೆಯಾಗುತ್ತದೆ.

---

**ಮಾನವ ಹಕ್ಕುಗಳ ಉಲ್ಲಂಘನೆ ಎಂದರೇನು?**

ಪ್ರತಿಯೊಬ್ಬ ಮಾನವನ ಹಕ್ಕುಗಳನ್ನು ಕಾನೂನಿನ ಪ್ರಕಾರ ಸಂರಕ್ಷಣೆ ಮಾಡುವುದು ರಾಜ್ಯದ ಆದ್ಯ ಕರ್ತವ್ಯವಾಗಿದೆ. ರಾಜ್ಯ ಸರ್ಕಾರವೇ ಆಗಲಿ ಅಥವಾ ಅದರ ಪ್ರತಿನಿಧಿಯಾಗಲಿ, ಅಂದರೆ ಒಬ್ಬ ಪೊಲೀಸ್ ಪೇದೆಯಾಗಲಿ, ಅಧಿಕಾರಶಾಹಿಯಾಗಲಿ, ಅರಣ್ಯ ಅಥವಾ ಸೇನಾ ಪಡೆಯ ಅಧಿಕಾರಿಯಾಗಲಿ ಅಥವಾ ಸರ್ಕಾರದ ಪರವಾಗಿ ಕೆಲಸ ಮಾಡುವ ಯಾರೇ ಆಗಲಿ, ಅಂದರೆ ಗುತ್ತಿಗೆಯ ಆಧಾರದ ಮೇಲೆ ಗುತ್ತಿಗೆದಾರರಾಗಿರುವವರು, ಮತ್ತೊಬ್ಬ ವ್ಯಕ್ತಿಯ ಮಾನವ ಹಕ್ಕುಗಳನ್ನು ಕಡಿಮೆ ಮಾಡುವ, ಅಗೌರವ ತೋರುವ ಅಥವಾ ಮಧ್ಯ

ಪ್ರವೇಶ ಮಾಡುವ ಯಾವುದೇ ಕೆಲಸ ಮಾಡಿದರೆ ಅದು ಉಲ್ಲಂಘನೆಯಾಗುತ್ತದೆ. ಮಾನವ ಹಕ್ಕುಗಳ ಒತ್ತಾಯವನ್ನು ರಾಜ್ಯದ ವಿರುದ್ದ ಮಾಡಲಾಗುತ್ತದೆಯೇ ಹೊರತು ಖಾಸಗಿ ವ್ಯಕ್ತಿಗಳ ವಿರುದ್ಧವಲ್ಲ. ಆದರೆ ಒಬ್ಬ ಖಾಸಗಿ ವ್ಯಕ್ತಿ ಬೇರೆ ಯಾರಾದರೂ ವ್ಯಕ್ತಿಯ ಜೀವಿಸುವ, ಸ್ವಾತಂತ್ರ್ಯದ, ಸಮಾನತೆಯ ಅಥವಾ ಗೌರವದ ಹಕ್ಕುಗಳನ್ನು ಉಲ್ಲಂಘಿಸಿದರೆ, ಅದಕ್ಕೆ ಬಲಿಯಾದವರು ಉಲ್ಲಂಘನೆ ಮಾಡಿದವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಸಲುವಾಗಿ ರಾಜ್ಯ ಸರ್ಕಾರದ ಮೊರೆ ಹೋಗಬಹುದು. ರಾಜ್ಯವು ಉಲ್ಲಂಘನೆಯನ್ನು ತಡೆಗಟ್ಟಿ ತಪ್ಪಿತಸ್ಥರನ್ನು ಶಿಕ್ಷಿಸಲು ವಿಫಲವಾದರೆ ಅದು ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ.

**ಮಾನವ ಹಕ್ಕುಗಳ ಉಲ್ಲಂಘನೆಗಳ ಕೆಲವು ಉದಾಹರಣೆಗಳು:**

- ಕಾರ್ಖಾನೆಗಳಿಂದ ವಿಷಪೂರಿತ ರಾಸಾಯನಿಕ ವಸ್ತುಗಳು ಬಿಡುಗಡೆಯಾಗಿ ಜನರ ಮನೆಗಳು, ಜಮೀನು ಮತ್ತು ನದಿಯ ಮೂಲಗಳಿಗೆ ಬಿಡುಗಡೆಯಾಗದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿಯು ತೆಗೆದುಕೊಳ್ಳದಿದ್ದರೆ ಅದು ಜೀವಿಸುವ ಹಕ್ಕಿನ ಉಲ್ಲಂಘನೆಯಾಗುವುದು.
- ಪೊಲೀಸರು ಅನುಮಾನಾಸ್ಪದ ವ್ಯಕ್ತಿಗಳಿಗೆ ಹೊಡೆಯುವುದು, ಸರಪಳಿ ಹಾಕುವುದು ಮತ್ತು ಚಿತ್ರಹಿಂಸೆ ನೀಡುವುದು **ಮಾನವನ ಘನತೆ ಮತ್ತು ದೈಹಿಕ ಭದ್ರತೆಯ ಹಕ್ಕಿನ** ಉಲ್ಲಂಘನೆಯಾಗುತ್ತದೆ.
- ಖೈದಿಯೊಬ್ಬನು ಕಾರಾಗೃಹದ ಮೇಲ್ವಿಚಾರಕರು ತಮಗೆ ಕಿರುಕುಳ ನೀಡುತ್ತಿದ್ದಾರೆ ಎಂದು ನೀಡಿದ ದೂರಿನ ಮೇಲೆ ನ್ಯಾಯಾಧೀಶರು ಕ್ರಮ ಕೈಗೊಳ್ಳಲು ವಿಫಲರಾಗುವುದು. ಇದು **ಕಾನೂನಿನಡಿಯಲ್ಲಿ ಸಮಾನವಾಗಿ ರಕ್ಷಣೆ ನೀಡುವ ಹಕ್ಕಿನ** ಉಲ್ಲಂಘನೆಯಾಗುತ್ತದೆ.

- ಬಾವಿಯಿಂದ ಕುಡಿಯುವ ನೀರನ್ನು ತೆಗೆದುಕೊಳ್ಳಲು ಅಥವಾ ದೇವಸ್ಥಾನದಲ್ಲಿ ಪೂಜೆ ಮಾಡಲು ದಲಿತರಿಗೆ ಬಿಡದಿರುವ ಪ್ರಸಂಗಗಳಲ್ಲಿ ಮೇಲ್ಜಾತಿಯವರ ವಿರುದ್ಧ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳದಿರುವುದು. **ಇದು ತಾರತಮ್ಯ ವಿರುದ್ಧದ ಹಕ್ಕಿನ** ಉಲ್ಲಂಘನೆಯಾಗುತ್ತದೆ.
- ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆ ಹಾಗೂ ಪುರುಷರಿಬ್ಬರಿಗೂ ಬಡ್ತಿಯಲ್ಲಿ ಸಮಾನವಾದ ಅವಕಾಶಗಳನ್ನು ನೀಡಿ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡುವುದಕ್ಕೆ ಸಂಬಂಧಪಟ್ಟ ಉದ್ಯೋಗದಾತರಿಗೆ ಇರುವ ಮಾರ್ಗಸೂಚಿಗಳನ್ನು ಜಾರಿಗೆ ತರುವಲ್ಲಿ ಕಾರ್ಮಿಕ ಇಲಾಖೆ ಉದಾಸೀನ ತೋರುವುದು. ಇದು **ಉದ್ಯೋಗದಲ್ಲಿ ಸಮಾನತೆಯ ಹಕ್ಕಿನ** ಉಲ್ಲಂಘನೆ.

- ರಕ್ಷಣಾ ಪಡೆಗಳು ರಕ್ಷಣಾ ಕಾರ್ಯಕ್ಕೆಂದು ಅಂಗಡಿಗಳನ್ನು ವಶಪಡಿಸಿಕೊಂಡು ಅದರ ಮಾಲೀಕರಿಗೆ ಪರಿಹಾರ ಧನವನ್ನು ನೀಡದಿರುವುದು. ಇದು **ಜೀವನೋಪಾಯದ ಹಕ್ಕಿನ** ಉಲ್ಲಂಘನೆ.
- ಮುಖ್ಯಮಂತ್ರಿಗಳನ್ನು ಟೀಕೆ ಮಾಡಿ ಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸಿದರೆಂಬ ಕಾರಣದ ಮೇಲೆ ಗೃಹ ಮಂತ್ರಾಲಯದಿಂದ ಪತ್ರಿಕೆಯನ್ನು ಮುಚ್ಚುವಂತೆ ಆದೇಶ ಹೊರಡಿಸುವುದು. ಇದು **ವ್ಯಕ್ತಪಡಿಸುವ ಸ್ವಾತಂತ್ರ್ಯದ** ಉಲ್ಲಂಘನೆ.

- ಪ್ರವಾಹವನ್ನು ನಿಯಂತ್ರಣ ಮಾಡಲು ತೆಗೆದುಕೊಂಡಿರುವ ಕ್ರಮದ ವಿವರಗಳನ್ನು ಪ್ರಕಟಿಸುವಲ್ಲಿ ಜಿಲ್ಲಾ ಆಡಳಿತವು ನಿರಾಕರಿಸುವುದು. ಇದು **ಮಾಹಿತಿ ಹಕ್ಕಿನ** ಉಲ್ಲಂಘನೆ.
- ಗುಪ್ತ ವಾರ್ತಾ ಸಂಸ್ಥೆಯವರು ಮದರಸಾಗಳಲ್ಲಿ ಮಕ್ಕಳಿಗೆ ಧಾರ್ಮಿಕ ಪಾಠಗಳನ್ನು ಬೋಧಿಸುವುದನ್ನು ಅವರು ರಾಷ್ಟ್ರ ವಿರೋಧಿ ಭಾವನೆಗಳನ್ನು ಬೆಳೆಸುವರೆಂಬ ಆಧಾರದ ಮೇಲೆ ತಡೆಯುವುದು. ಇದು **ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನ** ಉಲ್ಲಂಘನೆ.
- ಸಂರಕ್ಷಿತ ಅರಣ್ಯದ ನಾಶ ಮತ್ತು ಅಕ್ರಮವಾಗಿ ಮರಗಳನ್ನು ಕಡಿದು ಮರಮುಟ್ಟುಗಳ ಮಾಫಿಯಾ ಮಾಡುವುದನ್ನು ತಡೆಗಟ್ಟುವಲ್ಲಿ ಅರಣ್ಯ ಇಲಾಖೆಯ ವೈಫಲ್ಯ. ಇದು **ಆರೋಗ್ಯಕರ ಮತ್ತು ನಿರ್ಮಲವಾದ ಪರಿಸರದ ಹಕ್ಕಿನ** ಉಲ್ಲಂಘನೆ.

## 3. ಮಾನವ ಹಕ್ಕುಗಳ ಆಯೋಗಗಳ ಪಾತ್ರ

**ಈ ಭಾಗದಲ್ಲಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಗುವುದು:**

- ಮಾನವ ಹಕ್ಕುಗಳ ಆಯೋಗಗಳ ಕಾರ್ಯಗಳು
- ಮಾನವ ಹಕ್ಕುಗಳ ಸಂರಕ್ಷಣೆ
- ಮಾನವ ಹಕ್ಕುಗಳನ್ನು ವೃದ್ಧಿಗೊಳಿಸುವುದು

**ಮಾನವ ಹಕ್ಕುಗಳ ಆಯೋಗಗಳು ಕೈಗೊಳ್ಳುವ ಕಾರ್ಯಗಳೇನು?**

1993ರ ಮಾನವ ಹಕ್ಕುಗಳ ಸಂರಕ್ಷಣೆ ಅಧಿನಿಯಮದ ಪ್ರಕಾರ ಆಯೋಗಗಳು:

ಅ) ಕೆಳಕಂಡ ದೂರುಗಳ ಬಗ್ಗೆ ವಿಚಾರಣೆ ಮಾಡಬಹುದು:

* ಮಾನವ ಹಕ್ಕುಗಳ ಉಲ್ಲಂಘನೆ,
* ಮಾನವ ಹಕ್ಕುಗಳ ಉಲ್ಲಂಘನೆಗೆ ಪ್ರಚೋದಿಸುವುದು ಅಥವಾ
* ಸಾರ್ವಜನಿಕ ಸೇವೆಯಲ್ಲಿರುವವರು ಮಾನವ ಹಕ್ಕುಗಳ ಉಲ್ಲಂಘನೆ ಮಾಡುವುದನ್ನು ತಡೆಗಟ್ಟುವಲ್ಲಿ ಉದಾಸೀನ ಮಾಡುವುದು

ಆ) ನ್ಯಾಯಾಲಯಗಳು ಒಪ್ಪಿಕೊಂಡರೆ ನ್ಯಾಯಾಲಯಗಳಲ್ಲಿರುವ ಮಾನವ ಹಕ್ಕುಗಳಿಗೆ ಸಂಬಂಧಪಟ್ಟ ಪ್ರಕರಣಗಳಲ್ಲಿ ಭಾಗಿಯಾಗುವುದು

ಇ) ಸೆರೆಮನೆಗಳು, ಆಸ್ಪತ್ರೆಗಳು, ಬಾಲ ಗೃಹಗಳು, ಕಲ್ಯಾಣ ಗೃಹಗಳು, ಶಾಲೆಗಳು ಹಾಗೂ ಇತರ ಸರ್ಕಾರದಿಂದ ನಡೆಸಲ್ಪಡುವ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿ ವಾಸ ಮಾಡುವ ಪರಿಸ್ಥಿತಿಯನ್ನು ಅಭ್ಯಸಿಸಿ ಅಭಿವೃದ್ಧಿಪಡಿಸುವ ಬಗ್ಗೆ ಶಿಫಾರಸ್ಸುಗಳನ್ನು ಮಾಡುವುದು

ಈ) ಮಾನವ ಹಕ್ಕುಗಳನ್ನು ಅನುಭವಿಸಲು ಅಡ್ಡಿಬರುವ ವಿಚಾರಗಳು ಮತ್ತು ಕಾನೂನುಗಳನ್ನು ಅಧ್ಯಯನ ಮಾಡುವುದು

ಉ) ಸಮ್ಮೇಳನಗಳು, ಕಾರ್ಯಾಗಾರಗಳು, ಪ್ರಕಟಣೆಗಳು ಹಾಗೂ ಸಂಶೋಧನೆಗಳ ಮೂಲಕ ಮಾನವ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು.

ಊ) ಮಾನವ ಹಕ್ಕುಗಳ ಕ್ಷೇತ್ರಕ್ಕೆ ಸಂಬಂಧಪಟ್ಟ ಸರ್ಕಾರೇತರ ಸಂಘ ಸಂಸ್ಥೆಗಳನ್ನು ಬೆಂಬಲಿಸುವುದು

**ಆಯೋಗಗಳು ಮಾನವ ಹಕ್ಕುಗಳನ್ನು ಹೇಗೆ ಸಂರಕ್ಷಿಸುತ್ತವೆ?**

---

ಮಾನವ ಹಕ್ಕುಗಳ ಆಯೋಗಗಳನ್ನು ದೇಶದಲ್ಲಿ ಮಾನವ ಹಕ್ಕುಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸುವ ಸಲುವಾಗಿ ಸ್ಥಾಪಿಸಲಾಗಿದೆ. ಇವೆರಡೂ ಪ್ರತ್ಯೇಕವಾದ ಕೆಲಸಗಳಾದರೂ ಅವುಗಳು ಒಂದುಗೂಡಿ ಮಾಡುವ ಪರಿಶ್ರಮದಿಂದ ಮಾನವ ಹಕ್ಕುಗಳ ಆಯೋಗಗಳ ಒಟ್ಟಾರೆ ಪಾತ್ರವನ್ನು ರೂಪಿಸುತ್ತದೆ.

---

ಮಾನವ ಹಕ್ಕುಗಳ ಉಲ್ಲಂಘನೆಯಾದ ಬಗ್ಗೆ ಬಲಿಪಶುವಾದವರಿಂದ; ಅವರ ಕುಟುಂಬಗಳಿಂದ; ಸರ್ಕಾರೇತರ ಸಂಸ್ಥೆಗಳಿಂದ; ಅಥವಾ ಆಸಕ್ತಿಯುಳ್ಳ ವ್ಯಕ್ತಿಗಳು ಅಥವಾ

ಗುಂಪುಗಳಿಂದ ಪಡೆದ ದೂರುಗಳ ವಿಚಾರಣೆಯನ್ನು ಅವು ಕೈಗೊಳ್ಳುತ್ತವೆ. ಕೆಲವೊಮ್ಮೆ ಸರ್ಕಾರಿ ಆಸ್ಪತ್ರೆಗಳಲ್ಲಿ, ಬಾಲ ಗೃಹಗಳಲ್ಲಿ, ಕಾರಾಗೃಹಗಳಲ್ಲಿ, ಪೋಲೀಸ್ ಬಂಧನದಲ್ಲಿ ಅಕ್ರಮ ನಡೆದಿವೆ ಎಂದು ಸ್ಥಳ ಪರಿಶೀಲನೆ ಮಾಡುವ ಸಂದರ್ಭದಲ್ಲಿ ಕಂಡುಬಂದರೆ ಅಥವಾ ಪತ್ರಿಕಾ/ಸಂಪರ್ಕ ಮಾಧ್ಯಮದ ವರದಿಯನ್ನು ಆಧರಿಸಿ ಘಟನೆಗಳನ್ನು ಸ್ವಯಂಪ್ರೇರಿತವಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬಹುದು. ವಿಚಾರಣೆಯನ್ನು ನಡೆಸಿದ ನಂತರ, ಮಾನವ ಹಕ್ಕುಗಳ ಆಯೋಗಗಳು ನಿರಂತರವಾಗಿ ನಡೆಯುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ತಡೆಯುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು; ಮಾನವ ಹಕ್ಕುಗಳ ದುರುಪಯೋಗವು ಮುಂದೆಯೂ ನಡೆಯದಂತೆ ತಡೆಗಟ್ಟಲು ಕ್ರಮ ತೆಗೆದುಕೊಳ್ಳಬಹುದು; ಉಲ್ಲಂಘನೆ ಮಾಡಿದವರ ಮೇಲೆ ಶಿಸ್ತು ಕ್ರಮ ತೆಗೆದುಕೊಂಡು ದಂಡಾರ್ಹ ಪ್ರಕರಣವೆಂದು ದಾಖಲಿಸಿಕೊಳ್ಳಬಹುದು; ಮತ್ತು ನೊಂದವರಿಗೆ ಅಥವಾ ಅವರ ಕುಟುಂಬದವರಿಗೆ ತಕ್ಷಣ ಪರಿಹಾರ ನೀಡಬಹುದು.

ವಿಚಾರಣೆಯನ್ನು ನಡೆಸುವಾಗ, ಮಾನವ ಹಕ್ಕುಗಳ ಆಯೋಗಗಳು ಸಿವಿಲ್ ನ್ಯಾಯಾಲಯಗಳಿಗೆ ಅಧಿಕಾರವಿರುವ ಹಾಗೆ ನ್ಯಾಯಾಲಯದ ಕರೆ(ಸಮನ್ಸ್) ನೀಡಿ ಸಾಕ್ಷಿಗಳಿಂದ ಪ್ರಮಾಣ ಮಾಡಿಸಿ ವಿಚಾರಣೆ ನಡೆಸಬಹುದು; ಯಾವುದೇ ದಾಖಲೆಯನ್ನು ಪತ್ತೆ ಮಾಡಿ ಒಪ್ಪಿಸುವಂತೆ ಆದೇಶಿಸಬಹುದು; ಸಾಕ್ಷಗಳನ್ನು ಪ್ರಮಾಣಪತ್ರಗಳ ಮೂಲಕ ಪಡೆಯಬಹುದು; ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ತಂದೊಪ್ಪಿಸುವಂತೆ ಆದೇಶಿಸಬಹುದು; ಅದರ ಪರವಾಗಿ ಯಾವುದೇ ವ್ಯಕ್ತಿಯನ್ನು ಸಾಕ್ಷಿಗಳನ್ನು ವಿಚಾರಣೆ ಮಾಡುವುದಕ್ಕಾಗಿ ಅಥವಾ ದಾಖಲೆಗಳನ್ನು ಪರಿಶೀಲಿಸುವುದಕ್ಕಾಗಿ ನೇಮಿಸಬಹುದು.

ಮಾನವ ಹಕ್ಕುಗಳ ಆಯೋಗಗಳಲ್ಲಿ ಸ್ವೀಕೃತವಾಗುವ ಹಲವು ದೂರುಗಳು ಪೋಲೀಸರ ವಿರುದ್ಧವಾಗಿವೆ – ಪೋಲೀಸರ ದುರ್ನಡತೆಯ ಘಟನೆಗಳಿಂದಾಗಿ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಪಟ್ಟಿವೆ. ಆದಕಾರಣ ಮಾನವ ಹಕ್ಕುಗಳ ಆಯೋಗಗಳ ಕೆಲಸಗಳ ಮುಖ್ಯ ಒತ್ತಾಸೆಯು ಪೋಲೀಸರು ಕಾನೂನಿನ ಪ್ರಕಾರ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿ ತಮ್ಮ ಅಧಿಕಾರದ ದುರುಪಯೋಗ ಮಾಡದಂತೆ ಅಥವಾ ತಮ್ಮ ಚೌಕಟ್ಟನ್ನು ಮೀರದಂತೆ ನೋಡಿಕೊಳ್ಳುವುದೇ ಆಗಿದೆ.

**ಪೋಲೀಸರು ಯಾವಾಗಲೂ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ನಿರ್ದೇಶಿಸಿದೆ:**

- ಸೆಣಸಾಟದಲ್ಲಿ ಮೃತಪಟ್ಟ ಬಗ್ಗೆ ಮಾಹಿತಿ ದೊರೆತ ಕೂಡಲೇ, ಅದನ್ನು ದಾಖಲಿಸಿ ಗುಪ್ತದಳದಂತಹ ಸ್ವತಂತ್ರ ಸಂಸ್ಥೆಯ ಮುಖಾಂತರ ತನಿಖೆಯನ್ನು ನಡೆಸುವಂತೆ ಸೂಚಿಸಿ ಮರಣವು ಕಾನೂನಿನ ಪ್ರಕಾರ ಸಮರ್ಥನೀಯವೇ ಎಂಬುದನ್ನು ಪತ್ತೆ ಮಾಡುವುದು;
- ಬಂಧನದಲ್ಲಿದ್ದಾಗ ಅತ್ಯಾಚಾರ ಅಥವಾ ಸಾವಿನ ಪ್ರಕರಣಗಳನ್ನು 24 ಗಂಟೆಗಳೊಳಗಾಗಿ ಆಯೋಗಕ್ಕೆ ವರದಿ ಮಾಡುವುದು – ಆಯೋಗವು ಮರಣದ ನಿಜವಾದ ಕಾರಣದ ಬಗ್ಗೆ ತನ್ನದೇ ಆದ ನಿರ್ಧಾರ ತೆಗೆದುಕೊಳ್ಳುವ ಸಲುವಾಗಿ ಎಚ್ಚರಿಕೆಯಿಂದ ಮರಣೋತ್ತರದ ವಿಡಿಯೋ ಚಿತ್ರೀಕರಣ ಮಾಡಿ ವರದಿಯೊಂದಿಗೆ ಟೇಪ್‌ಅನ್ನು ಆಯೋಗಕ್ಕೆ ಕಳುಹಿಸುವುದು;
- ಸರ್ವೋಚ್ಛ ನ್ಯಾಯಾಲಯವು ಮತ್ತು ಕಾನೂನಿನಡಿಯಲ್ಲಿ ಇರುವ ಕಾರ್ಯವಿಧಾನದ ಪ್ರಕಾರ ವ್ಯಕ್ತಿಯ ಘನತೆಗೆ ಸಂಬಂಧಪಟ್ಟಂತೆ ಶೋಧನೆಯನ್ನು ಕೈಗೊಳ್ಳುವುದು ಮತ್ತು

ಬಂಧಿಸುವುದು;

- ಪ್ರಥಮ ಮಾಹಿತಿ ವರದಿಯನ್ನು ತಡವಿಲ್ಲದೆಯೆ ದಾಖಲು ಮಾಡಿಕೊಂಡು, ದೂರುದಾರರಿಗೆ ತನಿಖೆಯ ಪ್ರಗತಿಯನ್ನು ಕಾಲ ಕಾಲಕ್ಕೆ ತಿಳಿಸಿ ತಡವಾದುದಕ್ಕೆ ಸಂಪೂರ್ಣ ಕಾರಣವನ್ನು ನೀಡುವುದು;
- ಪೊಲೀಸ್ ಠಾಣೆಯ ಹೊರಗೆ ಸ್ವತಂತ್ರ್ಯ ವಾತಾವರಣದಲ್ಲಿ ಸುಳ್ಳನ್ನು ಪತ್ತೆ ಹಚ್ಚುವ ಪರೀಕ್ಷೆಯನ್ನು ವಕೀಲರೊಬ್ಬರ ಸಮ್ಮುಖದಲ್ಲಿ ಹಾಗೂ ಸಂಬಂಧಪಟ್ಟ ವ್ಯಕ್ತಿಯು ಒಪ್ಪಿಗೆ ನೀಡಿದ ನಂತರವೇ ಕೈಗೊಂಡು ನ್ಯಾಯಾಧೀಶರು ಅದನ್ನು ದಾಖಲಿಸಿಕೊಳ್ಳುವಂತೆ ನೋಡಿಕೊಳ್ಳುವುದು;
- ನಿಯಮಿತವಾಗಿ ಸಮುದಾಯದ ಸಭೆಗಳನ್ನು ಕರೆದು ಪೊಲೀಸ್–ಸಾರ್ವಜನಿಕ ಸಂಬಂಧವನ್ನು ಬಲಪಡಿಸಲು ಹಾಗೂ ಅಪರಾಧಗಳನ್ನು ನಿಯಂತ್ರಿಸುವ ಕ್ರಮಗಳನ್ನು ಕೈಗೊಳ್ಳುವಂತೆ ಮಾಡುವುದು.

ಮಾನವ ಹಕ್ಕುಗಳ ಆಯೋಗಗಳು ರಾಜ್ಯಗಳ ಪ್ರಾಧಿಕಾರಗಳ ವಿರುದ್ಧವಿರುವ ಹಲವಾರು ರೀತಿಯ ದೂರುಗಳನ್ನು ಪರಿಶೀಲಿಸುತ್ತವೆ. ಉದಾಹರಣೆಗೆ, ರಾಷ್ಟ್ರೀಯ ಆಯೋಗವು ಮಾನವ ಹಕ್ಕುಗಳ ದುರುಪಯೋಗದ ಬಗ್ಗೆ ವರದಿ ನೀಡುವಂತೆ ಸೇನೆ ಮತ್ತು ಇತರ ಕೇಂದ್ರೀಯ ಅರೆ ಸೇನಾ ಪಡೆಗಳನ್ನು ಕೇಳಬಹುದು. ಆಯೋಗಗಳು ಕಾರಾಗೃಹಗಳಲ್ಲಿನ ಕಳಪೆ ದರ್ಜೆಯ ವಾಸ ಮಾಡುವ ಸ್ಥಿತಿಗತಿಗಳು ಹಾಗೂ ದುರ್ವರ್ತನೆಗಳನ್ನು; ಕಾರ್ಖಾನೆಗಳಲ್ಲಿ ಕಾರ್ಮಿಕರ ಆರೋಗ್ಯ ಮತ್ತು ಕೆಲಸ ಮಾಡುವ ಸ್ಥಿತಿಗತಿಗಳು; ದಲಿತರಿಗೆ ಕಿರುಕುಳ; ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸರ್ಕಾರವು ಸರಿಯಾದ ಸಿಬ್ಬಂದಿ ಮತ್ತು ಸಲಕರಣೆಗಳನ್ನು ನೀಡುವುದರಲ್ಲಿ ವಿಫಲವಾದರೆ

ಅವುಗಳನ್ನು; ಕೈಗಾರಿಕೆಗಳು ಮಾಲಿನ್ಯವನ್ನು ಉಂಟು ಮಾಡಿದರೆ ಅದರಿಂದಾಗುವ ಸಮಸ್ಯೆಗಳು; ಉನ್ನತ ಮಟ್ಟದ ಅಧಿಕಾರಿಗಳಿಂದ ದುರುಪಯೋಗ ಮತ್ತು ಬೆದರಿಕೆಯನ್ನೊಡ್ಡಿದರೆ ಅಂಥಹ ಪ್ರಕರಣಗಳನ್ನು ಪರಿಶೀಲಿಸಬಹುದು.

ಕೋಮು ಗಲಭೆಗಳು, ಹಸಿವಿನಿಂದ ಉಂಟಾಗುವ ಸಾವು, ಪ್ರವಾಹಗಳು, ಭೂಕಂಪಗಳು ಮುಂತಾದ ಅನಾಹುತಗಳಾಗುವ ಸಂದರ್ಭಗಳಲ್ಲಿ ಸರಿಯಾದ ಪರಿಹಾರ ಮತ್ತು ಪುನರ್ವಸತಿ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಮಾನವ ಹಕ್ಕುಗಳ ಆಯೋಗಗಳು ಸರ್ಕಾರಗಳಿಗೆ ನಿರ್ದೇಶನಗಳನ್ನು ನೀಡಿವೆ. ಮಹಿಳೆಯರು ಮತ್ತು ದಲಿತರ ವಿರುದ್ಧ ಅಪಾರವಾದ ತಾರತಮ್ಯದ ಬಗ್ಗೆ ಗಮನವನ್ನು ಸೆಳೆದಿದ್ದು ಒತ್ತೆಯಾಳುಗಳು ಹಾಗೂ ಮಕ್ಕಳ ಸ್ಥಿತಿಗತಿಗಳನ್ನು ಪುನರ್ ಪರಿಶೀಲಿಸಿವೆ. ಹದಿನಾಲ್ಕು ವರುಷಗಳಿಗಿಂತ ಕಡಿಮೆ ಇರುವ ಮಕ್ಕಳನ್ನು ಅವರ ಮನೆಗಳಲ್ಲಿ ನೇಮಕ ಮಾಡಿಕೊಳ್ಳದಂತೆ ಸರ್ಕಾರಿ ನೌಕರರಿಗೆ ಸೂಚನೆ ನೀಡಿದೆ. ನೌಕರರಿಗೆ ಕನಿಷ್ಠ ವೇತನ ನೀಡದಿರುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸುವಂತೆಯೂ, ಸುರಕ್ಷಿತವಲ್ಲದ ಅಂಗಡಿಗಳು, ಕಾರ್ಖಾನೆಗಳು ಅಥವಾ ಗಣಿಗಳ ಮಾಲೀಕರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆಯೂ ಸರ್ಕಾರಕ್ಕೆ ನಿರ್ದೇಶನವನ್ನು ನೀಡಿವೆ.

ಕೆಲವರು ಒಂದು ನಿರ್ದಿಷ್ಠ ಜಾತಿ, ಪಂಗಡ, ವರ್ಣ, ಧರ್ಮ ಅಥವಾ ಲಿಂಗ ಅಥವಾ ದುರ್ಬಲ ಸ್ಥಾನಗಳಲ್ಲಿರುವ ನಿರಾಶ್ರಿತರು, ವಲಸೆ ಕಾರ್ಮಿಕರು ಅಥವಾ ಪ್ರತ್ಯೇಕಿಸಲ್ಪಟ್ಟ ಜನರನ್ನು

ಗುರಿಯಾಗಿಟ್ಟುಕೊಂಡು ಗುಂಪು ಘರ್ಷಣೆ ಮಾಡಿರುವ ದೂರುಗಳನ್ನೂ ಸಹ ಮಾನವ ಹಕ್ಕುಗಳ ಆಯೋಗಗಳು ತೆಗೆದುಕೊಳ್ಳಬಹುದು.

ಮಾನವ ಹಕ್ಕುಗಳ ಆಯೋಗಗಳು ಕೇವಲ ಶಿಫಾರಸ್ಸುಗಳನ್ನು ಮಾತ್ರ ಮಾಡಬಹುದಾದರೂ, ಮಾನವ ಹಕ್ಕುಗಳ ಬಗ್ಗೆ ಇರುವ ಕಳಕಳಿಯನ್ನು ಪತ್ರಿಕೆಗಳಲ್ಲಿ ಹಾಗೂ ತಮ್ಮ ವರದಿಗಳನ್ನು ಪ್ರಕಟಣೆಗಳ ಮೂಲಕ ಎತ್ತಿಹಿಡಿದು ಸರ್ಕಾರದ ಕಾರ್ಯದ ಮೇಲೆ ತನ್ನ ಪ್ರಭಾವವನ್ನು ಬೀರಬಹುದು.

## ಮಾನವ ಹಕ್ಕುಗಳ ಸಂರಕ್ಷಣೆ

ಮಾನವ ಹಕ್ಕುಗಳ ಆಯೋಗಗಳು ಕೆಳಕಂಡ ದೂರುಗಳನ್ನು ಪರಿಶೀಲಿಸಬಹುದು:

- ಅಕ್ರಮ ಬಂಧನ, ಸುಲಿಗೆ ಮತ್ತು ಪೊಲೀಸಿನವರಿಂದ ಬೆದರಿಕೆ, ಪ್ರಕರಣಗಳನ್ನು ದಾಖಲು ಮಾಡಿಕೊಳ್ಳದಿರುವುದು ಹಾಗೂ ನಾಗರೀಕರ ಜೀವ ಮತ್ತು ಆಸ್ತಿಯನ್ನು ಸಂರಕ್ಷಣೆ ಮಾಡುವುದರಲ್ಲಿ ಪೊಲೀಸರು ವಿಫಲರಾಗುವುದು
- ಅಪರಾಧಿಗಳನ್ನು ಅಥವಾ ದಂಗೆಕೋರರ ವಿರುದ್ಧ ಪ್ರಕರಣಗಳನ್ನು ದಾಖಲಿಸಿಕೊಂಡು ಸರಿಯಾದ ವಿಚಾರಣೆಗಳನ್ನು ನಡೆಸದಿರುವುದು
- ಅರೆಸೇನಾ ಪಡೆಗಳು, ಸೇನೆ ಅಥವಾ ಪೊಲೀಸರಿಂದ ಉಂಟಾದ ನಕಲಿ ಸೆಣೆಸಾಟದಿಂದಾಗಿ ಜನರು ಸಾವನ್ನಪ್ಪುವುದು
- ಸೆರೆಮನೆಗಳಲ್ಲಿ ಅಥವಾ ಪೊಲೀಸ್ ಬಂಧನದಲ್ಲಿರುವಾಗ ಅತ್ಯಾಚಾರ, ಚಿತ್ರಹಿಂಸೆ ಅಥವಾ ಹೊಡೆಯುವುದು ಕಾರಾಗೃಹ ವಾಸಿಗಳಿಗೆ ಸಾಕಷ್ಟು ಸ್ಥಳಾವಕಾಶ, ಸರಿಯಾದ

ಶೌಚಾಲಯಗಳು, ಉತ್ತಮವಾದ ಆಹಾರ, ಕಾನೂನು ಪರಿಹಾರ ಮುಂತಾದ ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ನಿರಾಕರಿಸುವುದು

- ಶುದ್ಧವಾದ ಕುಡಿಯುವ ನೀರಿನ ಸರಬರಾಜನ್ನು ನೀಡಲು ಸರ್ಕಾರವು ವಿಫಲವಾಗುವುದರಿಂದ ಜನರು ಅನಾರೋಗ್ಯಕ್ಕೆ ತುತ್ತಾಗುವುದು
- ದಲಿತರು ನೀರಿನ ಮೂಲಗಳು, ಬಾವಿಗಳು ಹಾಗೂ ಗ್ರಾಮದಲ್ಲಿರುವ ತೊಟ್ಟಿಗಳ ಉಪಯೋಗ ಮಾಡುವುದನ್ನು ನಿರಾಕರಿಸುವುದು
- ಬಲವಂತದ ಅಥವಾ ಜೀತದಾಳು ಪದ್ಧತಿ
- ಅಪಾಯಕಾರಿ ಕೈಗಾರಿಕೆಗಳು ಹೊರಸೂಸುವ ಮಾಲಿನ್ಯವನ್ನು ನಿಯಂತ್ರಿಸಲು ಜಿಲ್ಲಾ ಆಡಳಿತವು ವಿಫಲವಾಗುವುದು

ಮೇಲ್ಕಂಡವುಗಳನ್ನಲ್ಲದೆ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಮಾನವ ಹಕ್ಕುಗಳಿಗೆ ಸಂಬಂಧಪಟ್ಟ ಅಂತರರಾಷ್ಟ್ರೀಯ ಒಡಂಬಡಿಕೆಗಳು ಮತ್ತು ಒಪ್ಪಂದಗಳನ್ನು ಅಧ್ಯಯನ ಮಾಡಿ ಅವುಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸುವಂತೆ ಶಿಫಾರಸ್ಸುಗಳನ್ನು ಮಾಡುವುದು.

**<u>ಆಯೋಗಗಳು ಮಾನವ ಹಕ್ಕುಗಳನ್ನು ಹೇಗೆ ವೃದ್ಧಿಗೊಳಿಸುತ್ತವೆ?</u>**

ದೇಶದಲ್ಲಿ ಮಾನವ ಹಕ್ಕುಗಳ ಒಂದು ಸಂಸ್ಕೃತಿಯನ್ನು, ಅದರಲ್ಲೂ ವಿಶೇಷವಾಗಿ ಸರ್ಕಾರದಲ್ಲಿ, ನಿರ್ಮಾಣ ಮಾಡುವ ಸಲುವಾಗಿ ಮಾನವ ಹಕ್ಕುಗಳ ಆಯೋಗಗಳನ್ನು

ಸ್ಥಾಪಿಸಿರುವುದರಿಂದ ಮಾನವ ಹಕ್ಕುಗಳನ್ನು ವೃದ್ಧಿಗೊಳಿಸುವುದೂ ಅದರ ಕೆಲಸದ ಒಂದು ಪ್ರಮುಖ ಭಾಗವಾಗಿದೆ. ಬಡವರ ವಿರುದ್ಧ ಪಕ್ಷಪಾತ ಮತ್ತು ವಿಳಂಬ ಮಾಡುವುದು, ಅಪರಾಧ ನ್ಯಾಯ ವ್ಯವಸ್ಥೆಯಲ್ಲಿರುವ ಕೊರತೆಗಳ ಅಧ್ಯಯನಗಳನ್ನು ಮಾನವ ಹಕ್ಕುಗಳ ಆಯೋಗಗಳು ಬೆಂಬಲಿಸುತ್ತವೆ. ಭಯೋತ್ಪಾದನೆ ಅಥವಾ ದಂಗೆಕೋರರ ಹಾವಳಿಗೆ ತುತ್ತಾದ ಪ್ರದೇಶಗಳಲ್ಲಿ ಇರುವ ಮಾನವ ಹಕ್ಕುಗಳ ಸ್ಥಿತಿಗತಿಯ ಸಂಶೋಧನಾ ಯೋಜನೆಗಳನ್ನು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ತೆಗೆದುಕೊಂಡಿದೆ. ಮನೆಗಳಲ್ಲಾಗುವ ದೌರ್ಜನ್ಯ; ಹೆಣ್ಣುಭ್ರೂಣ ಹತ್ಯೆ ಮತ್ತು ಭ್ರೂಣಹತ್ಯೆ; ಬಾಲ ಕಾರ್ಮಿಕ ಪ್ರಕರಣಗಳು; ಅಂಗವಿಕಲರ ಹಕ್ಕುಗಳು; ಮಾನಸಿಕ ರೋಗಿಗಳ ಹಕ್ಕುಗಳು; ಅಧಿಸೂಚನೆಯಿಂದ ತೆಗೆದುಹಾಕಲ್ಪಟ್ಟ ಹಾಗೂ ಅಲೆಮಾರಿ ಪಂಗಡಗಳ ಜನರ ಸ್ಥಿತಿಗತಿಗಳು; ಮತ್ತು ಪರಿಸರದ ಪ್ರಕರಣಗಳು. ಜನ ಸಾಮಾನ್ಯರಿಗೆ, ಸರ್ಕಾರಿ ನೌಕರರಿಗೆ, ಅರೆಸೇನಾ ಪಡೆಗಳು, ಸೇನೆ ಮತ್ತು ಪೊಲೀಸಿನವರಿಗೆ ಮಾನವ ಹಕ್ಕುಗಳ ತರಬೇತಿ ಹಾಗೂ ಸೂಕ್ಷ್ಮಗೊಳಿಸುವಂತಹ ಕಾರ್ಯಕ್ರಮಗಳನ್ನು ಮಾನವ ಹಕ್ಕುಗಳ ಆಯೋಗಗಳು ಆಯೋಜಿಸುತ್ತವೆ. ಮಾನವ ಹಕ್ಕುಗಳ ಆಯೋಗಗಳು ಸರ್ಕಾರೇತರ ಸಂಸ್ಥೆಗಳ ಪ್ರಯತ್ನಗಳಿಗೆ ಉತ್ತೇಜನ ನೀಡಬೇಕಾಗುತ್ತದೆ. ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ವೃದ್ಧಿಯ ಸಲುವಾಗಿ ತನ್ನದೇ ಆದ ಪ್ರಯತ್ನಗಳನ್ನು ಹೆಚ್ಚಿಸುವ ಸಲುವಾಗಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಆಯ್ಕೆ ಮಾಡಿದ ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಪ್ರಮುಖ ಗುಂಪನ್ನು ರಚಿಸಿದ್ದು ಅದು ದೇಶದ ಹಲವಾರು ಸರ್ಕಾರೇತರ ಸಂಸ್ಥೆಗಳೊಂದಿಗೆ ಕಾಲಕಾಲಕ್ಕೆ ಸಭೆಗಳನ್ನು ಏರ್ಪಡಿಸುವುದೆಂದು ನಿರೀಕ್ಷಿಸಲಾಗಿದೆ.

## ಮಾನವ ಹಕ್ಕುಗಳ ವೃದ್ಧಿ

ಮಾನವ ಹಕ್ಕುಗಳ ಆಯೋಗಗಳು:

- ಮಾನವ ಹಕ್ಕುಗಳ ಪಾಠಕ್ರಮವನ್ನು ಅಭಿವೃದ್ಧಿಪಡಿಸಿ ಮಾನವ ಹಕ್ಕುಗಳ ತತ್ವವಿರುವ ಕಾರ್ಯಾಗಾರಗಳನ್ನು ಏರ್ಪಾಡು ಮಾಡುವುದು
- ನ್ಯಾಯಾಂಗ ಅಧಿಕಾರಿಗಳು, ಪೊಲೀಸು ಮತ್ತು ಕಾರಾಗೃಹಗಳ ಸಿಬ್ಬಂದಿ ವರ್ಗದವರಿಗೆಂದು ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು
- ಭ್ರೂಣಹತ್ಯೆ, ಹೆಣ್ಣುಭ್ರೂಣಹತ್ಯೆ, ಕೆಲಸದ ಸ್ಥಳದಲ್ಲಿ ಕಿರುಕುಳ, ಲೈಂಗಿಕ ದೌರ್ಜನ್ಯ, ಮಹಿಳೆಯರ ವಿರುದ್ಧ ತಾರತಮ್ಯ ಮುಂತಾದ ವಿಷಯಗಳಲ್ಲಿ ಸಂಶೋಧನೆಗಳನ್ನು ಪ್ರೋತ್ಸಾಹಿಸುವುದು
- ಪ್ರಚಲಿತವಿರುವ ಶಾಸನವನ್ನು ಪರಿಷ್ಕರಿಸಿ ಬದಲಾವಣೆಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು
- ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಒಪ್ಪಂದಗಳು ಹಾಗೂ ಶಿಷ್ಟಾಚಾರಗಳಿಗೆ ಸರ್ಕಾರವು ಸಹಿ ಹಾಕುವಂತೆ ಶಿಫಾರಸ್ಸು ಮಾಡುವುದು
- ಪರಿಶಿಷ್ಠ ಜಾತಿ/ಪಂಗಡಗಳು, ಅಲ್ಪಸಂಖ್ಯಾತರು ಮತ್ತು ಸ್ಥಳಾಂತರಗೊಂಡ ಜನರು, ಮಹಿಳೆಯರು; ಮಕ್ಕಳ ಹಕ್ಕುಗಳು, ಮನುಷ್ಯರ ಮಾರಾಟ ಮುಂತಾದ ಪ್ರಕರಣಗಳಲ್ಲಿ ಸರ್ಕಾರೇತರ ಸಂಸ್ಥೆಗಳು ಮಾಡುವ ಪ್ರಯತ್ನಗಳನ್ನು ಬೆಂಬಲಿಸುವುದು
- ನಾಗರೀಕ ಹಕ್ಕುಗಳ ಬಗ್ಗೆ ಕೈಪಿಡಿಗಳು ಹಾಗೂ ಕಿರುಹೊತ್ತಿಗೆಗಳು, ಭಿತ್ತಿಪತ್ರಗಳು,

ಪತ್ರಿಕಾ ಪ್ರಕಟಣೆಗಳು, ದೂರದರ್ಶನ ಹಾಗೂ ಬಾನುಲಿಯಲ್ಲಿ ಪ್ರಸಾರ ಮಾಡುವುದು, ಸಮ್ಮೇಳನಗಳನ್ನು ನಡೆಸುವುದರ ಮೂಲಕ ಮಾನವ ಹಕ್ಕುಗಳ ಬಗ್ಗೆ ಜಾಗೃತಿಯನ್ನು ಮೂಡಿಸುವುದು.

**ಜನರ ಮಾನವ ಹಕ್ಕುಗಳನ್ನು ನ್ಯಾಯಾಲಯಗಳು ಸಂರಕ್ಷಿಸುತ್ತವೆಂದು ನಿರೀಕ್ಷಿಸಲಾಗುವುದಿಲ್ಲವೇ?**

ಹೌದು. ಕಾನೂನಿನ ನ್ಯಾಯಾಲಯಗಳು ಮಾನವ ಹಕ್ಕುಗಳನ್ನು ಸಂರಕ್ಷಿಸಲೇಬೇಕಾಗುತ್ತವೆ. ಯಾವುದಾದರೂ ಒಬ್ಬ ವ್ಯಕ್ತಿ ಅಥವಾ ಒಂದು ವರ್ಗದ ಜನರು ತಮ್ಮ ಮಾನವ ಹಕ್ಕುಗಳ ಉಲ್ಲಂಘನೆಯಾಗಿವೆಯೆಂದು ಅನಿಸಿದರೆ ರಾಜ್ಯ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯಕ್ಕೆ ನೇರವಾಗಿ ದೂರನ್ನು ಸಲ್ಲಿಸಬಹುದು. ಕೆಲವು ರಾಜ್ಯಗಳಲ್ಲಿ ಜಿಲ್ಲಾ ಮಟ್ಟದಲ್ಲೂ ಸಹ ಮಾನವ ಹಕ್ಕುಗಳ ನ್ಯಾಯಾಲಯಗಳಿವೆ. ಕರ್ನಾಟಕದಲ್ಲಿ ಪ್ರತಿ ಜಿಲ್ಲೆಯ ಪ್ರಧಾನ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯವನ್ನು ಮಾನವ ಹಕ್ಕುಗಳ ನ್ಯಾಯಾಲಯವೆಂದು ಆದೇಶ ಹೊರಡಿಸಲಾಗಿದೆ.

ನ್ಯಾಯಾಲಯಗಳು ಬಿರುಸಿನ ಚಟುವಟಿಕೆಗಳಿಂದ ಕೂಡಿದ್ದು ಬೇರೆ ಬೇರೆ ವಿಚಾರಗಳನ್ನು ಕೈಗೆತ್ತಿಕೊಂಡ ಕಾರಣದಿಂದಾಗಿ ಅವುಗಳಿಗೆ ಅಧಿಕ ಹೊರೆ ಇರುವುದರಿಂದ ಮಾನವ ಹಕ್ಕುಗಳ ಉಲ್ಲಂಘನೆಗಳಿಗೆ ಪರಿಹಾರ ನೀಡುವ ಸಲುವಾಗಿ ಹೆಚ್ಚಿನ ಸ್ಥಳಗಳೆಂದು ರಾಷ್ಟ್ರೀಯ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗಗಳನ್ನು ಸ್ಥಾಪಿಸಲಾಗಿದೆ. ಮಾನವ ಹಕ್ಕುಗಳನ್ನು ಸಂರಕ್ಷಿಸಿ ವೃದ್ಧಿಗೊಳಿಸುವುದನ್ನೇ ಕೇಂದ್ರೀಕರಿಸುವುದರಿಂದ ಆಯೋಗಗಳು ಮಾನವ ಹಕ್ಕುಗಳ ದುರುಪಯೋಗಗಳನ್ನು ತಡೆಗಟ್ಟಿ ಜನರಿಗೆ ಅವರ ಹಕ್ಕುಗಳ ಬಗ್ಗೆ ಶಿಕ್ಷಣ ನೀಡುವಲ್ಲಿ ಹೆಚ್ಚಿನ ಕ್ರಿಯಾಶೀಲ ಪಾತ್ರವನ್ನು ವಹಿಸಬಹುದು.

ನೆನಪಿಡಿ, ನಿಮ್ಮ ಮಾನವ ಹಕ್ಕುಗಳ ಉಲ್ಲಂಘನೆಯಾಗಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ದಂಡಾರ್ಹ ಅಪರಾಧದ ಪ್ರಕರಣವನ್ನು ದಾಖಲಿಸತಕ್ಕದ್ದು.

- ನಿಮ್ಮ ದೂರನ್ನು ದಾಖಲಿಸದಿದ್ದರೆ ಮಾನವ ಹಕ್ಕುಗಳ ಆಯೋಗಕ್ಕೆ ದೂರನ್ನು ದಾಖಲಿಸಬಹುದು
- ಪೊಲೀಸರು ನಿಮ್ಮ ಪ್ರಕರಣವನ್ನು ಸರಿಯಾಗಿ ವಿಚಾರಣೆ ಮಾಡದಿದ್ದರೆ, ಮುಕ್ತವಾದ ವಿಚಾರಣೆಯನ್ನು ಕೈಗೊಳ್ಳುವ ಸಲುವಾಗಿ ಮಾನವ ಹಕ್ಕುಗಳ ಆಯೋಗದ ಮೊರೆ ಹೋಗಬಹುದು.

**ನ್ಯಾಯಾಲಯಗಳಿಗಿಂತ ಮಾನವ ಹಕ್ಕುಗಳ ಆಯೋಗಗಳು ಯಾವ ರೀತಿ ಭಿನ್ನವಾಗಿವೆ?**

ನ್ಯಾಯಾಲಯಗಳು ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳಲ್ಲಿ ಹಕ್ಕುಗಳ ಉಲ್ಲಂಘನೆಗಳನ್ನು ತೆಗೆದುಕೊಳ್ಳುವುವು. ದಂಡಾರ್ಹ ಪ್ರಕರಣಗಳಲ್ಲಿ, ಪೊಲೀಸರು ಪ್ರಕರಣವನ್ನು ತನಿಖೆ ಮಾಡಿ, ಕಾನೂನು ಕ್ರಮ ಜರುಗಿಸುವವರು ಮೊಕದ್ದಮೆಯನ್ನು ತಯಾರಿಸಿ ನ್ಯಾಯಾಧೀಶರು ಎರಡೂ ಕಡೆಗಳವರನ್ನು ಆಲಿಸುವರು. ಎಲ್ಲಾ ವಾಸ್ತವಾಂಶ ಹಾಗೂ ಸಂಧರ್ಭಗಳನ್ನು ಸರಿದೂಗಿಸಿ, ನ್ಯಾಯಾಧೀಶರು ಅಪರಾಧಿಗಳನ್ನು ಶಿಕ್ಷಿಸಬಹುದು ಅಥವಾ ಬಿಡುಗಡೆ ಮಾಡಬಹುದು ಹಾಗೂ ಅನ್ಯಾಯವಾಗಿರುವವರಿಗೆ ಪರಿಹಾರ ನೀಡಬೇಕೆಂದು ಅಥವಾ ಬೇರೆ ಯಾವುದಾದರೂ ಸೂಕ್ತ ಆದೇಶವನ್ನು ಮಾಡಬಹುದು. ಮಾನವ ಹಕ್ಕುಗಳ ಆಯೋಗಕ್ಕೆ ಒಂದು ದೂರು ಬಂದಾಗ, ಆಯೋಗವು ತನ್ನದೇ ಆದ ತನಿಖೆಮಾಡುವವರಿಂದ ಏನಾಗಿದೆ ಎಂಬುದರ ಬಗ್ಗೆ ಸ್ವತಂತ್ರವಾಗಿ ವಿಚಾರಣೆ ನಡೆಸಿ

ಪ್ರಕರಣದಲ್ಲಿ ಭಾಗಿಯಾಗಿರುವವರೆಲ್ಲರನ್ನೂ ಅದರ ಮುಂದೆ ಕರೆಯಿಸಿ, ಸಾಕ್ಷಿಗಳನ್ನು ಆಲಿಸಿ, ರಾಜ್ಯದಿಂದ ಕಾರಣವನ್ನು ಕೇಳಿ, ತನ್ನದೇ ಆದ ತೀರ್ಮಾನಕ್ಕೆ ಬರಬಹುದಾದರೂ, ತಪ್ಪಿತಸ್ಥರನ್ನು ಶಿಕ್ಷಿಸುವಂತಿಲ್ಲ. ಆದರೆ ಸರ್ಕಾರಕ್ಕೆ ತಕ್ಷಣದ ಪರಿಹಾರ ನೀಡುವಂತೆ ಹಾಗೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಬಹುದು. ನ್ಯಾಯಾಲಯಗಳು ಪಾಲಿಸುವಂತಹ ನಿಯಮಗಳೆಲ್ಲವನ್ನು ಮಾನವ ಹಕ್ಕುಗಳ ಆಯೋಗಗಳು ಪಾಲಿಸಬೇಕಾದ ಅವಶ್ಯಕತೆಯಿಲ್ಲದಿರುವುದರಿಂದ ಅವು ವಿಚಾರಣೆಗಳನ್ನು ನಡೆಸಿ ಮತ್ತಷ್ಟು ಶೀಘ್ರವಾಗಿ ತೀರ್ಮಾನಕ್ಕೆ ಬರಬಹುದು. ಸರ್ಕಾರಗಳು ಮಾನವ ಹಕ್ಕುಗಳ ಆಯೋಗವು ಮಾಡಿದಂತಹ ಆದೇಶದ ಮೇಲೆ ನಂಬಿಕೆಯಿಂದ ಕ್ರಮ ಕೈಗೊಳ್ಳಬೇಕಾದ ಅವಶ್ಯಕತೆ ಇದ್ದರೂ ಹಲವಾರು ಬಾರಿ ಈ ಆದೇಶಗಳನ್ನು ವಿರೋಧಿಸುತ್ತದೆ ಅಥವಾ ಅವುಗಳನ್ನು ಪಾಲಿಸುವಲ್ಲಿ ತಡಮಾಡುತ್ತದೆ.

---

ಜಕೀರ್ ಎಂಬ ಯುವಕ ಪೋಲೀಸ್ ಬಂಧನದಲ್ಲಿದ್ದಾಗ ಮೃತಪಟ್ಟ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ರಾಜ್ಯ (ಮಹಾರಾಷ್ಟ್ರ) ಗುಪ್ತದಳ ವಿಭಾಗವನ್ನು ಅವನು ಹೇಗೆ ಮೃತಪಟ್ಟನೆಂದು ಕೇಳಿತು. ಅದು ಜಕೀರ್‌ನನ್ನು ಮೂರು ಜನ ಪೋಲೀಸ್ ಪೇದೆಗಳು ತಮ್ಮ ವಶಕ್ಕೆ ತೆಗೆದುಕೊಂಡು ಸಾಯುವವರೆಗೆ ಹೊಡೆದುದಾಗಿ ಪತ್ತೆ ಮಾಡಿತು. ಆ ಪೇದೆಗಳನ್ನು ಬಂಧಿಸಿ, ಸೇವೆಯಿಂದ ಅಮಾನತ್ತುಗೊಳಿಸಿ ಅವರ ವಿರುದ್ಧ ಮೊಕದ್ದಮೆಗಳನ್ನು ಹೂಡಲಾಯಿತು. ಜನರ ಆಸ್ತಿ ಮತ್ತು ಜೀವ ರಕ್ಷಣೆ ಮಾಡುವ ಜವಾಬ್ದಾರಿಯಿರುವ ಸರ್ಕಾರದ ಪ್ರತಿನಿಧಿಗಳಾದ ಪೋಲೀಸ್ ಪೇದೆಗಳೇ ಜಕೀರನ ಸಾವಿಗೆ ಕಾರಣರಾದುದರಿಂದ, ಜಕೀರನ

ಕುಟುಂಬದವರಿಗೆ ಎರಡು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ತಕ್ಷಣ ನೀಡಬೇಕೆಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಮಹಾರಾಷ್ಟ್ರ ಸರ್ಕಾರಕ್ಕೆ ಆದೇಶ ಮಾಡಿತು.

ಪೊಲೀಸರ ವಿರುದ್ಧದ ಪ್ರಕರಣವು ನ್ಯಾಯಾಲಯದ ಮುಂದೆ ಇದ್ದು, ಪೊಲೀಸರು ತಪ್ಪಿತಸ್ಥರೆಂದು ಕಂಡುಬಂದರೆ ಮಾತ್ರ ತಕ್ಷಣ ಪರಿಹಾರವನ್ನು ನೀಡುವುದಾಗಿ ರಾಜ್ಯ ಸರ್ಕಾರವು ತಿಳಿಸಿತು. ಆದರೆ ಮಾನವ ಹಕ್ಕುಗಳ ಆಯೋಗವು ತಕ್ಷಣ ಪರಿಹಾರ ನೀಡಬೇಕೆಂದೆನ್ನುವುದು ನ್ಯಾಯಾಲಯದಿಂದ ತಪ್ಪಿತಸ್ಥರೆಂದು ತೀರ್ಮಾನವಾಗುವ ಷರತ್ತಿಗೆ ಒಳಪಟ್ಟಿಲ್ಲ. ಆಯೋಗಗಳ ನಿರ್ದೇಶನಗಳಿಗೆ ಕೇವಲ ವಸ್ತು ಸ್ಥಿತಿಯೇ ಸಾಕಾಗುವುದರಿಂದ ದಂಡಾರ್ಹ ಆರೋಪಗಳ ಪ್ರಕರಣಗಳು ನ್ಯಾಯಾಲಯಗಳಲ್ಲಿ ಸರಿಯಾಗಿ ತೀರ್ಮಾನವಾಗದಿದ್ದರೂ ಸಹ, ಅವು ಮಾನವ ಹಕ್ಕುಗಳ ಆಯೋಗಗಳ ತೀರ್ಪಿನ ಮೇಲೆ ಪರಿಣಾಮವನ್ನು ಬೀರುವುದಿಲ್ಲ. ಆದ್ದರಿಂದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಮಹಾರಾಷ್ಟ್ರ ಸರ್ಕಾರವನ್ನು ಒತ್ತಾಯಿಸಿದ ಮೇರೆಗೆ, ಆ ಪ್ರಕರಣವನ್ನು ನ್ಯಾಯಾಲಯದಲ್ಲಿ ಅಂತಿಮವಾಗಿ ಇತ್ಯರ್ಥಪಡಿಸುವುದಕ್ಕೆ ಮುಂಚಿತವಾಗಿಯೇ, ತಕ್ಷಣದ ಪರಿಹಾರವನ್ನು ಜಕೀರನ ಕುಟುಂಬದ ಸದಸ್ಯರಿಗೆ ನೀಡಲಾಯಿತು.

## 4. ದೂರುಗಳನ್ನು ದಾಖಲಿಸುವುದು ಹೇಗೆ?

ಈ ಭಾಗದಲ್ಲಿ:

- ಯಾರು ದೂರನ್ನು ದಾಖಲಿಸಬಹುದು
- ಯಾರ ವಿರುದ್ಧ ದೂರನ್ನು ದಾಖಲಿಸಬಹುದು
- ದೂರನ್ನು ದಾಖಲಿಸುವ ಕಾರ್ಯವಿಧಾನ

ಇವುಗಳನ್ನು ಚರ್ಚಿಸಲಾಗುವುದು

**ಮಾನವ ಹಕ್ಕುಗಳ ಆಯೋಗದ ಮುಂದೆ ಯಾರು ದೂರನ್ನು ದಾಖಲಿಸಬಹುದು?**

ಯಾವುದೇ ಒಬ್ಬ ವ್ಯಕ್ತಿ, ವ್ಯಕ್ತಿಗಳ ಗುಂಪು ಅಥವಾ ಸಂಸ್ಥೆಯು ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಮಾನವ ಹಕ್ಕುಗಳ ಆಯೋಗದ ಮುಂದೆ ದೂರನ್ನು ದಾಖಲಿಸಬಹುದು. ಅದು ಯಾವುದೇ ಸಂಸ್ಥೆ ಅಥವಾ ವ್ಯಕ್ತಿಯಾದರೂ ಸರಿ. ಮಾನವ ಹಕ್ಕುಗಳ ಆಯೋಗಗಳು ಜನರನ್ನು ಅವರ ವಯಸ್ಸು, ಆರ್ಥಿಕ ಪರಿಸ್ಥಿತಿ, ಜಾತಿ, ಲಿಂಗ ಅಥವಾ ಧರ್ಮದ ಆಧಾರದ ಮೇಲೆ ದೂರ ಮಾಡುವಂತಿಲ್ಲ.

ಕೆಲವೊಮ್ಮೆ ಹಕ್ಕುಗಳ ಉಲ್ಲಂಘನೆಯಿಂದ ತೊಂದರೆಗೆ ಒಳಗಾದ ವ್ಯಕ್ತಿಯು ದೂರು ಸಲ್ಲಿಸಲು ಸಾಧ್ಯವಾಗಲಾರದು. ಅವನು ಸತ್ತಿರಬಹುದು, ಬಂಧನದಲ್ಲಿರಬಹುದು, ಅನಕ್ಷರಸ್ಥರಿರಬಹುದು ಅಥವಾ ತೀವ್ರ ಅನಾರೋಗ್ಯಕ್ಕೆ ತುತ್ತಾಗಿರಬಹುದು. ಅಂಥಹ ಸಂದರ್ಭಗಳಲ್ಲಿ, ತೊಂದರೆಗೆ ಒಳಗಾದ ವ್ಯಕ್ತಿಯ ಪರವಾಗಿ ಬೇರೆ ಯಾರಾದರೂ ದೂರನ್ನು ನೀಡಬಹುದು.

ದೂರುಗಳನ್ನು ಕೆಳಕಂಡವರು ತರಬಹುದು:

- ವ್ಯಕ್ತಿಗತವಾಗಿ ಅಥವಾ ವ್ಯಕ್ತಿಗಳ ಒಂದು ಗುಂಪು; ಅಥವಾ
- ಯಾವುದೇ ವೇದಿಕೆ, ಸಂಘ ಅಥವಾ ಸರ್ಕಾರೇತರ ಸಂಸ್ಥೆ; ಅಥವಾ
- ಇನ್ಯಾವುದಾದರೂ ಪ್ರತಿನಿಧಿ

ಮಾನವ ಹಕ್ಕುಗಳ ಆಯೋಗಗಳು ಭಾರಿ ಪ್ರಮಾಣದ ದೂರುಗಳನ್ನು ಸ್ವೀಕರಿಸುತ್ತವೆ. ರಾಷ್ಟ್ರೀಯ ಆಯೋಗವೊಂದೇ ವರ್ಷಕ್ಕೆ ಎಪ್ಪತ್ತು ಸಾವಿರ ದೂರುಗಳನ್ನು ಸ್ವೀಕರಿಸುತ್ತದೆ. ಇವುಗಳಲ್ಲಿ ಬಹುಪಾಲು ದೂರುಗಳು ಕುಟುಂಬ ಅಥವಾ ನೆರೆಹೊರೆಯವರೊಂದಿಗೆ ಜಗಳ, ಗ್ರಾಹಕರ ವ್ಯವಹಾರಗಳು, ಸೇವಾ ವಿಷಯಗಳು, ಆಸ್ತಿಯ ವ್ಯಾಜ್ಯ ಇತ್ಯಾದಿಗಳಿಗೆ ಸಂಬಂಧಪಟ್ಟಿದ್ದು ಮಾನವ ಹಕ್ಕುಗಳ ದುರುಪಯೋಗಕ್ಕೆ ಸಂಬಂಧಪಡದಿರುವುದರಿಂದ ಅವುಗಳನ್ನು ತಿರಸ್ಕರಿಸಲಾಗುತ್ತವೆ.

---

ಹಲವು ಪ್ರಕರಣಗಳಲ್ಲಿ, ಮಾನವ ಹಕ್ಕುಗಳ ಆಯೋಗವು ಕೇವಲ ಒಂದು ದೂರನ್ನು ಗಮನಕ್ಕೆ ತೆಗೆದುಕೊಳ್ಳುವುದರಿಂದಲೇ ಒಂದು ಸನ್ನಿವೇಶವನ್ನು ಸರಿಪಡಿಸಲು ಸಾಧ್ಯವಾಗುತ್ತದೆ. ಕೆಲವೊಮ್ಮೆ, ತಪ್ಪಿತಸ್ಥ ಇಲಾಖೆಗೆ ಒಂದು ಪತ್ರ ಬರೆಯುವುದರಿಂದಲೇ ತಕ್ಷಣ ಪರಿಹಾರ ದೊರೆತಿದೆ. ಉದಾಹರಣೆಗೆ, ಸರ್ಕಾರಿ ಇಲಾಖೆಗಳು ಜನರ ವಿಶ್ರಾಂತಿ ವೇತನವನ್ನು ತಡೆಹಿಡಿಯುತ್ತಿರುವ ಬಗ್ಗೆ ಆಯೋಗಕ್ಕೆ ಹಲವಾರು ದೂರುಗಳು ಬಂದಿವೆ. ನಿಷ್ಪಕ್ಷಪಾತವಾಗಿ ಹೇಳಬೇಕೆಂದರೆ ಇದು ಮಾನವ ಹಕ್ಕುಗಳ ಉಲ್ಲಂಘನೆಯಾಗದಿದ್ದರೂ, ಕೇವಲ ಈ ವಿಷಯದಲ್ಲಿ ಒಂದು ವರದಿ ಕೇಳಿರುವುದರಿಂದ ತಕ್ಷಣ ಹಣ ಪಾವತಿಯಾಗಿವೆ.

---

**ಯಾರ ವಿರುದ್ಧ ದೂರನ್ನು ದಾಖಲಿಸಬಹುದು?**

ಕೆಳಕಂಡ ಸಂದರ್ಭಗಳಲ್ಲಿ ಸಾರ್ವಜನಿಕ ಸೇವಕರ ವಿರುದ್ಧ ದೂರನ್ನು ದಾಖಲಿಸಲಾಗುವುದು:

- ಅವರೇ ಮಾನವ ಹಕ್ಕುಗಳನ್ನು ನೇರವಾಗಿ ಉಲ್ಲಂಘಿಸಿದಾಗ;
- ಯಾರಾದರೂ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದರೆ ಅಂಥಹವರಿಗೆ ಪ್ರಚೋದನೆ ನೀಡುವುದು, ಸಹಾಯ ಮಾಡುವುದು ಅಥವಾ ಬೆಂಬಲಿಸುವುದು;
- ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಗಟ್ಟದಿರುವುದು ಹಾಗೂ ತಮ್ಮ ಕರ್ತವ್ಯದಲ್ಲಿ ಉದಾಸೀನತೆ ತೋರುವುದು.

'ಸಾರ್ವಜನಿಕ ಸೇವಕರು' ಎಂದರೆ ಸರ್ಕಾರದ ಪರವಾಗಿ ಅಧಿಕಾರವನ್ನು ಹೊಂದಿದ್ದು ನ್ಯಾಯಾಧೀಶರು, ಒಬ್ಬ ಪೋಲೀಸಿನವರು, ಸೇನಾ ಪಡೆಯ ಒಬ್ಬ ಅಧಿಕಾರಿ, ಒಬ್ಬ ಸರ್ಕಾರಿ ವೈದ್ಯರು, ಒಬ್ಬ ಸರ್ಕಾರಿ ಶಿಕ್ಷಕರು, ತಹಸೀಲ್ದಾರರು, ಪಟ್ವಾರಿ, ವಿದ್ಯುಚ್ಛಕ್ತಿ ಇಲಾಖಾ ನೌಕರರು ಮುಂತಾದವರು (ಸಂಪೂರ್ಣ ಅರ್ಥವಿವರಣೆಗೆ ಭಾರತೀಯ ದಂಡ ಸಂಹಿತೆಯ ಕಲಂ 21 ನೋಡಿ)

**ದೂರನ್ನು ದಾಖಲಿಸಲು ಏನಾದರೂ ಖರ್ಚಾಗುವುದೇ?**

ಇಲ್ಲ. ಒಂದು ದೂರನ್ನು ದಾಖಲಿಸಲು ಏನೂ **ಖರ್ಚಾಗುವುದಿಲ್ಲ.**

---

**ಮಾನವ ಹಕ್ಕುಗಳ ಆಯೋಗಗಳು ಒಂದು ದೂರನ್ನು ದಾಖಲಿಸಲು ಯಾವುದೇ ಶುಲ್ಕವನ್ನು ಕೇಳುವುದಿಲ್ಲ.**

ಅರಣ್ಯ ಪಡೆಗಳ ಜೊತೆ ನಕಲಿ ಸಮರದಲ್ಲಿ ಆಶಾಳ ಪತಿ ಕೊಲ್ಲಲ್ಪಟ್ಟರು. ಆಕೆಯು ಹರೀಶ್ ಎಂಬುವರ ಸಹಾಯ ಪಡೆದು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರನ್ನು ಸಲ್ಲಿಸಿದರು. ಆತನು ಒಂದು ಸರ್ಕಾರೇತರ ಸಂಸ್ಥೆಯಲ್ಲಿದು ಆಯೋಗದಿಂದ ದೂರುಗಳನ್ನು ದಾಖಲಿಸಲು ಅಧಿಕಾರ ಹೊಂದಿರುವುದರಿಂದ 500 ರೂಪಾಯಿಗಳ ಖರ್ಚಾಗುವುದೆಂದು ತಿಳಿಸಿದನು. ಹರೀಶನು ಅಪ್ರಾಮಾಣಿಕ. ಮಾನವ ಹಕ್ಕುಗಳ ಆಯೋಗಗಳು ದೂರುಗಳನ್ನು ದಾಖಲಿಸುವ ಉದ್ದೇಶಕ್ಕಾಗಿ ಯಾವುದೇ ಸರ್ಕಾರೇತರ ಸಂಸ್ಥೆಗಳೊಡನೆ ಅಥವಾ ವ್ಯಕ್ತಿಗಳೊಡನೆ (ವಕೀಲರೂ ಸೇರಿದಂತೆ) ಕೆಲಸ ಮಾಡುವುದಿಲ್ಲ.

**ಒಂದು ದೂರನ್ನು ದಾಖಲಿಸಲು ವಕೀಲರ ಅವಶ್ಯಕತೆಯಿದೆಯೇ?**

ಇಲ್ಲ. ದೂರನ್ನು ದಾಖಲಿಸುವ ಸಲುವಾಗಿ ಅಥವಾ ಆಯೋಗದ ಮುಂದೆ ವಾದವನ್ನು ಮಂಡಿಸಲು ಒಬ್ಬ ವಕೀಲ ಅಥವಾ ನ್ಯಾಯವಾದಿಯ ಅವಶ್ಯಕತೆ ಇಲ್ಲ. ಯಾರು ಬೇಕಾದರೂ ಆಯೋಗಕ್ಕೆ ಪತ್ರ ಬರೆದು ಏನಾಗಿದೆ ಹಾಗೂ ಏಕೆ ದೂರನ್ನು ದಾಖಲಿಸಲಾಗುತ್ತಿದೆ ಎಂಬುದನ್ನು ತಿಳಿಸಬಹುದು. ಪತ್ರವು ಸ್ಪಷ್ಟವಾಗಿದ್ದು ಸರಳವಾಗಿರಬೇಕು. ಕಾನೂನಿನ ಭಾಷೆಯಲ್ಲಿರಬೇಕಾದ ಅವಶ್ಯಕತೆಯಿಲ್ಲ. ಪ್ರತಿಯೊಂದು ಘಟನೆಯ ಯಥಾಸ್ಥಿತಿಯ ಬಗ್ಗೆ ವಿವರಗಳನ್ನು ನೀಡಿ ಯಾರು ತೊಂದರೆ ನೀಡಿದರು ಹಾಗೂ ಯಾವ ರೀತಿ ನಷ್ಟ ಅಥವಾ ಹಾನಿಯುಂಟಾಗಿದೆ ಎಂಬುದನ್ನು ತೋರಿಸುವ ಪತ್ರವಿದ್ದರೆ ಸಾಕು. ಆಯೋಗಗಳಲ್ಲಿ ಸರಳವಾದ ದೂರಿನ ನಮೂನೆಯಿದ್ದು ಅದನ್ನು ಉಪಯೋಗಿಸಬಹುದಾದರೂ ಆ ನಮೂನೆಯಲ್ಲೇ ಅರ್ಜಿ ಸಲ್ಲಿಸಬೇಕಾದ ಅವಶ್ಯಕತೆಯಿಲ್ಲ. ನೋಂದಾಯಿಸಿದ ಅಂಚೆ ಅಥವಾ ವೇಗವಾಗಿ ತಲುಪಬಲ್ಲಂತಹ ಅಂಚೆಯ ಮೂಲಕ ದೂರನ್ನು ಕಳುಹಿಸಿದರೆ ಸಮಯಕ್ಕೆ ಸರಿಯಾಗಿ ತಲುಪಿದೆ

ಎಂದು ಖಚಿತಪಡಿಸಿಕೊಳ್ಳಲು ಅನುಕೂಲವಾಗುತ್ತದೆ. ದೂರನ್ನು ಸಲ್ಲಿಸಬೇಕಾದ ಒಬ್ಬ ವ್ಯಕ್ತಿಗೆ ಓದಲು ಅಥವಾ ಬರೆಯಲು ಬಾರದಿದ್ದರೆ ಆತನು/ಆಕೆಯು ಬೇರೆಯವರಿಂದ ಬರೆಸಬಹುದು ಅಥವಾ ಮಾನವ ಹಕ್ಕುಗಳ ಆಯೋಗಕ್ಕೆ ಖುದ್ದಾಗಿ ಬರಬಹುದು.

**ಮಾನವ ಹಕ್ಕುಗಳ ಆಯೋಗಗಳು ತೆಗೆದುಕೊಳ್ಳಲಾರದಂತಹ ದೂರುಗಳೇನಾದರೂ ಇವೆಯೇ?**

ಸಾಮಾನ್ಯವಾಗಿ ಮಾನವ ಹಕ್ಕುಗಳ ಆಯೋಗಗಳು ಈ ಕೆಳಕಂಡ ಸಂದರ್ಭಗಳಲ್ಲಿ ದೂರುಗಳನ್ನು ತೆಗೆದುಕೊಳ್ಳುವುದಿಲ್ಲ:

- ದೂರು ಖಾಸಗಿ ವ್ಯಕ್ತಿಯ ವಿರುದ್ಧವಾಗಿದ್ದು ಅದು ರಾಜ್ಯ ಅಥವಾ ರಾಜ್ಯದ ಪ್ರತಿನಿಧಿಗಳ ವಿರುದ್ಧವಲ್ಲದಿದ್ದರೆ

---

ಮಾನವ ಹಕ್ಕುಗಳ ಆಯೋಗಗಳು ಸರ್ಕಾರವು ತನ್ನ ಅಧಿಕಾರವನ್ನು ಮೀರದಂತೆ ನೋಡಿಕೊಳ್ಳಲು ಸ್ಥಾಪಿತವಾಗಿವೆ. ಆದಕಾರಣ, ಗೃಹ ಕಲಹಗಳು, ಮೋಸ, ಆಸ್ತಿಯ ವಸೂಲಿ, ಮೋಸದ ಠೇವಣಿ ಯೋಜನೆಗಳು, ಮಾಲೀಕರು–ಬಾಡಿಗೆದಾರರ ವ್ಯಾಜ್ಯಗಳು ಇತ್ಯಾದಿಗಳು ಖಾಸಗಿ ವ್ಯಕ್ತಿಗಳ ವಿರುದ್ಧವಾದ್ದರಿಂದ ಸಾಮಾನ್ಯವಾಗಿ ಅವುಗಳನ್ನು ತೆಗೆದುಕೊಳ್ಳುವುದಿಲ್ಲ.

---

- ಮಾನವ ಹಕ್ಕುಗಳ ಉಲ್ಲಂಘನೆಯಾದ ಒಂದು ವರುಷದ ನಂತರ ದೂರುದಾರರು ಆಯೋಗವನ್ನು ಸಂಪರ್ಕಿಸಿದರೆ
- ಇನ್ನೊಂದು ಮಾನವ ಹಕ್ಕುಗಳ ಆಯೋಗದಿಂದ ಪ್ರಕರಣವು ಈಗಾಗಲೇ ವಿಚಾರಣೆಯಲ್ಲಿದ್ದರೆ

- ಪ್ರಕರಣವು ನ್ಯಾಯಾಲಯದ ಮುಂದಿದ್ದು ಅಲ್ಲಿ ಪರಿಹಾರ ದೊರಕುವ ಸಾಧ್ಯತೆಯಿದ್ದರೆ ವಾಸ್ತವಿಕ ತೊಂದರೆಗಳಿಂದಾಗಿ, ಮಾನವ ಹಕ್ಕುಗಳ ಆಯೋಗಗಳು ಕೆಳಕಂಡ ದೂರುಗಳನ್ನು ತೆಗೆದುಕೊಳ್ಳುವುದಿಲ್ಲ:
- ಅಸ್ಪಷ್ಠ – ಕೆಟ್ಟದಾಗಿ ಬರೆದಿರುವ ಕಾರಣ ಅದನ್ನು ಓದಲು ಸಾಧ್ಯವಾಗದಿದ್ದರೆ;
- ಅನಾಮಧೇಯ ಅಥವಾ ವಿಶದವಾಗಿಲ್ಲದ – ಸಹಿ ಹಾಕದೆ ದೂರುದಾರರು ಯಾರೆಂದು ತಿಳಿಸದೆ ಅಥವಾ ಸಮಸ್ಯೆ ಏನು ಎಂದು ತಿಳಿಸದಿದ್ದರೆ;
- ಕ್ಷುಲ್ಲಕ ಅಥವಾ ತಿಳಿಗೇಡಿತನದ್ದಿಂದ ಕೂಡಿದ್ದರೆ.

**ಮಾನವ ಹಕ್ಕುಗಳ ಆಯೋಗಗಳು ತೆಗೆದುಕೊಳ್ಳಲಾರದಂತಹ ದೂರುಗಳ ಉದಾಹರಣೆಗಳು:**

- ಎಬಿಸಿ ಪ್ರೈ.ಲಿ.ನಿಂದ ಮಹೇಶ್‌ರವರ ಉದ್ಯೋಗದ ಒಪ್ಪಂದವನ್ನು ಮುಕ್ತಾಯಗೊಳಿಸುವುದು
- ಮಾಲಿನಿಯವರ ಪತ್ರವನ್ನು ಅಂಚೆ ಇಲಾಖೆಯವರು ತಲುಪಿಸಲು ವಿಫಲರಾಗುವುದು
- ಒಬ್ಬ ಅಂಗಡಿಯವರು ದಿಯಾ ಎಂಬುವರಿಗೆ ದೋಷವಿರುವ ದೂರದರ್ಶನ ಯಂತ್ರವನ್ನು ಮಾರಾಟ ಮಾಡುವುದು
- ರಮೇಶ್ ಬಾಬುರವರ ಗ್ರಾಮದಲ್ಲಿ ಸೂಚನಾ ಫಲಕಗಳನ್ನು ದುರಸ್ತಿ ಮಾಡಲು ಸರ್ಕಾರಿ ಗುತ್ತಿಗೆದಾರರು ವಿಫಲರಾಗುವುದು
- ಅಕ್ರಮ್ ಮತ್ತು ಸಾಜಿದ್‌ರವರ ನಡುವೆ ಅವರ ವಂಶಪಾರಂಪರ್ಯವಾದ ಮನೆಯನ್ನು ಭಾಗ ಮಾಡಲು ಇರುವ ವ್ಯಾಜ್ಯ
- ಬೀನಾ ಮತ್ತು ರಾಮನ್‌ರ ನಡುವೆ ಅವರ ಮಗನು ಯಾರ ವಶದಲ್ಲಿರಬೇಕೆಂಬುದರ ಬಗ್ಗೆ ಇರುವ ವೈವಾಹಿಕ ವ್ಯಾಜ್ಯ

- ಜಗದೀಶರ ಬಾಡಿಗೆದಾರರು ಬಾಡಿಗೆ ನೀಡದಿರುವುದು
- ಗುತ್ತಿಗೆದಾರರು ವಾಹನ ನಿಲುಗಡೆ ಮಾಡುವಾಗ ಹೆಚ್ಚಿನ ಶುಲ್ಕ ತೆಗೆದುಕೊಳ್ಳುವುದು
- ರೈಲುಗಳಲ್ಲಿನ ಮಲಗುವ ಆಸನಗಳು ಕಳಪೆ ಸ್ಥಿತಿಯಲ್ಲಿರುವುದು
- ಸರ್ಕಾರಿ ನೌಕರರಿಗೆ ಪ್ರಯಾಣ ಭತ್ಯವನ್ನು ಕಡಿಮೆ ಮಾಡುವುದು
- ಸಾಮಾನು ಮತ್ತು ಸರಂಜಾಮುಗಳ ಮೇಲೆ ಅಬಕಾರಿ ಇಲಾಖೆಯವರು ಹೆಚ್ಚಿನ ತೆರಿಗೆಯನ್ನು ವಿಧಿಸುವುದು
- ನೆರೆಯವರು ಹಾಕಿದ ಜೋರಾದ ಧ್ವನಿವರ್ಧಕ ಯಂತ್ರದಿಂದಾಗಿ ಮಣಿಯು ಅಧ್ಯಯನ ಮಾಡಲು ಸಾಧ್ಯವಾಗದಿರುವುದು
- ಸರಿಯಾಗಿ ನಡೆಸದ ವಸತಿ ಕಲ್ಯಾಣ ಸಂಘದ ಕಾರ್ಯದರ್ಶಿಗಳ ಚುನಾವಣೆ

**ಮಾನವ ಹಕ್ಕುಗಳ ಆಯೋಗಗಳಲ್ಲಿ ದಾಖಲಿಸಬಹುದಾದ ದೂರುಗಳ ಉದಾಹರಣೆಗಳು:**

- ಪೊಲೀಸ್ ಠಾಣೆಯಲ್ಲಿ ವಿದ್ಯುಚ್ಛಕ್ತಿಯ ಶಾಕ್ ನೀಡಿದುದಕ್ಕಾಗಿ ಸರೋಜಿನಿಯವರ ಮಗ ಮೃತಪಟ್ಟಿದ್ದರೂ ಅದನ್ನು ಅಪಘಾತವೆಂದು ಪರಿಗಣಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ಪೊಲೀಸರು ಪ್ರಯತ್ನಿಸುವುದು
- ಸರ್ಕಾರಿ ಆಸ್ಪತ್ರೆಯಲ್ಲಿ ಸೋಂಕಿನಿಂದ ಕೂಡಿದ ಸಿರಿಂಜಿನ ಸಂಪರ್ಕ ಪಡೆದಿಂದಾಗಿ ರೀಟಾ ಏಡ್ಸ್ ರೋಗಕ್ಕೆ ತುತ್ತಾಗುವುದು
- ರೈಲುಬಂಡಿಗಳಲ್ಲಿ ಮಹಿಳೆಯರು ಸುರಕ್ಷಿತವಾಗಿ ಪ್ರಯಾಣ ಮಾಡಲು ರೈಲ್ವೇ ಅಧಿಕಾರಿಗಳು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲರಾಗುವುದು
- ವಿಶಾಲ ಮನೆಯ ಕಿಟಕಿ ಗಾಜುಗಳನ್ನು ಪೊಲೀಸರು ಒಡೆದುಹಾಕಿ ಪೊಲೀಸ್

ಅಧೀಕ್ಷಕರ ವಿರುದ್ಧ ಸಾಕ್ಷಿ ನೀಡಬಾರದೆಂದು ಬೆದರಿಕೆ ಒಡ್ಡುವುದು

- ಗ್ರೆನೇಡ್ ದಾಳಿಯ ಸಂದರ್ಭದಲ್ಲಿ ಭದ್ರತಾ ಪಡೆಯವರು ಮನಬಂದಂತೆ ಗುಂಡು ಹಾರಿಸಿದ ಪರಿಣಾಮವಾಗಿ ಅಸ್ಲಂ ಮತ್ತು ಸುಧಾ ಇಬ್ಬರೂ ಗಾಯಾಳುಗಳಾಗಿ ತೊಂದರೆಗೆ ಒಳಗಾಗುವುದು
- ದಲಿತರಿಗೆ ಅವಮಾನ ಮಾಡುವ ಉದ್ದೇಶದಿಂದ ಮುತ್ತುವಿನ ಮೇಲ್ಜಾತಿಯ ಗ್ರಾಮಸ್ಥರು ಆತನು ಮಲವನ್ನು ತಿನ್ನುವಂತೆ ಮಾಡಿದಾಗ ಪೊಲೀಸರು ಪ್ರಕರಣವನ್ನು ದಾಖಲಿಸಿಕೊಳ್ಳಲು ನಿರಾಕರಿಸುವುದು
- ಸಾಜಿದ್ ಮತ್ತು ಕರೀಂರಿಗೆ ಅವಮಾನ ಮಾಡುವ ಸಲುವಾಗಿ ಪೊಲೀಸರು ಅವರಿಬ್ಬರನ್ನೂ ಒಂದು ಕತ್ತೆಯ ಮೇಲೆ ಕುಳ್ಳಿರಿಸಿ ಅವರಿಗೆ ಮೂತ್ರವನ್ನು ಕುಡಿಸುವುದು
- ವಿದ್ಯುಚ್ಛಕ್ತಿ ಇಲಾಖೆಯ ಲೈನ್‌ಮನ್‌ಗಳ ನಿರ್ಲಕ್ಷ್ಯತನದಿಂದಾಗಿ ಅಮೃತಾರಿಗೆ ಜೀವಂತ ವಿದ್ಯುಚ್ಛಕ್ತಿ ವೈರ್ ತಗುಲಿ ಆಕೆ ಸಾವಿಗೀಡಾಗುವುದು
- ಹಿರಿಯ ವಿದ್ಯಾರ್ಥಿಗಳು ಮಾಡುವ 'ರ್‍ಯಾಗಿಂಗ್'ನಿಂದಾಗಿ ಹೊಸದಾಗಿ ಸೇರಿದ ವಿದ್ಯಾರ್ಥಿಗಳು ಅವಮಾನಕ್ಕೆ ಒಳಗಾಗುವುದನ್ನು ತಪ್ಪಿಸಲು ಬೀನಾ ವಿಶ್ವವಿದ್ಯಾಲಯ ಯಾವುದೇ ಕ್ರಮ ಕೈಗೊಳ್ಳದಿರುವುದು
- ಸಾರ್ವಜನಿಕ ಸ್ಥಳದಲ್ಲಿ ಸಿಹಿ ಅಂಗಡಿಯವರು ಸಿಹಿ ತಿಂಡಿಯನ್ನು ತಯಾರಿಸಿ ಅದರಿಂದ ಸಾರ್ವಜನಿಕ ಉಪದ್ರವ ಹಾಗೂ ಆರೋಗ್ಯದ ಅಪಾಯವನ್ನುಂಟುಮಾಡುವುದನ್ನು ತಪ್ಪಿಸಲು ಪುರಸಭೆಯವರು ವಿಫಲರಾಗುವುದು

- ಜೂಲಿಯಸ್ ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡಲು ಸಾಧ್ಯವಾಗದ ಕಾರಣ ಆತನನ್ನು ಸ್ಥಳೀಯ ಭೂಮಾಲೀಕರ ಜಮೀನಿನಲ್ಲಿ ಜೀತದಾಳಾಗಿ ದುಡಿಯುವಂತೆ ಮಾಡುವುದು
- ಮಿತಾಲಿಗೆ ಆತನ ಮೇಲಧಿಕಾರಿಯಿಂದಾದ ಲೈಂಗಿಕವಾಗಿ ಕಿರುಕುಳದ ಬಗ್ಗೆ ನೀಡಿದ ದೂರನ್ನು ವಿಚಾರಣೆ ಮಾಡದಿರುವುದು
- ಕದನ ಮಾಡುವವರೊಡನೆ ಮಾಡಿದ ಸೆಣಸಾಟದ ನಂತರ ಸೇನೆಯವರು ತೆಂಬುವಿನ ಗ್ರಾಮದ ಮನೆಗಳನ್ನು ಸುಟ್ಟುಹಾಕುವುದು
- ಜೋಸೆಫನ ಮನೆಯಲ್ಲಿ ಪಾರ್ಲಿಮೆಂಟ್ ಸದಸ್ಯರೊಬ್ಬರು ಅನಧಿಕೃತವಾಗಿ ವಾಸವಾಗಿರುವ ಪ್ರಕರಣವನ್ನು ಪೊಲೀಸರು ದಾಖಲು ಮಾಡಿಕೊಳ್ಳದಿರುವುದು
- ಥಾಮಸನು ಹಣ ನೀಡಲಿಲ್ಲ ಎಂಬ ಕಾರಣದಿಂದ ಕೇಂದ್ರ ಕಾರಾಗೃಹದ ಸಿಬ್ಬಂದಿಯವರು ಆತನಿಗೆ ಕಂಬಳಿಗಳನ್ನು ನೀಡಲು ನಿರಾಕರಿಸುವುದು
- ಪರ್ಶಾದ್ ಬಡಾವಣೆಯ ಚರ್ಮ ಹದ ಮಾಡುವ ಅನಧಿಕೃತವಾದ ಕಾರ್ಖಾನೆಯಿಂದ ಹೊರಹೊಮ್ಮುವ ದುರ್ನಾತದಿಂದಾಗಿ ಅಲ್ಲಿ ಜೀವಿಸಲು ಅಸಾಧ್ಯವಾದ ಪರಿಸ್ಥಿಯನ್ನು ತಡೆಗಟ್ಟಲು ರಾಜ್ಯ ವಾಯುಮಾಲಿನ್ಯ ಮಂಡಳಿಯು ವಿಫಲವಾಗುವುದು
- ಬುಡಕಟ್ಟು ಜನಾಂಗದ ಜಮೀನಿನಲ್ಲಿ ಜಲಾಶಯ ಹಾಗೂ ರಾಷ್ಟ್ರೀಯ ಉದ್ಯಾನವನವನ್ನು ನಿರ್ಮಿಸಿದ ಪರಿಣಾಮವಾಗಿ ಸ್ಥಳಾಂತರಗೊಂಡವರಿಗೆ ಸರ್ಕಾರವು ಪುನರ್ವಸತಿ ಸೌಕರ್ಯ ಕಲ್ಪಿಸಲು ಉದಾಸೀನ ತೋರುವುದು

- ವಿಚಾರಣಾಧೀನ ಖೈದಿಗಳನ್ನು ಮಿತಿಮೀರಿ ದೀರ್ಘಕಾಲದವರೆಗೆ ಅನಧಿಕೃತವಾಗಿ ಒಂದೆಡೆ ಬಂಧನಲ್ಲಿಡುವುದು

**ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಗಳಲ್ಲಿ ಕೈಗೆತ್ತಿಕೊಂಡಿರುವ ಕೆಲವು ಪ್ರಕರಣಗಳ ವಿವರಗಳು ಕೆಳಕಂಡಂತಿವೆ:**

1. ಉಡುಪಿ ಜಿಲ್ಲೆ ತೊಂಬಬ್ಬು ಶಾಲೆಯ ಅಡುಗೆ ಸಹಾಯಕಿ ದಲಿತ ವಿಧವೆ ಶ್ರೀಮತಿ ಜಯಲಕ್ಷ್ಮಿ ಇವರಿಗೆ ಏಡ್ಸ್ ಹಣೆ ಪಟ್ಟಿ ಕಟ್ಟಿ ಅಪಪ್ರಚಾರ ನಡೆಸಿ ಸಾಮಾಜಿಕ ಬಹಿಷ್ಕಾರಕ್ಕೆ ಗುರಿಪಡಿಸಿ ಮಾನಸಿಕವಾಗಿ ಹಿಂಸೆ ಮಾಡಿದ್ದಾರೆ ಎನ್ನುವ ದೂರನ್ನು ಕರ್ನಾಟಕ ಜನಪರ ವೇದಿಕೆಯವರು ಆಯೋಗಕ್ಕೆ ಸಲ್ಲಿಸಿದ ಮೇಲೆ ವಿಚಾರಣೆ ಮಾಡಿದಾಗ ಅವರಿಗೆ ಏಡ್ಸ್ ಇದೆ ಎನ್ನುವುದು ಸಾಬೀತಾಗಿಲ್ಲವೆನ್ನುವುದು ಸ್ಪಷ್ಟವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಆಯೋಗವು ಸರ್ಕಾರಕ್ಕೆ ದಿನಾಂಕ 31.03.2008ರಂದು ಕೆಳಕಂಡಂತೆ ಶಿಫಾರಸ್ಸು ಮಾಡಿದೆ:

"1. ಶ್ರೀಮತಿ ಜಯಲಕ್ಷ್ಮೀ ಇವಳು ಮಾಡಿದ ಅಡುಗೆಯನ್ನು ಇತರೆ ವಿದ್ಯಾರ್ಥಿಗಳು ಊಟ ಮಾಡುವಂತೆ ಮಾಡುವ ಬಗ್ಗೆ ಜಿಲ್ಲಾಡಳಿತವು ಸೂಕ್ತ ನಿಗಾ ಇಟ್ಟು ಅಂತಹ ಮಕ್ಕಳ ಪಾಲಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸೂಕ್ತ ತಿಳುವಳಿಕೆಯನ್ನು ನೀಡಲು ಕ್ರಮ ಕೈಗೊಳ್ಳುವುದು.

2. ಶ್ರೀಮತಿ ಜಯಲಕ್ಷ್ಮಿಯವರಿಗೆ ಏಡ್ಸ್ ರೋಗವಿದೆಯೆಂದು ಸುಳ್ಳು ವದಂತಿ ಹಬ್ಬಿಸಿದವರ ಮೇಲೆ ನಿಗಾ ಇಟ್ಟು ಆ ರೀತಿ ಸುಳ್ಳು ವದಂತಿ ಆಪಾದನೆಗೆ ಕ್ರಮ ಕೈಗೊಳ್ಳುವುದು.

3. ತೊಂಬಬ್ಬು ಗ್ರಾಮದ ವಾಸಿಗಳಾದ (1) ಸತ್ಯ ನಾರಾಯಣ ಪೂಜಾರಿ (2) ಶೀನ

ನಾಯ್ಕ (3) ಗೋವಿಂದ ಪೂಜಾರಿ (4) ನಾರಾಯಣ ಪೂಜಾರಿ (5) ರತಿ ಪೂಜಾರ್ತಿ ಮತ್ತು (6) ಕೃಷ್ಣಯ್ಯ ಶೆಟ್ಟಿ ಇವರು ಶ್ರೀಮತಿ ಜಯಲಕ್ಷ್ಮೀ ಇವರಿಗೆ ಬೆದರಿಕೆ ಹಾಕಿ ಯಾವುದೇ ರೀತಿಯ ತೊಂದರೆ ನೀಡದಂತೆ ಉಡುಪಿ ಜಿಲ್ಲೆಯ ಜಿಲ್ಲಾಧಿಕಾರಿಯವರು (ಆರಕ್ಷಕ ಅಧೀಕ್ಷಕರ ಜೊತೆಗೆ) ನಿಗಾ ಇಟ್ಟು, ಕಾನೂನಿನಂತೆ ಸೂಕ್ತ ಕ್ರಮ ಕೈಗೊಳ್ಳುವುದು.

4. ಒಂದು ವೇಳೆ ಸದರಿ ಶ್ರೀಮತಿ ಜಯಲಕ್ಷ್ಮೀಯವರ ಬಗ್ಗೆ ಸುಳ್ಳು ವದಂತಿಯನ್ನು ಹಬ್ಬಿಸಿ ಅವಳ ಮಾನವ ಹಕ್ಕುಗಳ ಉಲ್ಲಂಘನೆಗೆ ಕಾರಣರಾಗಿರುವವರು ಸದರಿ ಶಾಲೆಯ ಆಡಳಿತ ಮಂಡಳಿಯ ಸದಸ್ಯರಾಗಿದ್ದಲ್ಲಿ, ಅಥವಾ ಅಂತಹ ಸದಸ್ಯರ ಸಂಬಂಧಿಗಳಾಗಿದ್ದಲ್ಲಿ, ಅಂತಹವರನ್ನು ಆಡಳಿತ ಮಂಡಳಿಯ ಸದಸ್ಯತ್ವದಿಂದ ಕಡಿಮೆ ಮಾಡಿ ಸಲಹಾ ಮಂಡಳಿಯಿಂದ ತೆಗೆದುಹಾಕುವುದು.”

ಅದರಂತೆ ಶ್ರೀಮತಿ ಜಯಲಕ್ಷ್ಮೀ ರವರು ಕರ್ತವ್ಯದಲ್ಲಿ ಮುಂದುವರೆಯುತ್ತಿರುವುದಾಗಿ ಉಡುಪಿ ಜಿಲ್ಲಾಧಿಕಾರಿಗಳು ವರದಿ ಮಾಡಿದ್ದಾರೆ.

2. ಅಲಸೂರು ಪೋಲೀಸ್ ಠಾಣೆಯಲ್ಲಿ ವ್ಯಕ್ತಿಯೊಬ್ಬರನ್ನು ಅಕ್ರಮ ಬಂಧನದಲ್ಲಿಟ್ಟಿದ್ದಾರೆಂದು ನೀಡಿದ ದೂರಿನ ಮೇಲೆ ಆಯೋಗ ಅಲಸೂರು ಪೋಲೀಸ್ ಠಾಣೆಗೆ ಅನಿರೀಕ್ಷಿತ ಭೇಟಿ ನೀಡಿ



ಪರಿಸ್ಥಿತಿಯನ್ನು ಪರಿಶೀಲಿಸಿತು. ಪರಿಶೀಲನೆಯ ಸಂದರ್ಭದಲ್ಲಿ ಅವರನ್ನು ಪೋಲೀಸ್ ಠಾಣೆಗೆ ಯಾವಾಗ ಕರೆದುಕೊಂಡು ಬಂದರು ಎನ್ನುವುದರ ಬಗ್ಗೆ ಪೋಲೀಸ್ ದಾಖಲೆಗಳಲ್ಲಿ ಇಲ್ಲದಿರುವುದನ್ನು ಮನಗಂಡು ಕೂಡಲೇ ಈ ಪ್ರಕರಣದಲ್ಲಿ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚನೆ ನೀಡಿ ಅದರ ಮೇಲೆ ಯಾರನ್ನು ಆರೋಪಿ ಎಂದು ಬಣ್ಣಿಸಿದ್ದರೋ ಅವರನ್ನು ಮ್ಯಾಜಿಸ್ಟ್ರೇಟರ ಮುಂದೆ ಕೂಡಲೆ ಹಾಜರುಪಡಿಸುವಂತೆ ಸೂಚನೆ ನೀಡಲಾಯಿತು. ಅದಾದ ನಂತರ ಅವರನ್ನು ಸಂಬಂಧಪಟ್ಟ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಿರುವುದಾಗಿ ವರದಿ ಮಾಡಿದ್ದಾರೆ.

3. ಕರ್ನಾಟಕದ ಬಂದೀಖಾನೆಗಳಿಂದ ನ್ಯಾಯಾಲಯಗಳಿಗೆ ಖೈದಿಗಳನ್ನು ಸೂಕ್ತ ಸಮಯದಲ್ಲಿ ತೆಗೆದುಕೊಂಡು ಹೋಗುತ್ತಿಲ್ಲ ಎನ್ನುವ ದೂರುಗಳ ಬಗ್ಗೆ ಬಂದೀಖಾನೆ ಮಹಾ ನಿರ್ದೇಶಕರಿಗೆ ಸೂಚನೆ ನೀಡಲಾಗಿದೆ.

4. ವಿವಿಧ ದಿನಪತ್ರಿಕೆಗಳಲ್ಲಿ ಬಂದ ವರದಿಯನ್ನು ಆಧರಿಸಿ "ಕಲ್ಲು ಗಣಿಯಲ್ಲಿ ಮದ್ದು ಸಿಡಿದು ಯುವತಿ ಸಾವು" ಎನ್ನುವ ಪ್ರಕರಣವನ್ನು ಆಯೋಗವು ಸ್ವಯಂಪ್ರೇರಣೆಯಿಂದ ವಿಚಾರಣೆಗೆ ಕೈಗೆತ್ತಿಕೊಂಡಿತು. ವಿಚಾರಣೆಗೆ ಸಂಬಂಧಪಟ್ಟ ಇಲಾಖೆಗಳಿಂದ ವರದಿ ತರಿಸಿದ ಮೇಲೆ ಸಾರ್ವಜನಿಕ ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಮಾನವ ಹಕ್ಕುಗಳ ಉಲ್ಲಂಘನೆಯಾಗಿ ಕುಮಾರಿ ಪುಷ್ಪಾ ಸಾವಿಗೆ ಕಾರಣವಾಗಿದೆ ಎನ್ನುವ ನಿರ್ಧಾರಕ್ಕೆ ಆಯೋಗವು ಬಂದಿತು. ತನ್ನ

ಆದೇಶದಲ್ಲಿ ಕಾರಣಗಳನ್ನು ನೀಡಿ ಕುಮಾರಿ ಪುಷ್ಪ ಅವರ ತಾಯಿ ಶ್ರೀಮತಿ ಲತ ಅವರಿಗೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಮಂಜೂರು ಮಾಡುವಂತೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ನಿರ್ದೇಶನ ನೀಡಿದೆ ಹಾಗೂ ಆ ರೀತಿ ಮಂಜೂರು ಮಾಡಿದ



ಪರಿಹಾರವನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ವಸೂಲು ಮಾಡಲು ಕ್ರಮ ತೆಗೆದುಕೊಂಡು ಮೂವತ್ತು ದಿವಸಗಳಲ್ಲಿ ವರದಿ ಮಾಡಬೇಕೆಂದು ಸೂಚನೆ ನೀಡಲಾಗಿದೆ. ಈ ಆದೇಶವನ್ನು ದಿನಾಂಕ 13.03.2008ರಂದು ನೀಡಲಾಗಿದೆ. ಜೊತೆಗೆ ಕಂದಾಯ, ಅರಣ್ಯ, ಭೂ ಮತ್ತು ಗಣಿ, ವಿಜ್ಞಾನ ಮತ್ತು ಪೊಲೀಸ್ ಅಧಿಕಾರಿಗಳ ನಿರ್ಲಕ್ಷ್ಯತೆಯ ಬಗ್ಗೆ ವಿವರವಾದ ತನಿಖೆಗೆ ಸಿ.ಒ.ಡಿ.ಗೆ ಒಪ್ಪಿಸಲು ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು, ಗೃಹ ಇಲಾಖೆ ಇವರಿಗೆ ಸೂಚನೆ ನೀಡಲಾಗಿದೆ.

5. ಆಯೋಗ ಸ್ವಯಂಪ್ರೇರಿತವಾಗಿ ಬೆಂಗಳೂರು ನಗರದ ಖಾಲಿ ಜಾಗಗಳನ್ನು ಖಾಸಗಿ ಮತ್ತು ಸಾರ್ವಜನಿಕ ಶೌಚಾಲಯಗಳನ್ನಾಗಿ ಉಪಯೋಗಿಸುತ್ತಿದ್ದಾರೆ ಎನ್ನುವ ಅಂಶಗಳನ್ನು ಗಮನಿಸಿ ಬೆಂಗಳೂರು ಬೃಹತ್ ಮಹಾ ನಗರ ಪಾಲಿಕೆಗೆ ನೋಟೀಸ್ ನೀಡಲಾಗಿದ್ದು ಬೆಂಗಳೂರು ಮಹಾ ನಗರ ಪಾಲಿಕೆಯು ನೀಡಿದ ವರದಿಯನ್ನು ಗಮನಿಸಿ ಬೆಂಗಳೂರು ಬೃಹತ್ ಮಹಾ ನಗರ ಪಾಲಿಕೆಯು ತನ್ನ ಕಾನೂನುಬದ್ಧ ಕರ್ತವ್ಯಗಳನ್ನು ನಿರ್ವಹಿಸಿಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದಿದ್ದು ಆರೋಗ್ಯ ಇಲಾಖೆಯೂ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳ ಮುಖ್ಯ ಅಧಿಕಾರಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಸಾರ್ವಜನಿಕ ಆರೋಗ್ಯ ನಿಯಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಕ್ರಮ ಕೈಗೊಂಡು ವರದಿ ನೀಡುವಂತೆ ಪಾಲಿಕೆಗೆ ನಿರ್ದೇಶನ ನೀಡಿದೆ.

6.    ಶ್ರೀಮತಿ ಶ್ಯಾಮಲತಾ ಸಿಂಗ್ ರವರು ಶಿಕ್ಷಕಿಯಾಗಿದ್ದು ತಮಗೆ ಜುಲೈ 2001ರಿಂದ ಮಾರ್ಚ್ 2006ರ ವರೆಗೆ ವೇತನ ನೀಡುತ್ತಿಲ್ಲವೆಂದು ಆಯೋಗಕ್ಕೆ ದೂರು ಸಲ್ಲಿಸಿದ್ದರು.  ಈ



ದೂರಿನ ಬಗ್ಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಇಲಾಖೆಯಿಂದ ವಿವರವಾದ ವರದಿಯನ್ನು ಕೇಳಲಾಗಿದ್ದು ಅವರ ವರದಿಯು ಸಹ ಬಂದಿರುತ್ತದೆ.  ಈ ಪ್ರಕರಣದಲ್ಲಿ ಅವರಿಗೆ ಸಲ್ಲಬೇಕಾದ ವೇತನವನ್ನು ನೀಡದೆ ಅವರ ಹಕ್ಕು ಉಲ್ಲಂಘನೆಯಾಗಿದೆ ಎನ್ನುವ ತೀರ್ಮಾನಕ್ಕೆ ಆಯೋಗದ ವಿಭಾಗೀಯ ಪೀಠವು ಬಂದಿದೆ.  ಇದಕ್ಕೆ ಮುಖ್ಯ ಕಾರಣ ಹಿಂದೆ ಇದೇ ದೂರುದಾರರು ಉಪ ಲೋಕಾಯುಕ್ತರಿಗೆ ದೂರು ಅರ್ಜಿ ಸಲ್ಲಿಸಿದಾಗ ಉಪ ಲೋಕಾಯುಕ್ತರು ಸಹ ವೇತನ ನೀಡಬೇಕು ಎಂದು ಶಿಫಾರಸ್ಸು ಮಾಡಿದ್ದರೂ ಸರ್ಕಾರ ಕ್ರಮ ತೆಗೆದುಕೊಳ್ಳದೆ ಇದ್ದುದರಿಂದ ಉಪ ಲೋಕಾಯುಕ್ತರು ಶಾಸನದಡಿಯಲ್ಲಿ ಇರುವ ಅಧಿಕಾರವನ್ನು ಚಲಾಯಿಸಿ ರಾಜ್ಯಪಾಲರಿಗೆ ವಿಶೇಷ ವರದಿಯನ್ನು ಸಹ ಸಲ್ಲಿಸಿದ್ದಾರೆ.  ಸರ್ಕಾರವೇ ತನ್ನ ವರದಿಯಲ್ಲಿ ಈ ವೇತನ ನೀಡಬೇಕಾಗುತ್ತದೆ ಎನ್ನುವುದನ್ನು ಪರೋಕ್ಷವಾಗಿ ಒಪ್ಪಿಕೊಂಡ ಮೇಲೆ ವೇತನ ನೀಡಬೇಕಾದ್ದು ಸರ್ಕಾರದ ಕರ್ತವ್ಯವಾಗಿದೆ.  ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಕ್ಕೆ ಏನೇನು ಮಾರ್ಗ ಅನುಸರಿಸುವುದು ಎನ್ನುವುದನ್ನು ವಿವರಿಸಿದೆ.  ಸರ್ಕಾರಕ್ಕೆ ಕಾಲಾವಕಾಶವಿದ್ದರೂ ಸಹ ವಿದಿ ವಿಧಾನಗಳ ಪ್ರಕಾರ ಕ್ರಮ ಅನುಸರಿಸಿಲ್ಲ.  ಇದನ್ನು ಆಯೋಗ ಗಂಭೀರವಾಗಿ ಪರಿಗಣಿಸಿ ಇದು ಸರ್ಕಾರದ "ಕೆಂಪು ಪಟ್ಟಿ ಧೋರಣೆ"ಗೆ ಅತ್ಯುತ್ತಮ ಉದಾಹರಣೆ ಎಂದು ಮನಗಂಡು ಕೂಡಲೆ ವೇತನ ನೀಡಲು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ ಹಾಗೂ ಈ ರೀತಿ ವಿಳಂಬ ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದೂ ಸಹ ಸೂಚನೆ ನೀಡಿದೆ.

7. ದಿನಾಂಕ 13.12.2007ರಂದು ಡೆಕೆನ್ ಹೆರಾಲ್ಡ್ ದಿನ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಅಜಮತುಲ್ಲಾ ಎನ್ನುವ ಯುವಕ ಜಯನಗರ ಸಾರ್ವಜನಿಕ ಆಸ್ಪತ್ರೆಗೆ



ಚಿಕಿತ್ಸೆಗೆಂದು ಹೋದಾಗ ಅಲ್ಲಿಯ ನರ್ಸ್ ಬಿ.ಪಿ. ಪುಷ್ಪಲತ ಎಂಬುವರು ಚುಚ್ಚುಮದ್ದು ಹಾಕಿದ ನಂತರ ಆತನನ್ನು ತುರ್ತು ನಿಗಾ ಘಟಕಕ್ಕೆ ತೆಗೆದುಕೊಂಡು ಹೋದಾಗ ಆತ ಮೃತಪಟ್ಟಿದ್ದಾನೆ ಎಂದು ಆತನ ಸಂಬಂಧಿಗಳಿಗೆ ತಿಳಿಸಿದ್ದಾರೆ. ವೈದ್ಯಾಧಿಕಾರಿಗಳ ಮರಣೋತ್ತರ ವರದಿಯಲ್ಲಿ ಚುಚ್ಚುಮದ್ದಿನ ವ್ಯತಿರಿಕ್ತ ಪರಿಣಾಮದಿಂದ ಆತ ಮೃತಪಟ್ಟಿದ್ದಾನೆ ಎನ್ನುವುದು ಸ್ಪಷ್ಟವಾಗಿದೆ. ಈ ಪ್ರಕರಣವನ್ನು ಸ್ವಯಂಪ್ರೇರಣೆಯಿಂದ ವಿಚಾರಣೆಗೆ ತೆಗೆದುಕೊಂಡ ಆಯೋಗವು ಸರ್ಕಾರದ ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳಿಗೆ ಒಬ್ಬ ಹಿರಿಯ ಅಧಿಕಾರಿಗಳಿಂದ ವಿಚಾರಣೆ ಮಾಡಿಸಿ ವರದಿ ಸಲ್ಲಿಸಬೇಕೆಂದು ಸೂಚನೆ ನೀಡಿದ ಪರಿಣಾಮವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವರದಿಯ ಆಧಾರದ ಮೇಲೆ ಅಜಮತುಲ್ಲಾನ ಸಾವಿಗೆ ಜಯನಗರ ಆಸ್ಪತ್ರೆಯ ಅಧಿಕಾರಿಗಳ ನಿರ್ಲಕ್ಷ್ಯತೆಯೇ ಕಾರಣ ಎಂದು ಆಯೋಗ ತೀರ್ಮಾನಕ್ಕೆ ಬಂದಿದೆ. ಇದಕ್ಕೆ ಮುಖ್ಯ ಕಾರಣ ನೀಡಬೇಕಾದ ಚುಚ್ಚುಮದ್ದಿನ ವ್ಯತಿರಿಕ್ತ ಪರಿಣಾಮದಿಂದ ಈತ ಮೃತಪಟ್ಟಿದ್ದಾನೆ ಎನ್ನುವುದು ಸ್ಪಷ್ಟವಾಗಿದೆ. ಈತನ ಸಾವಿಗೆ ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶುಶ್ರೂಷಕಿ ಶ್ರೀಮತಿ ಬಿ.ಪಿ. ಪುಷ್ಪಲತ ಇವರು ತಪ್ಪಾಗಿ ರೋಗಿಗೆ ನೀಡಿದ ಚುಚ್ಚುಮದ್ದೇ ಕಾರಣ ಎನ್ನುವುದು ಖಚಿತವಾಗಿದೆ. ಇ.ಎನ್.ಟಿ. ತಜ್ಞರ ಮೇಲ್ವಿಚಾರಣೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಡಬೇಕಾಗಿದ್ದ ರೋಗಿಗೆ ಚುಚ್ಚುಮದ್ದು ನೀಡಲು ಬಿ.ಪಿ. ಪುಷ್ಪಲತ ಅವರು ಅರ್ಹರೇ ಇಲ್ಲವೇ ಎನ್ನುವುದರ ಬಗ್ಗೆ ಕೂಲಂಕುಷ ವಿಚಾರಣೆಗೆ

ಒಳಪಡಿಸಬೇಕೆಂದು ಆಯೋಗದಿಂದ ಸೂಚನೆ ನೀಡಲಾಗಿದೆ. ಪ್ರತಿಯೊಬ್ಬ ಮಾನವನಿಗೂ ಆರೋಗ್ಯದ ಹಕ್ಕು ಒಂದು ಮೂಲಭೂತ ಹಕ್ಕು. ಆತ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಾಗ ಇ.ಎನ್.ಟಿ. ತಜ್ಞರು ಆತನ ಶಸ್ತ್ರ ಚಿಕಿತ್ಸೆಗಾಗಿ ಮಾಡಿಕೊಳ್ಳಬೇಕಾದ ಪೂರ್ವ ಸಿದ್ಧತೆಗಳನ್ನು



ಮಾಡಿಕೊಳ್ಳದೆ ನಿರ್ಲಕ್ಷ್ಯತನ ತೋರಿರುವುದು ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎನ್ನುವ ತೀರ್ಮಾನಕ್ಕೆ ಆಯೋಗ ಬಂದಿದೆ. ಮಾನವ ಹಕ್ಕುಗಳ ಸಂರಕ್ಷಣೆ ಅಧಿನಿಯಮದ ಅನ್ವಯ ಅಜಮತುಲ್ಲಾನ ಆರೋಗ್ಯ ರಕ್ಷಣೆಯ ಬಗ್ಗೆ ನಿರ್ಲಕ್ಷ್ಯತೆ ತೋರಿದ ಇ.ಎನ್.ಟಿ. ತಜ್ಞರು ಮತ್ತು ಶುಶ್ರೂಷಕಿ ಬಿ.ಪಿ. ಪುಷ್ಪಲತ ಅವರು ಅರಿವಳಿಕೆ ಚುಚ್ಚುಮದ್ದನ್ನು ತಪ್ಪಾಗಿ ರೋಗಿಗೆ ನೀಡುವಂತೆ ಆದದ್ದು ಆಸ್ಪತ್ರೆಯ ಆಡಳಿತ ಮುಖ್ಯಸ್ಥರ ನಿರ್ಲಕ್ಷ್ಯತೆ ತೋರಿಸುತ್ತದೆ ಎನ್ನುವುದು ಆಯೋಗಕ್ಕೆ ಮನವರಿಕೆಯಾಗಿದೆ. ಆದಕಾರಣ ಈ ಕೆಳಕಂಡ ಶಿಫಾರಸ್ಸುಗಳನ್ನು ದಿನಾಂಕ 31.03.2008ರಂದು ಮಾಡಲಾಗಿದೆ:

1) ಶ್ರೀಮತಿ ಬಿ.ಪಿ. ಪುಷ್ಪಲತ, ಶುಶ್ರೂಷಕಿ ಇವರ ಮೇಲೆ ಈಗಾಗಲೆ ನಡೆಸುತ್ತಿರುವ ಇಲಾಖಾ ವಿಚಾರಣೆಯ ಜೊತೆ ಸಂಬಂಧಪಟ್ಟ ಇಎನ್‌ಟಿ ತಜ್ಞರ ಮೇಲೆ ಮತ್ತು ಜಯನಗರ ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಅವರ ಮೇಲೆ ನಿಯಮಾನುಸಾರವಾಗಿ ಇಲಾಖಾ ವಿಚಾರಣೆಯನ್ನು ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದು.

2) ಜಯನಗರ ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಅವರಿಂದ ಇಎನ್‌ಟಿ ತಜ್ಞರು

ಮತ್ತು ಶ್ರೀಮತಿ ಬಿ.ಪಿ. ಪುಷ್ಪಲತ ಇವರ ನಿರ್ಲಕ್ಷ್ಯತೆಯಿಂದ ಅಜಮತುಲ್ಲಾ ಇವನು ಮೃತಪಟ್ಟಿರುವುದರಿಂದ ಅವನ ಕುಟುಂಬದ ಸದಸ್ಯರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ 1 ಲಕ್ಷ ರೂಪಾಯಿಗಳ ಪರಿಹಾರವನ್ನು



ನೀಡುವುದು. ಅಂಥಹ ಪರಿಹಾರ ಹಣವನ್ನು ಇಲಾಖೆಯು ಮೇಲೆ ಹೇಳಿದ ತಜ್ಞರಿಂದ ಮತ್ತು ಶುಶ್ರೂಷಕಿಯಿಂದ ವಸೂಲು ಮಾಡಿಕೊಳ್ಳಬಹುದಾಗಿರುತ್ತದೆ.

ಈ ರೀತಿಯ ಶಿಫಾರಸ್ಸಿನ ಮೇಲೆ ಆರೋಗ್ಯ ಇಲಾಖೆಯು 30 ದಿನಗಳಲ್ಲಿ ಕ್ರಮ ಕೈಗೊಂಡಿರುವುದರ ಬಗ್ಗೆ ವರದಿ ನೀಡಬೇಕೆಂದು ಆಯೋಗವು ಸೂಚಿಸಿದೆ.

8. ದಿನಾಂಕ 7–2–2008 ರಂದು ಸಿಕ್ರಮ್ ಸಂಸ್ಥೆಯವರು ನೀಡಿದ ಮಾಹಿತಿ ಮೇರೆಗೆ ಹನುಮಂತನಗರ ಪೋಲೀಸ್ ಠಾಣೆಯ ಪೋಲೀಸರು ಆಟದ ಮೈದಾನದಿಂದ ಗಿರೀಶ್, ಚೇತು ಮತ್ತು ದೀಪಕ್ ಎಂಬುವವರನ್ನು ಕರೆದುಕೊಂಡು ಹೋಗಿ ಚಿತ್ರಹಿಂಸೆ ನೀಡಿ ಅವರುಗಳಿಗೆ ಕರೆಂಟ್ ಶಾಕ್ ಕೊಟ್ಟು ಅವರನ್ನು ಅನಾಥರೆಂದು ನಿಮ್ಹಾನ್ಸ್ ಹಿಂಬಾಗದಲ್ಲಿರುವ ಸರ್ಕಾರಿ ಬಾಲಕರ ಬಾಲ ಮಂದಿರದಲ್ಲಿ ಬಿಟ್ಟು ಬಂದಿರುವ ಬಗ್ಗೆ ದೂರನ್ನು ನೀಡಲಾಗಿದ್ದು, ಸದರಿ ದೂರಿನ ಮೇರೆಗೆ ಆಯೋಗದ ತನಿಖಾ ತಂಡವು ಬಾಲಕರ ಮಂದಿರಕ್ಕೆ ಭೇಟಿ ನೀಡಿ ಸದರಿ ಮಕ್ಕಳ ಬಗ್ಗೆ ವಿಚಾರಣೆ ಮಾಡಿ ಹೇಳಿಕೆ ಪಡೆದು ಸಂಸ್ಥೆಯವರನ್ನು ವಿಚಾರಣೆ ಮಾಡಿ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪಡೆದು ನಂತರ ಸದರಿ ಮಕ್ಕಳನ್ನು ಬಿಡುಗೊಳಿಸಿ, ಅವರುಗಳನ್ನು ಸಕಾರಿ ಆಸ್ಪತ್ರೆಯಲ್ಲಿ ವೈದ್ಯರಿಂದ ಪರೀಕ್ಷೆಗೊಳಪಡಿಸಿ ಅವರ ಪೋಷಕರಿಗೆ

ವಹಿಸಲಾಗಿರುತ್ತದೆ. ನಂತರ ಹನುಮಂತನಗರ ಪೊಲಿಸ್ ಠಾಣೆಗೆ ಭೇಟಿ ನೀಡಿ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದುಕೊಳ್ಳಲಾಗಿ ವಿಚಾರಣೆಯಿಂದ ಸದರಿ ಮಕ್ಕಳನ್ನು ಅಕ್ರಮ ಬಂಧನದಲ್ಲಿಟ್ಟು ಚಿತ್ರಹಿಂಸೆ ನೀಡಿರುವುದು ಕಂಡು ಬಂದಿರುತ್ತದೆ.

–57–

9. ಆಯೋಗದ ತನಿಖಾ ತಂಡವು ದಿನಾಂಕ: 28 ಮತ್ತು 29–2–2008ರಂದು ಸರ್ಕಾರಿ ಬಾಲಕರ ಬಾಲಮಂದಿರ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹೊಸೂರು ರಸ್ತೆ, ಬೆಂಗಳೂರು ಇಲ್ಲಿಗೆ ಭೇಟಿ ನೀಡಿ ಸಂಸ್ಥೆಯ ಅಧೀಕ್ಷಕರನ್ನು ವಿಚಾರಣೆ ಮಾಡಿ ಬಾಲ ಮಂದಿರದಲ್ಲಿ ಹೊರ ರಾಜ್ಯಗಳಿಗೆ ಸಂಬಂಧಪಟ್ಟ ಮಕ್ಕಳನ್ನು ಅವರುಗಳ ರಾಜ್ಯಗಳಿಗೆ ಕಳುಹಿಸದೆ ಬಾಲಮಂದಿರದಲ್ಲಿ ಅನಧಿಕೃತವಾಗಿ ಅವರುಗಳಿಗೆ ಪುನರ್ವಸತಿ ಕಲ್ಪಿಸದೆ ಇಟ್ಟುಕೊಂಡಿರುವ ಬಗ್ಗೆ ವಿಚಾರಣೆ ಮಾಡಲಾಗಿ ಒಟ್ಟು 216 ಮಕ್ಕಳು ಬಾಲಮಂದಿರದಲ್ಲಿ ಅನಧಿಕೃತವಾಗಿ ಇರುವುದು ಕಂಡು ಬಂದಿರುತ್ತದೆ.

10. ಫಿರ್ಯಾದುದಾರರಾದ ಶ್ರೀ ಮಹೇಂದ್ರ ಬಿನ್ ಮುನಿರಾಜು ಇವರು 6–3–2008 ರಂದು ಆಯೋಗಕ್ಕೆ ಫಿರ್ಯಾದನ್ನು ಸಲ್ಲಿಸಿದ್ದು, ಸದರಿ ಫಿರ್ಯಾದಿಯಲ್ಲಿ ರಾಜನಕುಂಟೆ ಪೊಲೀಸರು ದಿನಾಂಕ: 4–3–2008 ರಂದು ಫಿರ್ಯಾದಿಯ ಅಣ್ಣನಾದ ಮಾದವ ಹಾಗೂ ಇತರರನ್ನು ಕಳ್ಳತನ ಆರೋಪಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅವರಿಗೆ ಥಳಿಸಿ ಅಕ್ರಮ ಬಂಧನದಲ್ಲಿಟ್ಟು ಚಿತ್ರ ಹಿಂಸೆ ನೀಡಿರುವ ಬಗ್ಗೆ ದೂರಿನಲ್ಲಿ ತಿಳಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾ ತಂಡವು ರಾಜನಕುಂಟೆ ಪೊಲೀಸ್ ಠಾಣೆಗೆ ಭೇಟಿ ನೀಡಿ ಘಟನೆಗೆ ಸಂಬಂಧಿಸಿದಂತೆ ಪಿ.ಐ.

ಹಾಗೂ ಸಿಬ್ಬಂದಿಯವರುಗಳನ್ನು ವಿಚಾರಣೆ ಮಾಡಿ ದಾಖಲಾತಿಗಳನ್ನು ಪಡೆದು ಅವರ ಹೇಳಿಕೆಗಳನ್ನು ಪಡೆಯಲಾಗಿರುತ್ತದೆ.

ಪ್ರಕರಣವು ಆಯೋಗದ ಪರಿಶೀಲನೆಯಲ್ಲಿದೆ.

–58–

11. ಶ್ರೀ ಮುನಿಕೃಷ್ಣ, ಪ್ರಧಾನ ಸಂಚಾಲಕರು, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು ದಕ್ಷಿಣ, ಬೆಂಗಳೂರು ಇವರು ದಿನಾಂಕ: 18–3–2008 ರಂದು ಆಯೋಗಕ್ಕೆ ಫಿರ್ಯಾದನ್ನು ನೀಡಿದ್ದು, ಸದರಿ ಫಿರ್ಯಾದಿಯಲ್ಲಿ ತಲಘಟ್ಟಪುರ ಪೊಲೀಸ್ ಠಾಣೆಯ ಸಿಬ್ಬಂದಿಯವರು ಸಂಘಟನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಮುಜೀಬ್ ಎಂಬ ವ್ಯಕ್ತಿಯನ್ನು ವಿಚಾರಣೆ ನೆಪದಲ್ಲಿ ಪೊಲೀಸ್ ಠಾಣೆಗೆ ಕರೆತಂದು ಚಿತ್ರಹಿಂಸೆ ನೀಡಿ ಹಲ್ಲೆ ಮಾಡಿ ಕಾಲಿನ ಹೆಬ್ಬೆರಳಿಗೆ ಉಗುರು ಕಿತ್ತು ಹೋಗುವ ರೀತಿಯಲ್ಲಿ ಹೊಡೆದು ಅದಕ್ಕೆ ಮೂತ್ರ ವಿಸರ್ಜನೆ ಮಾಡಿ ಮಾನಸಿಕ ಹಿಂಸೆ ನೀಡಿರುವ ಬಗ್ಗೆ, ತನಿಖಾ ತಂಡವು ಈ ಪ್ರಕರಣದ ವಿಚಾರಣೆ ಕುರಿತು ತಲಘಟ್ಟಪುರ ಪೊಲಿಸ್ ಠಾಣೆಗೆ ಭೇಟಿ ನೀಡಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಚಾರಣೆ ಮಾಡಿ, ಹೇಳಿಕೆಗಳನ್ನು ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಲಾಗಿ ತಲಘಟ್ಟಪುರ ಪೊಲೀಸ್ ಠಾಣೆಯ ಪಿ.ಎಸ್.ಐ. ಹಾಗೂ ಸಿಬ್ಬಂದಿಯವರು ಕಾನೂನು ರೀತಿಯ ಕ್ರಮವನ್ನು ಸದರಿ ಆರೋಪಿಯನ್ನು ದಸ್ತಗಿರಿ ಮಾಡುವಾಗ ನಿರ್ವಹಿಸದೆ ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ತೋರಿರುವುದು ಕಂಡುಬಂದಿರುತ್ತದೆ.

ಈ ಪ್ರಕರಣದ ಬಗ್ಗೆ ಸಂಬಂಧಪಟ್ಟವರ ಮೇಲೆ ಇಲಾಖಾ ಸೂಕ್ತ ಕ್ರಮ ಜರುಗಿಸಲು ಐ.ಜಿ.ಪಿ., ಕೇಂದ್ರ ವಲಯ ರವರಿಗೆ ನಿರ್ದೇಶನ ನೀಡುವಂತೆ ಆಯೋಗಕ್ಕೆ ವಿವರವಾದ ವರದಿಯನ್ನು ದಿನಾಂಕ 31–3–2008 ರಂದು ಸಲ್ಲಿಸಲಾಗಿದ್ದು ಪ್ರಕರಣವು ಆಯೋಗದ ಪರಿಶೀಲನೆಯಲ್ಲಿದೆ.

–59–

**ದೂರುಗಳನ್ನು ಹೇಗೆ ದಾಖಲಿಸುವುದು?**

ದೂರುಗಳನ್ನು ಕೆಳಕಂಡ ರೀತಿಯಲ್ಲಿ ದಾಖಲಿಸಬಹುದು:

- ಮಾನವ ಹಕ್ಕುಗಳ ಆಯೋಗದಲ್ಲಿ ನೇರವಾಗಿ
- ದೂರವಾಣಿ ಅಥವಾ ಫ್ಯಾಕ್ಸ್ ಮುಖಾಂತರ
- ಅಂಚೆ ಅಥವಾ ಟೆಲಿಗ್ರಾಂ ಮುಖಾಂತರ
- ಈ–ಮೈಲ್ ಮುಖಾಂತರ (ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದಲ್ಲಿ)

**ದೂರುಗಳು:**

- ಲಿಖಿತ ರೂಪದಲ್ಲಿರಬೇಕು – ಅವುಗಳನ್ನು ಸುಲಭವಾಗಿ ಓದುವ ದೃಷ್ಠಿಯಿಂದ ಬೆರಳಚ್ಚು ಮಾಡಿದ ಅಥವಾ ಶುದ್ಧವಾದ ಕೈಬರಹದಲ್ಲಿರಬೇಕು
- ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳ ಹೆಸರಿನಲ್ಲಿರಬೇಕು
- ದೂರುದಾರರು ಸಹಿ ಮಾಡಿರಬೇಕು ಅಥವಾ ಆತನ/ಅವಳ ಹೆಬ್ಬೆಟ್ಟಿನ ಗುರುತಿರಬೇಕು

ದೂರಿನಲ್ಲಿ:

- ದೂರುದಾರರ ಪೂರ್ಣ ಹೆಸರು ಮತ್ತು ವಿಳಾಸ (ಗ್ರಾಮದ ಹೆಸರು, ಜಿಲ್ಲೆ ಮತ್ತು ರಾಜ್ಯ) ಮತ್ತು ಇತರ ಸಂಪರ್ಕ ವಿಳಾಸವನ್ನು (ಪಿನ್ ಕೋಡ್, ದೂರವಾಣಿ ಸಂಖ್ಯೆ, ಫ್ಯಾಕ್ಸ್ ಸಂಖ್ಯೆ, ಈಮೈಲ್ ವಿಳಾಸ ಅಥವಾ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ) ದೂರು ಅರ್ಜಿಯಲ್ಲಿರಬೇಕು



- ತೊಂದರೆಗೆ ಒಳಗಾದ ವ್ಯಕ್ತಿಯಲ್ಲದೆ ಬೇರೆ ಇನ್ಯಾರಾದರೂ ದೂರು ಸಲ್ಲಿಸಿದರೆ ಅವರು ತೊಂದರೆಗೊಳಗಾದವರ ಪೂರ್ಣ ಹೆಸರು, ವಿಳಾಸ ಹಾಗೂ ಸಂಪರ್ಕಿಸಬಹುದಾದ ವಿವರಗಳನ್ನು ನೀಡತಕ್ಕದ್ದು. ತೊಂದರೆಗೊಳಗಾದವರು ಪರಿಶಿಷ್ಠ ಜಾತಿ, ವರ್ಗ ಅಥವಾ ಅಲ್ಪಸಂಖ್ಯಾತ ಗುಂಪಿಗೆ ಸೇರಿದ್ದರೆ ಅದನ್ನು ತಿಳಿಸುವುದು
- ಯಾರ ವಿರುದ್ಧ ದೂರನ್ನು ಸಲ್ಲಿಸಲಾಗುತ್ತದೆಯೋ ಆ ಅಧಿಕಾರಿಯ/ಪ್ರಾಧಿಕಾರದ ಸಂಪೂರ್ಣ ಹೆಸರು, ವಿಳಾಸ ಹಾಗೂ ಸಂಪರ್ಕಿಸಬಹುದಾದ ವಿವರಗಳನ್ನು ತಿಳಿಸುವುದು
- ಘಟನೆಯ ಸ್ಥಳ, ದಿನಾಂಕ ಹಾಗೂ ಸಮಯವನ್ನು ತಿಳಿಸುವುದು – ನಿಖರವಾಗಿ ಏನಾಯಿತು ಮತ್ತು ಯಾರು ಅದರಲ್ಲಿ ಭಾಗಿಯಾಗಿದ್ದಾರೆ ಎನ್ನುವುದನ್ನು ತಿಳಿಸತಕ್ಕದ್ದು – ಅದರಲ್ಲಿ ಅಸತ್ಯವಾದ ಯಾವುದನ್ನೂ ಸೇರಿಸಬಾರದು ಹಾಗೂ ಯಾವುದೇ ಸಂಗತಿಯನ್ನು ಮರೆಮಾಚಬಾರದು
- ಘಟನೆಯಿಂದಾಗಿ ಸಂಬಂಧಪಟ್ಟ ವ್ಯಕ್ತಿಯ ಮಾನವ ಹಕ್ಕುಗಳ ಉಲ್ಲಂಘನೆಯು ಯಾವ ರೀತಿ ಪರಿಣಾಮವನ್ನುಂಟುಮಾಡಿದೆ ಎನ್ನುವುದನ್ನು ತಿಳಿಸತಕ್ಕದ್ದು

- ಬೇರೆ ಯಾವ ರೀತಿಯ ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ತಿಳಿಸುವುದು – ಪೊಲೀಸರಿಗೆ ನೀಡಿದ ದೂರುಗಳು (ಪೊಲೀಸ್ ಠಾಣೆಯ ಹೆಸರು), ವಕೀಲರನ್ನು ಭೇಟಿಯಾಗಿರುವ ವಿವರ ಹಾಗೂ ನ್ಯಾಯಾಲಯದ ವಿಚಾರಣೆಯ ವಿವರಗಳು.



***ಈ ಕೈಹೊತ್ತಿಗೆಯ ಕಡೆಯ ಪುಟದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಹಾಗೂ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ನಮೂದಿಸಲಾಗಿದೆ.***

## 5. ಮಾನವ ಹಕ್ಕುಗಳ ಆಯೋಗವು ಯಾವ ರೀತಿಯಲ್ಲಿ ಕೆಲಸ ಮಾಡುತ್ತದೆ?

ಈ ಭಾಗದಲ್ಲಿ ಕೆಳಕಂಡವುಗಳನ್ನು ಚರ್ಚಿಸಲಾಗುವುದು:

- ದೂರುಗಳನ್ನು ಸ್ವೀಕರಿಸಿ ತನಿಖೆ ಮಾಡುವುದು
- ದೂರುಗಳ ಮೇಲೆ ಶಿಫಾರಸ್ಸುಗಳು/ನಿರ್ದೇಶನಗಳನ್ನು ನೀಡುವುದು
- ತನಿಖೆ, ಯೋಜನೆಗಳು ಹಾಗೂ ಕಾರ್ಯಕ್ರಮಗಳು

**ಮಾನವ ಹಕ್ಕುಗಳ ಆಯೋಗಕ್ಕೆ ದೂರು ಬಂದರೆ ಅದು ಏನಾಗುತ್ತದೆ?**

ಆಯೋಗಕ್ಕೆ ಒಂದು ದೂರು ಬಂದರೆ, ಅದನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಏನಾದರೂ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆಯೇ ಎನ್ನುವುದನ್ನು ನೋಡಲಾಗುವುದು. ತದನಂತರ ದೂರನ್ನು ನೀಡಿದ ವ್ಯಕ್ತಿಗೆ ಆಯೋಗವು ಪ್ರಕರಣವನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಲಾಗುವುದು. ಪ್ರಕರಣವನ್ನು ತೆಗೆದುಕೊಳ್ಳಲು ಸಾಧ್ಯವಾಗದಿದ್ದಲ್ಲಿ, ಯಾವ ಕಾರಣದಿಂದ ಪ್ರಕರಣವನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬುದರ ಬಗ್ಗೆ ವಿವರಣೆಯಿರುವ ಪತ್ರವನ್ನು ದೂರುದಾರರಿಗೆ ಕಳುಹಿಸಲಾಗುವುದು.

ತದನಂತರ ಪ್ರಕರಣದಲ್ಲಿ ಏನು ಕ್ರಮ ತೆಗೆದುಕೊಳ್ಳಬಹುದು ಎಂಬುದನ್ನು ನಿರ್ಧರಿಸುವ ಸಲುವಾಗಿ ದೂರನ್ನು ಅಧ್ಯಕ್ಷರು ಮತ್ತು ಸದಸ್ಯರಿಗೆ ಕಳುಹಿಸಲಾಗುವುದು.

**ತುರ್ತು ಪ್ರಕರಣಗಳು**

ಇವು ಗಂಭೀರವಾದ ದೂರುಗಳಾಗಿದ್ದು ತಕ್ಷಣ ಗಮನ ಹರಿಸಬೇಕಾದಂತಹುವಾಗಿವೆ. ಅವುಗಳಲ್ಲಿ ಮಹಿಳೆಯರು, ಮಕ್ಕಳು, ಅಲ್ಪಸಂಖ್ಯಾತರು ಅಥವಾ ಜೀತದಾಳುಗಳು ಮತ್ತು ತಕ್ಷಣ



ಜೀವಕ್ಕೆ ಬೆದರಿಕೆಯನ್ನು ಒಡ್ಡುವಂತಹ ದೂರುಗಳು ಸೇರಿವೆ. ಅವುಗಳನ್ನು ಮಾನವ ಹಕ್ಕುಗಳ ಆಯೋಗಗಳು ಆದ್ಯತೆಯ ಆಧಾರದ ಮೇಲೆ ತೆಗೆದುಕೊಳ್ಳುವುವು.

ಉದಾಹರಣೆ: ಅರೆ ಸೇನಾ ಪಡೆಗಳವರು ಹಾಗೂ ಪೊಲೀಸ್ ಸಿಬ್ಬಂದಿ ಒಬ್ಬ ವ್ಯಕ್ತಿಯನ್ನು ಆತ ಭಯೋತ್ಪಾದಕನಿರಬಹುದು ಎಂಬ ಸಂಶಯದ ಮೇಲೆ ಪ್ರಶ್ನೆ ಮಾಡುವ ಸಲುವಾಗಿ ವಶಕ್ಕೆ ತೆಗೆದುಕೊಂಡಿದ್ದು ಅವನ ಕುಟುಂಬವರ್ಗದವರಿಗೆ ಆತನನ್ನು ಎಲ್ಲಿಟ್ಟಿದ್ದಾರೆ ಎಂಬುದರ ಬಗ್ಗೆ ಮಾಹಿತಿ ನೀಡದಿರುವುದು.

**ದೂರನ್ನು ಯಾವ ರೀತಿ ತನಿಖೆ ಮಾಡಲಾಗುವುದು?**

ದೂರಿನ ರೀತಿಯ ಆಧಾರದ ಮೇಲೆ ಅದನ್ನು ಸಂಬಂಧಪಟ್ಟ ಸರ್ಕಾರಿ ಇಲಾಖೆಗೆ ವರದಿಗಾಗಿ ಕಳುಹಿಸಬಹುದು ಅಥವಾ ಗುಪ್ತದಳ ಇಲಾಖೆ ಅಥವಾ ಸ್ಥಳೀಯ ಪೊಲೀಸರಿಗೆ ವಿಚಾರಣೆಗಾಗಿ ಕಳುಹಿಸಬಹುದು. ವಿಚಾರಣಾ ವರದಿಯಿಂದ ಆಯೋಗಕ್ಕೆ ತೃಪ್ತಿಯಾಗದಿದ್ದರೆ ಅಥವಾ ಪ್ರಕರಣವು ಸೂಕ್ಷ್ಮವಾಗಿದ್ದು ರಾಜಕೀಯ ಮಧ್ಯಪ್ರವೇಶವಾಗುವ

ಸಂಭವವಿದ್ದರೆ ಅಥವಾ ತೀವ್ರರೀತಿಯ ಮಾನವ ಹಕ್ಕುಗಳ ಉಲ್ಲಂಘನೆಯಾಗಿದ್ದು ಹಿರಿಯ ಅಧಿಕಾರಿಗಳು ಅಥವಾ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು ಭಾಗಿಯಾಗಿದ್ದಲ್ಲಿ, ಆಯೋಗವು ತನ್ನ ತನಿಖಾ ತಂಡಕ್ಕೆ ವಿಚಾರಣೆ ನಡೆಸುವಂತೆ ಸೂಚಿಸಬಹುದು.

ಒಮ್ಮೆ ತನಿಖಾ ವರದಿಯನ್ನು ಸ್ವೀಕರಿಸಿದರೆ, ಆಯೋಗವು ದೂರುದಾರರು ಅಥವಾ ಯಾರ ವಿರುದ್ಧ ದೂರನ್ನು ನೀಡಲಾಗಿದೆಯೋ ಅವರಿಂದ ಅಭಿಪ್ರಾಯ ಕೇಳಬಹುದು.



ಎಲ್ಲಾ ವಾಸ್ತವಾಂಶಗಳು ಮತ್ತು ಸಂದರ್ಭಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಅಧ್ಯಕ್ಷರು ಮತ್ತು/ಅಥವಾ ಸದಸ್ಯರು ಒಂದು ಪ್ರಕರಣವನ್ನು ನಿರ್ಧರಿಸುವರು. ಅವರು ಅದನ್ನು ವಜಾಗೊಳಿಸಬಹುದು, ಅಂದರೆ ಯಾವುದೇ ಮಾನವ ಹಕ್ಕುಗಳ ಉಲ್ಲಂಘನೆಯಾಗಿಲ್ಲವೆಂದು ನಿರ್ಧರಿಸಬಹುದು. ಪರ್ಯಾಯವಾಗಿ, ಒಂದು ಉಲ್ಲಂಘನೆಯಾಗಿದೆ ಎಂದು ಅವರು ತೋರಿಸಿಕೊಟ್ಟರೆ, ಆ ಪ್ರಕರಣದಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಳ್ಳಬಹುದು ಎಂಬುದರ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತದೆ.

ಕೆಲವೊಮ್ಮೆ, ಸಂಬಂಧಪಟ್ಟ ಇಲಾಖೆಗಳೇ ಸೂಕ್ತ ಕ್ರಮ ಕೈಗೊಳ್ಳುವುದರಿಂದ, ಶಿಫಾರಸ್ಸು ಮಾಡುವ ಅಗತ್ಯವಿರುವುದಿಲ್ಲ.

---

ಪಂಜಾಬಿನ ಒಬ್ಬ ಸರ್ಕಾರಿ ಶಾಲಾ ಶಿಕ್ಷಕ ರಾಜ್ಯ ಆಯೋಗಕ್ಕೆ ತಮ್ಮ ವಿರುದ್ಧ ಒಬ್ಬ ಶಾಸಕರಿಗಿದ್ದ ಹಳೆಯ ದ್ವೇಷದ ಕಾರಣ ಪದೇ ಪದೇ ತಮ್ಮನ್ನು ವರ್ಗಾವಣೆ ಮಾಡಲಾಗುತ್ತಿದ್ದು ಮಾನಸಿಕವಾಗಿ ಹಿಂಸೆ ಮಾಡುತ್ತಿರುವುದಾಗಿ ದೂರನ್ನು ನೀಡಿದರು. ಶಾಸಕರ ಮಗ ತಮ್ಮ ವಿರುದ್ಧ ಮೇಲಧಿಕಾರಿಗಳಿಗೆ ಸುಳ್ಳು ದೂರುಗಳನ್ನು ಸಲ್ಲಿಸುತ್ತಿದ್ದ ಕಾರಣ, ಅವರನ್ನು ಪದೇ ಪದೇ

ವರ್ಗಾಯಿಸಲಾಗುತ್ತಿತ್ತೆಂದು ದೂರಿದರು. ಪಂಜಾಬಿನ ಮಾನವ ಹಕ್ಕುಗಳ ಆಯೋಗವು ಆ ಶಿಕ್ಷಕರನ್ನು ಏಕೆ ಪದೇ ಪದೇ ವಗಾಯಿಸಲಾಯಿತು ಎಂಬ ಬಗ್ಗೆ ಕಾರಣ ನೀಡಬೇಕೆಂದು ಶಿಕ್ಷಣ ಇಲಾಖೆಯನ್ನು ಕೇಳಿತು. ಆಯೋಗವು ಮಧ್ಯ ಪ್ರವೇಶ ಮಾಡಿದ ಕೂಡಲೇ ವರ್ಗಾವಣೆಗಳನ್ನು ನಿಲ್ಲಿಸಲಾಯಿತು. ಈ ಪ್ರಕರಣದಲ್ಲಿ ಆಯೋಗವು ಯಾವುದೇ ಶಿಫಾರಸ್ಸುಗಳನ್ನು ಮಾಡದೆಯೇ ದೂರುದಾರರ ಕುಂದುಕೊರತೆಗಳಿಗೆ ಪರಿಹಾರ ಕಲ್ಪಿಸಲು ಸಾಧ್ಯವಾಯಿತು.

---

**–65–**

**ಮಾನವ ಹಕ್ಕುಗಳ ಆಯೋಗಗಳು ಯಾವ ರೀತಿಯ ಶಿಫಾರಸ್ಸುಗಳನ್ನು ಮಾಡುತ್ತವೆ?**

ಮಾನವ ಹಕ್ಕುಗಳ ಆಯೋಗಗಳು ಸರ್ಕಾರಕ್ಕೆ ಕೆಳಕಂಡ ಶಿಫಾರಸ್ಸುಗಳನ್ನು ಮಾಡಬಹುದು:

- ತಪ್ಪಿತಸ್ಥರ ವಿರುದ್ಧ ದಂಡಾರ್ಹ ಪ್ರಕರಣಗಳನ್ನು ದಾಖಲಿಸುವುದು
- ನೊಂದವರಿಗೆ ಅಥವಾ ಅವರ ಕುಟುಂಬವರ್ಗದವರಿಗೆ ತಕ್ಷಣದ ಪರಿಹಾರ ನೀಡುವುದು
- ತಪ್ಪಿತಸ್ಥರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುವುದು
- ಒಂದು ನಿರ್ದಿಷ್ಟವಾದ ಕೃತ್ಯ ಮಾನವ ಹಕ್ಕುಗಳನ್ನು ಉಲ್ಲಂಘಿಸಿದರೆ ಅದನ್ನು ನಿಲ್ಲಿಸುವುದು
- ತನ್ನ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುವಂತೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಯಾದವರಿಗೆ ರಕ್ಷಣೆ ನೀಡುವುದು
- ಮುಂದೆ ಮಾನವ ಹಕ್ಕುಗಳ ಉಲ್ಲಂಘನೆಗಳಾಗದಂತೆ ಮುಂಜಾಗರೂಕತಾ ಕ್ರಮಗಳನ್ನು

ತೆಗೆದುಕೊಳ್ಳುವುದು

---

**ಮಾನವ ಹಕ್ಕುಗಳ ಆಯೋಗಗಳು ಶಿಫಾರಸ್ಸು ಮಾಡಿರುವ ಉದಾಹರಣೆಗಳು:**

ಕರ್ನಾಟಕದ ಪೋಲೀಸರು ಬಂಧನದಲ್ಲಿರುವ ಓರ್ವ ವ್ಯಕ್ತಿಯು ಪೋಲೀಸ್ ಠಾಣೆಯ ಶೌಚಾಲಯದಲ್ಲಿ ನೈಲಾನ್ ಹಗ್ಗದಿಂದ ನೇಣು ಬಿಗಿದುಕೊಂಡು ಸತ್ತಿರುವನೆಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ವರದಿ ಮಾಡಿದರು. ಆದರೆ ಕರ್ನಾಟಕದ ನಾಗರೀಕ



ಸ್ವಾತಂತ್ರ್ಯದ ಜನರ ಸಂಘದವರು (ಪಿ.ಯು.ಸಿ.ಎಲ್.) ಪೋಲೀಸರು ದುರುದ್ದೇಶದ ಕೃತ್ಯವೆಸಗಿದ್ದಾರೆಂದು ಸಂಶಯಿಸಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಈ ವಿಷಯದಲ್ಲಿ ತನಿಖೆ ಮಾಡಬೇಕೆಂದು ಕೇಳಿತು. ಮರಣೋತ್ತರ ಪರೀಕ್ಷೆ ಹಾಗೂ ಮಹಜರ್ ವರದಿ ಇವೆರಡೂ ತದ್ವಿರುದ್ಧವಾಗಿದ್ದು ಆ ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಸಮರ್ಥಿಸುವುದಿಲ್ಲವೆಂದು ಆಯೋಗಕ್ಕೆ ಕಂಡುಬಂದಿತು. ಎಲ್ಲಾ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಆಯೋಗವು ಪೋಲೀಸರ ವರದಿಯೇ ನಿಜವೆಂದು ಒಪ್ಪಿಕೊಳ್ಳುವಂತಹ ವಿರಳವಾದ ಸಾಧ್ಯತೆಯಿದ್ದರೂ, ಆ ವ್ಯಕ್ತಿಯ ಸಾವನ್ನು ತಡೆಗಟ್ಟದಿರಲು ಪೋಲೀಸರೇ ಜವಾಬ್ದಾರರೆಂದು ಪರಿಗಣಿಸಿ ಕೆಳಕಂಡಂತೆ ಆದೇಶಿಸಿತು:

(ಅ) ದಂಡಾರ್ಹ ಪ್ರಕರಣವೆಂದು ದಾಖಲಿಸಿ ಪೋಲೀಸರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು

(ಆ) ಕರ್ನಾಟಕ ರಾಜ್ಯದ ಗುಪ್ತಚರ ದಳವು ಪ್ರಕರಣದಲ್ಲಿ ವಿಚಾರಣೆ ನಡೆಸುವುದು

(ಇ) ಮೃತರ ಕುಟುಂಬವರ್ಗದವರಿಗೆ 2 ಲಕ್ಷ ರೂಪಾಯಿಗಳನ್ನು ನೀಡುವುದು

(ಈ) ಸರ್ಕಾರಿ ವೈದ್ಯರು ಸಾಕ್ಷ್ಯಗಳನ್ನು ನಾಶಪಡಿಸಿದರೆಂಬ ಆರೋಪದ ಮೇಲೆ ಅವರ ವಿರುದ್ಧ ಪ್ರಕರಣವನ್ನು ದಾಖಲಿಸುವುದು.

ಅಸ್ಸಾಂನ ಸಾರ್ವಜನಿಕ ಆರೋಗ್ಯ ಕೇಂದ್ರವೊಂದರಲ್ಲಿ 18 ವರುಷದ ಯುವತಿಯೋರ್ವಳು ಮೃತಪಟ್ಟಳು. ಆಕೆಯು ನಡಗುತ್ತಿದ್ದು ಆಕೆಯ ಪರಿಸ್ಥಿತಿ ಗಂಭೀರವಾಗಿದ್ದರೂ ಸಹ, ಕರ್ತವ್ಯದ



ಮೇಲಿದ್ದ ವೈದ್ಯರು ಆಕೆಯ ರಕ್ಷಣೆಗೆ ಬಾರದೆ ಮತ್ತೊಬ್ಬ ರೋಗಿಯನ್ನು ನೋಡಿಕೊಳ್ಳುವುದರಲ್ಲಿ ಮಗ್ನರಾಗಿದ್ದರು. ಆಕೆಯ ಬಳಿ ಬರುವಷ್ಟರಲ್ಲಿ ಬಹಳ ತಡವಾಗಿತ್ತು. ಪೊಲೀಸರು ಪ್ರಕರಣವನ್ನು ದಾಖಲಿಸಿಕೊಳ್ಳಬಾರದು ಎಂಬ ಕಾರಣದಿಂದ ಮರಣೋತ್ತರ ಪರೀಕ್ಷೆಯನ್ನು ನಡೆಸಲಿಲ್ಲ. ಅಸ್ಸಾಂನ ಮಾನವ ಹಕ್ಕುಗಳ ಆಯೋಗವು ಪ್ರಕರಣವನ್ನು ಕೈಗೆತ್ತಿಕೊಂಡು ಆಸ್ಪತ್ರೆಯ ಸಿಬ್ಬಂದಿಯವರ ವಿರುದ್ಧ ನಿರ್ಲಕ್ಷ್ಯತನದ ಪ್ರಕರಣವನ್ನು ದಾಖಲಿಸಿಕೊಂಡು ಸರಿಯಾದ ಕಾರ್ಯವಿಧಾನವನ್ನು ಪಾಲಿಸಲು ವಿಫಲರಾದ ಕಾರಣ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ದೇಶಿಸಿತು.

ಶ್ರೀಲಂಕಾದ ತಮಿಳು ನಿರಾಶ್ರಿತರೊಬ್ಬರು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಪತ್ರ ಬರೆದು ತಮಿಳು ನಾಡಿನ ಒಂದು ನಿರಾಶ್ರಿತರ ಶಿಬಿರದಲ್ಲಿ ವಾಸ ಮಾಡುವುದಕ್ಕೆ ಯೋಗ್ಯವಲ್ಲದ ಸ್ಥಿತಿಯ ಬಗ್ಗೆ ದೂರಿದರು. ಅಲ್ಲಿ ಹಲವಾರು ಜನರನ್ನು ಅನಿರ್ದಿಷ್ಠವಾಗಿ ಹಿಡಿದಿಟ್ಟಿದ್ದು ಅವರನ್ನು ಯಾವಾಗ ಬಿಡುಗಡೆ ಮಾಡಲಾಗುವುದು ಎಂಬ ಬಗ್ಗೆ ಅಧಿಕಾರಿಗಳು

ತಿಳಿಸುತ್ತಿಲ್ಲವೆಂದು ಅವರು ತಿಳಿಸಿದರು. ನಿರಾಶ್ರಿತರ ಸಂಚಾರಕ್ಕೆ ಕಟ್ಟಡದಲ್ಲಿ ನಿರ್ಬಂಧ ಹೇರಲಾಗಿದ್ದು ಸಂದರ್ಶಕರು ಅವರನ್ನು ಭೇಟಿಯಾಗಲು ಸರಿಯಾದ ವ್ಯವಸ್ಥೆ ಮಾಡಿಲ್ಲವೆಂದು ದೂರಿದರು. ದಿನ ಭತ್ಯವೂ ಸಾಕಾಗುವುದಿಲ್ಲವೆಂದು ತಿಳಿಸಿದರು.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಒಂದು ತಂಡವನ್ನು ಶಿಬಿರಕ್ಕೆ ತನಿಖೆ ಮಾಡುವ ಸಲುವಾಗಿ ಕಳುಹಿಸಿ ರಾಜ್ಯ ಸರ್ಕಾರಕ್ಕೆ: (ಅ) ನಿರಾಶ್ರಿತರ ವಿರುದ್ಧವಿರುವ ಪ್ರಕರಣಗಳ ಇತ್ಯರ್ಥವನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಕ್ರಮ ತೆಗೆದುಕೊಳ್ಳಬೇಕೆಂದು (ಆ) ಶಿಬಿರದಲ್ಲಿ ಮುಕ್ತವಾಗಿ ಸಂಚರಿಸಲು ಅವರಿಗೆ ಅವಕಾಶ ಮಾಡಿಕೊಡಬೇಕೆಂದು (ಇ)



ವಯಸ್ಕರ ದಿನಭತ್ಯವನ್ನು 20ರಿಂದ 35 ರೂಪಾಯಿಗಳಿಗೆ ಹಾಗೂ ಮಕ್ಕಳ ದಿನಭತ್ಯವನ್ನು 14ರಿಂದ 20 ರೂ.ಗಳಿಗೆ ಹೆಚ್ಚಿಸಬೇಕೆಂದು ಹಾಗೂ (ಈ) ವೈದ್ಯಕೀಯ ಹಾಗೂ ಕಂದಾಯ ಅಧಿಕಾರಿಗಳು ಶಿಬಿರಗಳಿಗೆ ನಿಯಮಿತವಾಗಿ ಭೇಟಿ ನೀಡುವಂತೆ ನೋಡಿಕೊಳ್ಳಬೇಕೆಂದು ಸೂಚನೆ ನೀಡಿತು.

ಅಂಧ ಹಾಗೂ ದೃಷ್ಠಿದೋಷವಿರುವ ವಿದ್ಯಾರ್ಥಿಗಳು ಕೆಲವೊಮ್ಮೆ ತಮ್ಮ ಬ್ರೈಲ್ ಪಠ್ಯಪುಸ್ತಕಗಳನ್ನು ಶೈಕ್ಷಣಿಕ ವರ್ಷದ ಪ್ರಾರಂಭದ ಬದಲು ಅಂತ್ಯದಲ್ಲಿ ಪಡೆಯುತ್ತಿದ್ದಾರೆಂಬ ವಿಷಯವು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಗಮನಿಸಿತು. ಹಲವು ರಾಜ್ಯಗಳಲ್ಲಿ ಬ್ರೈಲ್ ಮುದ್ರಣಾಲಯವಿಲ್ಲದಿರುವುದು ಇದಕ್ಕೆ ಒಂದು ಕಾರಣವೆಂದು ಆಯೋಗವು ಪತ್ತೆ ಮಾಡಿತು. ಎಲ್ಲಾ ಅಂಧ ಹಾಗೂ ದೃಷ್ಟಿದೋಷವಿರುವ ವಿದ್ಯಾರ್ಥಿಗಳ ಹಕ್ಕುಗಳನ್ನು ಮಾನ್ಯ ಮಾಡಿ, ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ ಆ ಎಲ್ಲಾ ವಿದ್ಯಾರ್ಥಿಗಳು ಪುಸ್ತಕಗಳನ್ನು ಪಡೆಯುವ

ದೃಷ್ಟಿಯಿಂದ ಎಲ್ಲಾ ರಾಜ್ಯಗಳು ಒಂದು ಬ್ರೈಲ್ ಮುದ್ರಣಾಲಯವನ್ನು ಪ್ರಾರಂಭಿಸಿ ಸೂಕ್ತ ವಿತರಣಾ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ನಿರ್ದೇಶನ ನೀಡಿತು.

**ಕರ್ನಾಟಕದಲ್ಲಿನ ಪ್ರಕರಣಗಳು**

---

1. ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಮೆಣಸಿನ ಹಾಡ್ಯದಲ್ಲಿ ನಡೆದ ಪ್ರಕರಣದ ಬಗ್ಗೆ ಖುದ್ದಾಗಿ ವಿಚಾರವನ್ನು ತಿಳಿಯಲು ಸ್ಥಳಕ್ಕೆ ಭೇಟಿ ನೀಡಿದರು. ಆಯೋಗ ಇಲ್ಲಿ ಗಮನಿಸಿದ ಅಂಶ ಪೊಲೀಸರು ಮತ್ತು ನಕ್ಸಲೀಯರೆನ್ನಲಾದವರ ನಡುವೆ ನಡೆದ ಸಂಘರ್ಷದ ವಿಚಾರವನ್ನು ಈಗ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು



ವಿಚಾರಣೆ ಮಾಡುತ್ತಿರುವುದರಿಂದ ಅದರ ಬಗ್ಗೆ ವಿಚಾರಣೆ ಮಾಡುವುದನ್ನು ಮುಂದೂಡಬೇಕೆಂದು ತೀರ್ಮಾನಿಸಲಾಯಿತು. ಆದರೆ ಇಲ್ಲಿರುವ ಸಾಮಾಜಿಕ ಮತ್ತು ಆರ್ಥಿಕ ಪ್ರಯೋಜನಗಳ ಬಗ್ಗೆ ಸರ್ಕಾರಕ್ಕೆ ಮಧ್ಯಂತರ ಆದೇಶ ನೀಡಲಾಯಿತು. ಒಂದು ವಿಶೇಷ ಪ್ಯಾಕೇಜನ್ನು ಸರ್ಕಾರ ನೀಡಬೇಕು ಎಂದು ಸೂಚನೆ ನೀಡಲಾಗಿತ್ತು. ಆಯೋಗ ತನ್ನ ಭೇಟಿಯ ಕಾಲದಲ್ಲಿ ಗಮನಿಸಿದ ಅಂಶ ಇಲ್ಲಿ ಸರ್ಕಾರ ವಿವಿಧ ಪ್ರದೇಶಗಳಿಗೆ ನೀಡಿರುವ ಸಾಮಾಜಿಕ ಮತ್ತು ಆರ್ಥಿಕ ಪ್ರಯೋಜನಗಳು ಸಾಕಷ್ಟು ಸಿಗುತ್ತಿಲ್ಲ ಎನ್ನುವುದನ್ನು ಮನಗಂಡು ಈ ವಿಶೇಷ ಪ್ಯಾಕೇಜನ್ನು ರೂಪಿಸಬೇಕು ಎಂದು ಸೂಚನೆ ನೀಡಲಾಗಿದೆ. ಇದರ ಜೊತೆಗೆ ಅಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಸೂಚನೆ ನೀಡಿ ಜನರಿಗೆ ಮೂಲಭೂತವಾದ ಸೌಲಭ್ಯಗಳ ಜೊತೆಗೆ ರಕ್ಷಣೆ ಸಹ ಇರಬೇಕು ಎನ್ನುವುದು ಆಯೋಗದ ಅಭಿಪ್ರಾಯವಾಗಿದೆ. ಇದರ ಬಗ್ಗೆ ಒಂದು ತಿಂಗಳಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ.

2. ಗದಗ್ ಜಿಲ್ಲೆಯಾದ್ಯಂತ ಬಿದ್ದ ಭಾರಿ ಮಳೆಯಿಂದ ಆದ ಹಾನಿಯ ಬಗ್ಗೆ ಕರ್ನಾಟಕ ವಿಧಾನ ಪರಿಷತ್ತಿನ ಅಂದಿನ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಜನ ಮಾಜಿ ಶಾಸಕರು ಮತ್ತು ಸಾರ್ವಜನಿಕ ಮುಖಂಡರು ನೀಡಿದ ದೂರುಗಳನ್ನು ಆಯೋಗ ವಿಚಾರಣೆಗೆ ತೆಗೆದುಕೊಂಡಿದೆ. ಅವರ ದೂರಿನ ಮುಖ್ಯ ಅಂಶ ಗದಗ್ ಜಿಲ್ಲೆಯ ಆಡಳಿತ ಯಂತ್ರ ಈ ಸಮಸ್ಯೆಯ ಬಗ್ಗೆ ತೀವ್ರ ಅಸಡ್ಡೆಯಿಂದ ವರ್ತಿಸಿ ಜವಾಬ್ದಾರಿಯಿಂದ ನಡೆದುಕೊಳ್ಳದೆ ಪ್ರವಾಹ ಪೀಡಿತ ಜನತೆಗೆ ಮಾಡಿದ ಅನ್ಯಾಯದಿಂದ ಮಾನವ ಹಕ್ಕುಗಳ ಉಲ್ಲಂಘನೆ ಆಗಿರುವುದನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಲಾಗಿದೆ. ವಿಚಾರಣೆಗೆ ಕೈಗೆತ್ತಿಕೊಂಡ ಆಯೋಗದ ಪೂರ್ಣಪೀಠ ತನ್ನ ದಿನಾಂಕ 12.12.2007ರ ಆದೇಶದ



ಪ್ರಕಾರ ಮಾನ್ಯ ಸದಸ್ಯರುಗಳು ಹಾಗೂ ಐ.ಜಿ.ಪಿ. ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿತು. ಈ ಆದೇಶದಂತೆ ದಿನಾಂಕ 20.12.2007ರಂದು ಆಯೋಗದ ಸದಸ್ಯರುಗಳು ಗದಗ್ ಜಿಲ್ಲೆಯ ಕುರ್ಲಗೇರಿ, ಮೆಣಸಗಿ, ಹೊಳೆಮಣ್ಣೂರು, ಗಾಡಗೋಳಿ ಮತ್ತು ಹೊಳೆ ಆಲೂರು ಗ್ರಾಮಗಳಿಗೆ ಭೇಟಿ ನೀಡಿ ಸಾರ್ವಜನಿಕರು, ಜನ ಪ್ರತಿನಿಧಿಗಳು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಪ್ರವಾಹದಿಂದ ಸಂತ್ರಸ್ತರಾದ ಜನರನ್ನು ಭೇಟಿ ಮಾಡಿ ಅಲ್ಲಿ ನೀಡಿರುವ ಸೌಲಭ್ಯಗಳನ್ನು ಪರಿಶೀಲಿಸಿದರು. ಅದನ್ನು ಪರಿಶೀಲಿಸಿದ ಮೇಲೆ ಮಧ್ಯಂತರ ಸೂಚನೆಗಳನ್ನು ನೀಡಲಾಯಿತು. ಜನರು ವಾಸ ಮಾಡಲು ಅಗತ್ಯವಾದ ಪ್ರತ್ಯೇಕ ಷೆಡ್ಡುಗಳು, ಅವುಗಳಿಗೆ ಸರಿಯಾದ ಬಾಗಿಲು ಹಾಗೂ ವಿವಿಧ ಇತರೆ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಸೂಚನೆ ನೀಡಲಾಯಿತು. ಅದೇ ರೀತಿ ಕುಟುಂಬಗಳಿಗೆ ನೀಡಬೇಕಾದ ಬಟ್ಟೆಗಳು ಮತ್ತು ಕಂಬಳಿ (ಬ್ಲಾಂಕೆಟ್) ವ್ಯವಸ್ಥೆ ಸರಿಯಾಗಿ ಮಾಡಬೇಕು ಹಾಗೂ

ರೇಷನ್ ಕಾರ್ಡ್ ವ್ಯವಸ್ಥೆ ಮಾಡಬೇಕೆಂದು, ಆರೋಗ್ಯ ತಪಾಸಣೆ ಮತ್ತು ಶಾಲೆಗೆ ಹೋಗುವ ಮಕ್ಕಳಿಗೆ ಅಗತ್ಯವಾದ ಬಿಸಿ ಊಟ ಇವುಗಳ ವ್ಯವಸ್ಥೆ ಮಾಡಬೇಕೆಂದು ಸೂಚನೆ ನೀಡಿದ್ದು, ಅದರಂತೆ ಕ್ರಮ ತೆಗೆದುಕೊಂಡ ಬಗ್ಗೆ ಜಿಲ್ಲಾಧಿಕಾರಿಗಳು ಅನುಸರಣಾ ವರದಿಯನ್ನು ಸಹ ನೀಡಿದ್ದಾರೆ.

---

**ಮಾನವ ಹಕ್ಕುಗಳ ಆಯೋಗದ ಆದೇಶವನ್ನು ಸರ್ಕಾರವು ಪಾಲಿಸಬೇಕಾಗಿದೆಯೇ?**

ಒಂದು ಪ್ರಕರಣದಲ್ಲಿನ ಎಲ್ಲಾ ವಾಸ್ತವಾಂಶ ಮತ್ತು ಸನ್ನಿವೇಶಗಳನ್ನು ಒಮ್ಮೆ ಪರಾಂಬರಿಸಿದ ಮೇಲೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಅಥವಾ ರಾಜ್ಯ ಮಾನವ



ಹಕ್ಕುಗಳ ಆಯೋಗವು ಸಂಬಂಧಪಟ್ಟ ಸರ್ಕಾರಕ್ಕೆ ತನ್ನ ತೀರ್ಮಾನವನ್ನು ತಿಳಿಸುವುದು. ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993ರಲ್ಲಿ ಆಯೋಗವು ಸರ್ಕಾರಕ್ಕೆ ಕೇವಲ ಶಿಫಾರಸ್ಸನ್ನು ಮಾತ್ರ ಮಾಡಬಹುದೆಂದು ಹಾಗೂ ಒಂದು ತೀರ್ಮಾನವನ್ನು ಜಾರಿಗೊಳಿಸಬೇಕೆಂದು ಒತ್ತಾಯ ಮಾಡುವ ಅಧಿಕಾರವಿಲ್ಲವೆಂದು ತಿಳಿಸಿದ್ದರೂ, ಸರ್ಕಾರವು ಮಾನವ ಹಕ್ಕುಗಳ ಆಯೋಗದ ಶಿಫಾರಸ್ಸಿನಂತೆ ನಡೆದುಕೊಳ್ಳಬೇಕೆಂದು ನಿರೀಕ್ಷಿಸಲಾಗಿದೆ. ಒಂದು ವೇಳೆ ಸರ್ಕಾರವು ಮಾನವ ಹಕ್ಕುಗಳ ಆಯೋಗದ ತೀರ್ಮಾನವನ್ನು ಪಾಲಿಸುವುದು ಬೇಡವೆಂದು ತೀರ್ಮಾನಿಸಿದರೆ ಯಾವ ಕಾರಣದಿಂದ ಪಾಲಿಸಲು ಸಾಧ್ಯವಿಲ್ಲ ಎಂಬುದರ ಬಗ್ಗೆ **ಕ್ರಮ ತೆಗೆದುಕೊಂಡ ಬಗ್ಗೆ ವರದಿ** ಎಂಬ ವಿಶೇಷ ವರದಿಯಲ್ಲಿ ವಿವರಗಳನ್ನು ನೀಡಬೇಕಾಗುತ್ತದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸಲ್ಲಿಸಿದ ವರದಿಯನ್ನು ಸಂಸತ್ತಿನ ಮುಂದೆ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗಗಳು ಸಲ್ಲಿಸಿದ ವರದಿಯನ್ನು ಸಂಬಂಧಪಟ್ಟ ವಿಧಾನಮಂಡಲಗಳ ಮುಂದೆ ಮಂಡಿಸಬೇಕಾಗುತ್ತದೆ. ಇದಲ್ಲದೆ, ಮಾನವ ಹಕ್ಕುಗಳ ಆಯೋಗಗಳು ತನ್ನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವಂತೆ ಒತ್ತಾಯಪಡಿಸುವುದಕ್ಕಾಗಿ ಉಚ್ಛ ನ್ಯಾಯಾಲಯದ ಅಥವಾ ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗಬಹುದು. ನಾಗರೀಕ ಸಮಾಜದ ಹಾಗೂ ಮಾಧ್ಯಮದವರ ಒತ್ತಾಯದ ಮೇರೆಗೆ, ಜಾಗೃತ ಪ್ರಜೆಗಳು ಹಾಗೂ ಜಾಗೃತ ನ್ಯಾಯಾಲಯಗಳಿಂದಾಗಿ, ಮಾನವ ಹಕ್ಕುಗಳ ಆಯೋಗದ ಶಿಫಾರಸ್ಸನ್ನು ತಿರಸ್ಕರಿಸುವುದು ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆ.



---

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ತಮಿಳು ನಾಡು ಸರ್ಕಾರಕ್ಕೆ ಪೋಲೀಸರ ಚಿತ್ರಹಿಂಸೆಯಿಂದ ನೊಂದವರೊಬ್ಬರಿಗೆ ತಕ್ಷಣ ಪರಿಹಾರ ನೀಡಬೇಕೆಂದು ಸೂಚಿಸಿದರೂ ತಮಿಳು ನಾಡು ಸರ್ಕಾರವು ಆಯೋಗದ ಆದೇಶವನ್ನು ಪಾಲಿಸಲಿಲ್ಲ. ಆದಕಾರಣ ಆಯೋಗವೇ ಮದ್ರಾಸ್ ಉಚ್ಛ ನ್ಯಾಯಾಲಯದ ಮುಂದೆ ಹೋಗಿ ರಾಜ್ಯ ಸರ್ಕಾರಕ್ಕೆ ಪರಿಹಾರ ನೀಡಲು ನಿರ್ದೇಶನ ನೀಡುವಂತೆ ಕೋರಿತು. ಉಚ್ಛ ನ್ಯಾಯಾಲಯವು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ನಿರ್ಧರಿಸಿದ ಹಣವನ್ನು ನೊಂದವರಿಗೆ ಆಯೋಗ ಶಿಫಾರಸ್ಸು ಮಾಡಿದ ದಿನಾಂಕದಿಂದ ಪಾವತಿ ಮಾಡಿದ ದಿನಾಂಕದವರೆಗೆ ಶೇ.18ರಷ್ಟು ಬಡ್ಡಿಯ ಸಮೇತ ನೀಡಬೇಕೆಂದು ಆದೇಶಿಸಿತು. ರಾಜ್ಯ ಸರ್ಕಾರದ ವರ್ತನೆಯನ್ನು ಉಚ್ಛ ನ್ಯಾಯಾಲಯವು ಎಷ್ಟರ ಮಟ್ಟಿಗೆ ಖಂಡಿಸಿತೆಂದರೆ ದಂಡವಾಗಿ ಹೆಚ್ಚುವರಿಯಾಗಿ ಹಣ ನೀಡಬೇಕೆಂದು ನಿರ್ದೇಶನ ನೀಡಿತು.

---

**ಮಾನವ ಹಕ್ಕುಗಳ ಆಯೋಗವು ತನ್ನಷ್ಟಕ್ಕೆ ತಾನೇ ಒಂದು ಉಲ್ಲಂಘನೆಯನ್ನು ಕೈಗೆತ್ತಿಕೊಳ್ಳಬಹುದೇ?**

ಹೌದು. ಕೆಲವು ಪ್ರಕರಣಗಳಲ್ಲಿ, ಮಾನವ ಹಕ್ಕುಗಳ ಆಯೋಗಗಳು ಮಾನವ ಹಕ್ಕುಗಳ ಉಲ್ಲಂಘನೆಗಳ ಬಗ್ಗೆ ವೃತ್ತಪತ್ರಿಕೆಗಳು, ದೂರದರ್ಶನ ಮತ್ತಿತರ ಸಮೂಹ ಮಾಧ್ಯಮಗಳಲ್ಲಿ ಬಂದ ವರದಿಗಳನ್ನು ಗಮನಿಸುತ್ತವೆ. ಇದನ್ನು ದೂರುಗಳ ಸ್ವಯಂವೇದ್ಯ ಪ್ರಕರಣ ಎಂದು ಕರೆಯಲಾಗುತ್ತದೆ, ಅರ್ಥಾತ್ ಮಾನವ ಹಕ್ಕುಗಳ ಆಯೋಗವು, ಒಂದು ಗಂಭೀರವಾದ



ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂಬುದನ್ನು ಮನಗಂಡರೆ, ಬೇರೆಯವರು ದೂರನ್ನು ದಾಖಲಿಸದಿದ್ದರೂ, ತನ್ನಷ್ಟಕ್ಕೆ ತಾನೇ ಪ್ರಕರಣವನ್ನು ಕೈಗೆತ್ತಿಕೊಳ್ಳಲು ನಿರ್ಧರಿಸುತ್ತದೆ.

ಪತ್ರಿಕೆಯೊಂದರಲ್ಲಿ ಮಧ್ಯ ಪ್ರದೇಶದ ಸ್ಲೇಟ್ ಕಾರ್ಖಾನೆಯಲ್ಲಿನ ಕಳಪೆ ಯಂತ್ರದಿಂದ ಹೊರಸೂಸುವ ಸಿಲಿಕಾನ್ ಧೂಳಿನಿಂದಾಗಿ ಆ ಕಾರ್ಖಾನೆಯ ಕಾರ್ಮಿಕರ ಆರೋಗ್ಯವು ತೀವ್ರವಾಗಿ ಹದಗೆಡುತ್ತಿವೆ ಎಂದು ವರದಿ ಮಾಡಲಾಗಿತ್ತು. ಪತ್ರಿಕಾ ವರದಿಯನ್ನು ಗಮನಿಸಿದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ರಾಜ್ಯ ಸರ್ಕಾರಕ್ಕೆ ಕೆಳಕಂಡಂತೆ ನಿರ್ದೇಶನ ನೀಡಿತು: (ಅ) ಸಿಲಿಕಾನ್ ಕಾರ್ಖಾನೆಗಳಲ್ಲಿ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್‌ನಿಂದ (ಬಿ.ಹೆಚ್.ಇ.ಎಲ್.) ತಯಾರಿಸಲ್ಪಟ್ಟ ಉತ್ತಮ ಯಂತ್ರವನ್ನು ಮಾತ್ರ ಉಪಯೋಗಿಸಿ ಕಾರ್ಮಿಕರು ಧೂಳು ರಹಿತ ಹಾಗೂ ಮಾಲಿನ್ಯ ರಹಿತ ಪರಿಸರದಲ್ಲಿ ಕೆಲಸ ಮಾಡುವಂತಾಗಬೇಕು; (ಆ)

ಕಾರ್ಮಿಕ ಇಲಾಖೆಯು ತಿಂಗಳಿಗೊಮ್ಮೆ ಕಾರ್ಖಾನೆಯ ತನಿಖೆ ಮಾಡಿ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ವರದಿ ಮಾಡಬೇಕು; (ಇ) ಮೃತಪಟ್ಟ ಕಾರ್ಮಿಕರ ವಿಧವೆಯರು ಮತ್ತು ಮಕ್ಕಳ ಯೋಗಕ್ಷೇಮವನ್ನು ಕಾರ್ಖಾನೆ ಮಾಲೀಕರು ನೋಡಿಕೊಳ್ಳಬೇಕು (ಈ) ಕಾರ್ಖಾನೆಗಳಲ್ಲಿ ಮಕ್ಕಳನ್ನು ನೇಮಕ ಮಾಡಬಾರದು.

**ಮಾನವ ಹಕ್ಕುಗಳ ಆಯೋಗಗಳು ಕೈಗೆತ್ತಿಕೊಂಡಿರುವಂತಹ ಸಾಮೂಹಿಕವಾಗಿ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಮಾಡಿರುವಂತಹ ಪ್ರಕರಣಗಳೇನಾದರೂ ಇವೆಯೇ?**

ಮಾನವ ಹಕ್ಕುಗಳ ಆಯೋಗಗಳು ಅಂಥಹ ಸನ್ನಿವೇಶಗಳನ್ನು ಗಮನಿಸುತ್ತವೆ. ಸಾಮೂಹಿಕ ಮಾನವ ಹಕ್ಕುಗಳ ಉಲ್ಲಂಘನೆಗಳಾಗುವುದು ಅತೀ ಹೆಚ್ಚು ಜನರ ಒಟ್ಟಾರೆ ಗುಂಪಿನ ಹಕ್ಕುಗಳು ವಂಚಿತವಾದಾಗ ಉಂಟಾಗುತ್ತವೆ. ಸಾಮೂಹಿಕ ಉಲ್ಲಂಘನೆಯು ರಾಜ್ಯವು



ನೇರವಾಗಿ ಕ್ರಮ ತೆಗೆದುಕೊಂಡಾಗ ಅಥವಾ ಮನುಷ್ಯನಿಂದುಂಟಾದ ಅಥವಾ ಪ್ರಕೃತಿ ಸಹಜವಾಗಿ ಆಗುವ ಹಾನಿಯಾಗುವುದನ್ನು ತಪ್ಪಿಸಲು ವಿಫಲವಾದಾಗ.

**ಕರ್ನಾಟಕದ ಕೆಲವು ಪ್ರಕರಣಗಳು:**

ಇತ್ತೀಚೆಗೆ ಕರ್ನಾಟಕ ರಾಜ್ಯದ ಬೆಂಗಳೂರು, ಮಂಗಳೂರು ಮತ್ತಿತರ ಅನೇಕ ನಗರಗಳಲ್ಲಿ ಚರ್ಚ್‌ಗಳ ಮೇಲೆ ದಾಳಿಯಾಗಿದೆ ಎಂದೂ, ಇದರಿಂದ ಅಲ್ಪಸಂಖ್ಯಾತರು ಭಯಭೀತರಾಗಿದ್ದಾರೆಂದು ದೂರುಗಳು ಬಂತು. ಜೊತೆಗೆ ಪತ್ರಿಕಾ ವರದಿಗಳನ್ನು ಅನುಸರಿಸಿ ಆಯೋಗದ ಪೂರ್ಣ ಪೀಠವು ಮಂಗಳೂರಿಗೆ ಭೇಟಿ ನೀಡಿ ಪರಿಶೀಲನೆ ಮಾಡಿತು.

ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಿಗೆ ಪ್ರವಾಸ ಹೋಗಿ ಈಗ ಸರ್ಕಾರದ ಪ್ರತಿಕ್ರಿಯೆಗಾಗಿ ಕಾಯಲಾಗುತ್ತಿದೆ.

ಅದೇ ರೀತಿ ಬೆಂಗಳೂರು ಮತ್ತು ಅನೇಕ ನಗರಗಳಲ್ಲಿ ನಡೆದ ಕಳ್ಳಭಟ್ಟಿ ಸೇವನೆಯ ದುರಂತದಲ್ಲಿ ಅನೇಕ ಜನ ಸಾವು ನೋವುಗಳನ್ನಪ್ಪಿದ್ದು ಸಹ ಗಮನಕ್ಕೆ ಬಂದಿತು. ಆಯೋಗವು ಭೇಟಿ ನೀಡಿ ಕೆಲವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ನೀಡಿದೆ. ಅದರಲ್ಲೂ ಬೆಂಗಳೂರಿನ ಹೆಸರಾಂತ ಬೌರಿಂಗ್ ಆಸ್ಪತ್ರೆಗೆ ಭೇಟಿ ನೀಡಿದಾಗ ಅಲ್ಲಿ "ತುರ್ತು ಚಿಕಿತ್ಸಾ ಘಟಕ" ಇಲ್ಲದೇ ಇರುವುದು ಕಂಡುಬಂದಾಗ ಆಸ್ಪತ್ರೆಯಿಂದಲೇ ಸರ್ಕಾರದ ಮುಖ್ಯ ಕಾರ್ಯದರ್ಶಿಗಳನ್ನು ಸಂಪರ್ಕಿಸಿ ಈ ಘಟಕದ ಸ್ಥಾಪನೆಗೆ ವ್ಯವಸ್ಥೆ ಮಾಡಬೇಕೆಂದು ಆಯೋಗವು ಸೂಚನೆ ನೀಡಿತು. ಈಗ ಅದರಂತೆ ಬೆಂಗಳೂರಿನ ಎಲ್ಲಾ ಪ್ರಮುಖ ಸರ್ಕಾರಿ ಆಸ್ಪತ್ರೆಗಳಲ್ಲಿ "ತುರ್ತು ಚಿಕಿತ್ಸಾ ಘಟಕ" ಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ತೆಗೆದುಕೊಂಡಿದೆ.

–75–

ಬೆಂಗಳೂರಿನ ಅನೇಕ 'ಗಗನಚುಂಬಿ ಕಟ್ಟಡ' ಗಳಲ್ಲಿ ನಡೆದ ದುರ್ಘಟನೆಗಳಿಂದ ಕಾರ್ಮಿಕರು ಸಾವು ನೋವುಗಳುಂಟಾದಾಗ ಆಯೋಗವು ಭೇಟಿ ನೀಡಿ ಅವುಗಳನ್ನು ದಾಖಲು ಮಾಡಿಕೊಳ್ಳದೆ ಇರುವುದನ್ನು ಗಮನಿಸಿದ ಮೇಲೆ ಕಾರ್ಮಿಕ ನ್ಯಾಯ ಮಂಡಳಿಯು ಸಭೆ ಸೇರಿ ಅಗತ್ಯ ಕ್ರಮ ತೆಗೆದುಕೊಳ್ಳುವ ನಿರ್ಣಯ ಕೈಗೊಂಡಿದೆ.

---

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಗಣಿಗಾರಿಕೆಯಿಂದ ಜನರ ಮೇಲೆ ಭೀಕರ ಪರಿಣಾಮವಾಗಿದೆ ಎಂದು ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ: ಯು.ಆರ್. ಅನಂತಮೂರ್ತಿ

ಅವರ ನೇತೃತ್ವದಲ್ಲಿ ಬುದ್ಧಿಜೀವಿಗಳ ನಿಯೋಗ ನೀಡಿದ ದೂರಿನ ವಿಚಾರಣೆ ಕೈಗೊಂಡ ಆಯೋಗವು, ಆಯೋಗದ ಇಬ್ಬರು ಸದಸ್ಯರು ಮತ್ತು ಐ.ಜಿ.ಪಿ. ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಈಗ ಸರ್ಕಾರದ ಪ್ರತಿಕ್ರಿಯೆಗಾಗಿ ಕಾಯಲಾಗುತ್ತಿದೆ. ಅಷ್ಟರಲ್ಲಿ ಏನು ಅಭಿವೃದ್ಧಿಯ ನಿಧಿ ಎಂದು ಒದಗಿಸಲಾಗಿದೆಯೋ ಆ ನಿಧಿಯಿಂದ ಕುಡಿಯುವ ನೀರು ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕೆಂದು ಆಯೋಗ ಸೂಚನೆ ನೀಡಿದುದರ ಮೇರೆಗೆ ಜಿಲ್ಲಾ ಆಡಳಿತದಿಂದ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

## ಗುಜರಾತ್ ದೊಂಬಿ

ಗುಜರಾತಿನಲ್ಲಿ 2002ರ ಫೆಬ್ರವರಿ–ಮಾರ್ಚ್‌ನಲ್ಲಿ ದೊಡ್ಡ ಪ್ರಮಾಣದ ಕೋಮು ಗಲಭೆಗಳು ನಡೆದವು. ಮುಖ್ಯವಾಗಿ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಸೇರಿದ ಸುಮಾರು 3000 ಜನರನ್ನು ಕ್ರೂರವಾಗಿ ಕೊಂದು ಅವರ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿ ನಾಶಪಡಿಸಲಾಯಿತು. ಹಿಂಸೆಯನ್ನು ನಿಲ್ಲಿಸಿ, ಅಪರಾಧಿಗಳನ್ನು ಬಂಧಿಸಿ ಅವರನ್ನು ನ್ಯಾಯಾಲಯದ ಮುಂದೆ ತಂದು



ಅಲ್ಪಸಂಖ್ಯಾತರನ್ನು ರಕ್ಷಿಸುವಲ್ಲಿ ರಾಜ್ಯ ಸರ್ಕಾರವು – ಅದರ ಆಡಳಿತ ಮತ್ತು ಪೊಲೀಸರು, ಸಾಕಷ್ಟು ಕ್ರಮಗಳನ್ನು ಕೈಗೊಂಡಿಲ್ಲವೆಂದು ವರದಿಗಳಿಂದ ಕಂಡುಬಂದವು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸ್ವಯಂವೇದ್ಯವಾಗಿ ದೂರನ್ನೂ ದಾಖಲಿಸಿಕೊಂಡು ರಾಜ್ಯ ಸರ್ಕಾರವನ್ನು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಪ್ರಶ್ನಿಸಿತು. ತದನಂತರ, ಸಾಕ್ಷಿಗಳನ್ನು ಬೆದರಿಸಿ ತಪ್ಪಿತಸ್ಥರನ್ನು ನ್ಯಾಯಾಲಯಗಳು ಬಿಡುಗಡೆ ಮಾಡಿದವೆಂಬ ವರದಿಗಳು ಬಂದ ಮೇಲೇ ಆಯೋಗವು ಬಲಿಪಶುವಾದವರ ಪರವಾಗಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೊಕ್ಕಿತು.

## ಹೊಜೋಂಗ್ ಮತ್ತು ಚಕ್ಮ ನಿರಾಶ್ರಿತರಿಗೆ ಕಿರುಕುಳ

1964–71 ಅವಧಿಯಲ್ಲಿ ಮೂಲತ: ಪೂರ್ವ ಪಾಕಿಸ್ತಾನದಿಂದ ಬಂದ ಹೊಜೋಂಗ್ ಮತ್ತು ಚಕ್ಮ ನಿರಾಶ್ರಿತರಿಗೆ ಅರುಣಾಚಲ ಪ್ರದೇಶದಲ್ಲಿ ಕಿರುಕುಳ ನೀಡಿ ಬೆದರಿಕೆಯನ್ನು ಒಡ್ಡುತ್ತಿರುವ ಬಗ್ಗೆ ಪೀಪಲ್ಸ್ ಯೂನಿಯನ್ ಆಫ್ ಸಿವಿಲ್ ಲಿಬರ್ಟೀಸ್ (ಪಿ.ಯು.ಸಿ.ಎಲ್.) ಮತ್ತು ಅಮ್ನೆಸ್ಟಿ ಇಂಟರ್ ನ್ಯಾಷನಲ್‌ನಿಂದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ವರದಿಗಳನ್ನು ಸ್ವೀಕರಿಸಿತು. ಪ್ರಾರಂಭದಲ್ಲಿ ಪೂರ್ವ ಪಾಕಿಸ್ತಾನದಲ್ಲಿ ಅವರಿಗೆ ಧಾರ್ಮಿಕವಾಗಿ ಕಿರುಕುಳ ನೀಡುತ್ತಿದ್ದುದನ್ನು ಸಹಿಸಲಾರದೆ ಭಾರತಕ್ಕೆ ಓಡಿಬಂದಾಗ ಅವರನ್ನು ಸ್ವಾಗತಿಸಲಾಗಿತ್ತಾದರೂ, ಸ್ಥಳೀಯ ಜನರಿಂದ ಅವರಿಗೆ ಆಗುತ್ತಿದ್ದ ಕಿರುಕುಳವನ್ನು ತಡೆಗಟ್ಟಿ ಅವರಿಗೆ ರಕ್ಷಣೆ ಒದಗಿಸಲು ರಾಜ್ಯ ಸರ್ಕಾರವು ವಿಫಲವಾಗಿದೆಯೆಂದು ವರದಿಗಳಲ್ಲಿ ತಿಳಿಸಲಾಗಿತ್ತು. ಪ್ರಕರಣದ



ಗಂಭೀರತೆಯನ್ನು ಮನಗಂಡು, ರಾಷ್ಟ್ರೀಯ ಆಯೋಗವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಈ ವಿಷಯಗಳನ್ನು ತಿಳಿಸಿ ಹಜೋಂಗ್ ಮತ್ತು ಚಕ್ಮ ನಿರಾಶ್ರಿತರ ಜೀವ ಮತ್ತು ಆಸ್ತಿಪಾಸ್ತಿಗಳನ್ನು ಸಂರಕ್ಷಿಸಬೇಕೆಂದು ಸೂಚಿಸಿತು. ಅವರಿಗೆ ರಕ್ಷಣೆಯನ್ನು ನೀಡಲು ತೆಗೆದುಕೊಂಡ ಕ್ರಮಗಳಿಂದ ಆಯೋಗವು ತೃಪ್ತಿಯಾಗದೆ ಸರ್ವೋಚ್ಛ ನ್ಯಾಯಾಲಯದ ಮೊರೆ ಹೊಕ್ಕು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 65,000 ಹಜೋಂಗ್ ಮತ್ತು ಚಕ್ಮ ನಿರಾಶ್ರಿತರನ್ನು ರಕ್ಷಿಸುವ ಬಗ್ಗೆ ನಿರ್ದೇಶನವನ್ನು ನೀಡುವಂತೆ ಕೋರಿತು.

## ಒರಿಸ್ಸಾದಲ್ಲಿ ಹಸಿವಿನಿಂದಾದ ಸಾವು

ಒರಿಸ್ಸಾದ ಕಾಳಹಂದಿ, ಬೊಲಂಗೀರ್ ಮತ್ತು ಕೊರಾಪಟ್ ನಲ್ಲಿ ಹಸಿವಿನಿಂದ ಹಲವಾರು ಜನ ಮೃತಪಟ್ಟ ವಿಷಯಗಳ ಬಗ್ಗೆ ವರದಿಗಳನ್ನು ಗಮನಿಸಿ ಆತಂಕಗೊಂಡ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸ್ಥಳ ಪರಿಶೀಲನೆ ಮಾಡಿ ವರದಿ ಮಾಡಲು ಒಂದು ತಂಡವನ್ನು ಕಳುಹಿಸಿತು. ಪರಿಹಾರ ಹಾಗೂ ಪುನರ್ವಸತಿ ಕಾರ್ಯಗಳ ಮೇಲ್ವಿಚಾರಣೆ ಮಾಡಿ ಪ್ರಗತಿಯ ಬಗ್ಗೆ ತನ್ನ ಅಭಿಪ್ರಾಯ ಮಂಡಿಸಲು ಒಬ್ಬ ವಿಶೇಷ ರಾಪೋರ್ಟರ್ (Special Rapporteur) ರನ್ನೂ ಸಹ ನೇಮಕ ಮಾಡಿತು. ಆಯೋಗವು ರಾಜ್ಯ ಸರ್ಕಾರಕ್ಕೆ ಕೆಳಕಂಡಂತೆ ಸೂಚಿಸಿತು: ತುರ್ತುಸ್ಥಿತಿಯಲ್ಲಿ ಆಹಾರ ಒದಗಿಸುವುದು ಹಾಗೂ ಮಧ್ಯಾಹ್ನ ಉಪಹಾರ ಯೋಜನೆಯನ್ನು ಬಲಪಡಿಸಿ ಸರಿಯಾದ ವಿತರಣೆಯಾಗುವಂತೆ ನೋಡಿಕೊಳ್ಳಬೇಕೆಂದು; ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಅರ್ಹತೆಗಳ ಪರಿಷ್ಕರಣ ಕಾರ್ಯ ಕೈಗೊಳ್ಳುವುದು; ಈಗಿರುವ 150 ಜನರಿಗೆ ಒಂದು ಕೊಳವೆ ಬಾವಿ ಎಂಬ ಮಾಪನವನ್ನು ಪರಿಷ್ಕರಿಸಿ ನೀರನ್ನು ತರಲು ಒಂದೂವರೆ ಕಿಲೋಮೀಟರ್ ಪ್ರಯಾಣ



ಮಾಡುವುದರ ಬದಲು ಸರಾಸರಿ ಅರ್ಧ ಕಿಲೋಮೀಟರ್ ಪ್ರಯಾಣ ಮಾಡುವಂತೆ ಮಾಡುವುದು; ಮತ್ತು ಖಾಲಿಯಿರುವ ವೈದ್ಯರು ಮತ್ತು ಅರೆಕಾಲಿಕ ವೈದ್ಯ ಸಿಬ್ಬಂದಿಗಳನ್ನು ಆದ್ಯತೆಯ ಮೇಲೆ ಭರ್ತಿ ಮಾಡುವುದು. ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಲ್ಪ ಹಾಗೂ ದೀರ್ಘಾವಧಿ ಕ್ರಮಗಳನ್ನು ಕೈಗೊಂಡು ಪರಿಸ್ಥಿತಿಯನ್ನು ಅಭಿವೃದ್ಧಿ ಪಡಿಸುವ ಕ್ರಮಗಳನ್ನು ಆಯೋಗವು ಪರಿಶೀಲಿಸುತ್ತಿದೆ.

---

**ಮಾನವ ಹಕ್ಕುಗಳ ಆಯೋಗಗಳು ದೂರುಗಳ ಬಗ್ಗೆ ಕ್ರಮ ಕೈಗೊಳ್ಳುವುದಲ್ಲದೆ ಬೇರೆ ಯಾವ ಕ್ರಮಗಳನ್ನು ಕೈಗೊಳ್ಳುತ್ತವೆ?**

ಮಾನವ ಹಕ್ಕುಗಳ ಆಯೋಗಗಳಿಗೆ ಸರ್ಕಾರದ ಚಟುವಟಿಕೆಗಳ ಮೇಲ್ವಿಚಾರಣೆ ನಡೆಸುವ ಮತ್ತು ಸರ್ಕಾರಿ ಸಂಸ್ಥೆಗಳು ಮಾನವ ಹಕ್ಕುಗಳ ಮಾದರಿ ಸೂತ್ರ ಹಾಗೂ ಮಾನದಂಡಗಳನ್ನು ಅನುಸರಿಸುವಂತೆ ನೋಡಿಕೊಳ್ಳುವ ಜವಾಬ್ದಾರಿಯಿರುತ್ತದೆ. ಮಾನವ ಹಕ್ಕುಗಳ ಆಯೋಗಗಳ ಸದಸ್ಯರು ಕಾಲಕಾಲಕ್ಕೆ ಕೆಳಕಂಡ ತನಿಖೆಗಳನ್ನು ಕೈಗೊಳ್ಳುವುದೆಂದು ಅಪೇಕ್ಷಿಸಲಾಗಿದೆ:

- ಪೊಲೀಸ್ ಬಂಧನಗಳು
- ಸೆರೆಮನೆಗಳು
- ಬಾಲ ಗೃಹಗಳು
- ಬಂಧಿಸಲ್ಪಟ್ಟ ಕೇಂದ್ರಗಳು
- ನಿರಾಶ್ರಿತ ಶಿಬಿರಗಳು
- ಸರ್ಕಾರಿ ಆಸ್ಪತ್ರೆಗಳು

---



ಮಾನವ ಹಕ್ಕುಗಳ ಆಯೋಗಗಳ ತನಿಖಾ ತಂಡಗಳು ದೇಶದ ಹಲವಾರು ಕಾರಾಗೃಹಗಳಲ್ಲಿನ ಕಟ್ಟಡಗಳ ದು:ಸ್ಥಿತಿ, ಅನಾರೋಗ್ಯಕರ ಆಹಾರದ ನೀಡಿಕೆ, ಅಸಮರ್ಪಕ ವೈದ್ಯಕೀಯ ಸೌಲಭ್ಯಗಳು, ಸರಿಯಾದ ಶೌಚಾಲಯಗಳಿಲ್ಲದಿರುವುದು, ಕಳಪೆ ದರ್ಜೆಯ ವಾಸ ಸ್ಥಿತಿಯನ್ನು ಬೆಳಕಿಗೆ ತರಲು ಸಹಾಯ ಮಾಡಿವೆ. ಅವುಗಳು ಹಲವಾರು ಮಂದಿ ವಿಚಾರಣಾಧೀನ ಖೈದಿಗಳು ತಮ್ಮ ಪ್ರಕರಣಗಳಲ್ಲಿನ ತೀರ್ಮಾನಗಳನ್ನು ನಿರೀಕ್ಷಿಸುತ್ತಾ ಪಡುತ್ತಿರುವ ಪಾಡನ್ನೂ ಸಹ ಬೆಳಕಿಗೆ ತರಲು ಸಹಾಯ ಮಾಡಿವೆ.

ಮಾನವ ಹಕ್ಕುಗಳ ಆಯೋಗಗಳು ಕೆಳಕಂಡ ಕಾರ್ಯಗಳನ್ನು ಕೈಗೊಳ್ಳುವುದೆಂದು ನಿರೀಕ್ಷಿಸಲಾಗಿದೆ: ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಆಗುವ ಪ್ರಗತಿಯನ್ನು ಗಮನಿಸುತ್ತಿರುವುದು; ಮಾನವ ಹಕ್ಕುಗಳ ದೃಷ್ಟಿಯಿಂದ ಕಾನೂನುಗಳನ್ನು ವಿಮರ್ಶಿಸುವುದು; ಸಂಶೋಧನೆಗಳನ್ನು ಕೈಗೊಳ್ಳುವುದು; ಮಾನವ ಹಕ್ಕುಗಳನ್ನು ಸೂಕ್ಷ್ಮಗೊಳಿಸುವ ಕಾರ್ಯಕ್ರಮಗಳನ್ನು ರೂಪಿಸುವುದು; ಪತ್ರಿಕಾ ಪ್ರಕಟಣೆಗಳು, ವರದಿಗಳ ಪ್ರಕಟಣೆ, ಸುದ್ದಿಬರಹಗಳು, ಭಿತ್ತಿಪತ್ರಗಳು, ಸಾಕ್ಷ್ಯಚಿತ್ರಗಳು, ಕೈಹೊತ್ತಿಗಳು ಮುಂತಾದವುಗಳ ಮುಖಾಂತರ ಮಾನವ ಹಕ್ಕುಗಳ ಜಾಗೃತಿಯನ್ನು ಹೆಚ್ಚಿಸುವುದು.

**ಮಾನವ ಹಕ್ಕುಗಳ ಆಯೋಗಗಳು ಎಂತಹ ಯೋಜನೆಗಳಲ್ಲಿ ಭಾಗಿಯಾಗುವುವು?**

ಮಾನವ ಹಕ್ಕುಗಳ ಆಯೋಗಗಳು ಕಾಲ ಕಾಲಕ್ಕೆ ದೇಶದಲ್ಲಿ ಮಾನವ ಹಕ್ಕುಗಳ ಉನ್ನತಿಗಾಗಿ ಹಲವಾರು ಯೋಜನೆಗಳು ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುತ್ತವೆ.



ಮಾನವ ಹಕ್ಕುಗಳ ಆಯೋಗಗಳು ಹಲವು ಬಾರಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರತಿನಿಧಿಗಳು, ಶೈಕ್ಷಣಿಕ ಹಾಗೂ ಸಂಶೋಧನಾ ಸಂಸ್ಥೆಗಳು, ಸರ್ಕಾರೇತರ ಹಾಗೂ ಇತರ ಸಂಸ್ಥೆಗಳೊಂದಿಗೆ ಸಹಭಾಗಿತ್ವ ಪಡೆದು ಜನರಿಗೆ ತಮ್ಮ ಹಕ್ಕುಗಳ ಅರಿವನ್ನು ಮೂಡಿಸಿ ಸಾಮಾಜಿಕ ವಿಷಯಗಳಿಗೆ ಮಹತ್ವ ನೀಡುತ್ತದೆ.

**ಮಾನವ ಹಕ್ಕುಗಳ ಆಯೋಗಗಳು ಭಾಗಿಯಾಗುವ ಕೆಲವು ಯೋಜನೆಗಳು**

ರಾಷ್ಟ್ರೀಯ ಆಯೋಗ ಮತ್ತು ಬ್ರಿಟಿಷ್ ಕೌನ್ಸಿಲ್ ಇವೆರಡೂ ಪೋಲೀಸ್ ಅಧಿಕಾರಿಗಳಲ್ಲಿ ಮಾನವ ಹಕ್ಕುಗಳ ತನಿಖೆ ಮತ್ತು ಸಂದರ್ಶನದ ಕುಶಲತೆ ಹಾಗೂ ಕಾರಾಗೃಹ ಅಧಿಕಾರಿಗಳಲ್ಲಿ ಮಾನವ ಹಕ್ಕುಗಳ ಬಂಧನಗಳನ್ನು ನಿಭಾಯಿಸುವ ಕುಶಲತೆಯ ಯೋಜನೆಯೊಂದರಲ್ಲಿ ಸಹಭಾಗಿಗಳಾದವು. ಪಶ್ಚಿಮ ಬಂಗಾಳ, ತಮಿಳು ನಾಡು, ಪಂಜಾಬ್, ಮಧ್ಯ ಪ್ರದೇಶ ಹಾಗೂ ಕೇರಳದ ಮಾನವ ಹಕ್ಕುಗಳ ಆಯೋಗಗಳು ಈ ಯೋಜನೆಯಲ್ಲಿ ಭಾಗಿಗಳಾಗಿದ್ದವು.

ರಾಷ್ಟ್ರೀಯ ಆಯೋಗ, ಕೆನಡಾದ ಮಾನವ ಹಕ್ಕುಗಳ ಆಯೋಗ ಹಾಗೂ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಇವುಗಳೊಡಗೂಡಿ ಅಂಗವಿಕಲರ ಹಕ್ಕುಗಳ ಹೋರಾಟಗಾರರಿಗೆ, ತಜ್ಞರು ಹಾಗೂ ನ್ಯಾಯವಾದಿಗಳ ಉಪಯೋಗಕ್ಕಾಗಿ ಅಂಗವಿಕಲರ ಹಕ್ಕುಗಳ ಬಗ್ಗೆ ಕೈಪಿಡಿಗಳನ್ನು ಅಭಿವೃದ್ಧಿಪಡಿಸುತ್ತಿವೆ. ಈ ಕೈಪಿಡಿಗಳಲ್ಲಿ ಅಂಗವಿಕಲರ ಹಕ್ಕುಗಳ ಸಂರಕ್ಷಣೆ; ಈ ಹಕ್ಕುಗಳನ್ನು ಎತ್ತಿಹಿಡಿಯಲು ಇರುವ ವ್ಯವಸ್ಥೆ ಹಾಗೂ



ಅಂತರರಾಷ್ಟ್ರೀಯ ಮಾಪನಗಳು ಹಾಗೂ ಉತ್ತಮ ಆಚರಣೆಗಳ ಬಗ್ಗೆ ಕಾನೂನಿನಲ್ಲಿರುವ ಅಂಶಗಳನ್ನು ಅಳವಡಿಸಲಾಗಿದೆ.

ಬ್ರಿಟಿಷ್ ಕೌನ್ಸಿಲ್ ಮತ್ತು ಪಂಜಾಬ್ ಆಯೋಗದಿಂದ ಮಕ್ಕಳ ಹಕ್ಕುಗಳ ಮತ್ತು ಮಕ್ಕಳ ರಕ್ಷಣೆಯ ಬಗ್ಗೆ ಯೋಜನೆಯೊಂದನ್ನು ಕೈಗೊಳ್ಳಲಾಯಿತು. ಈ ಯೋಜನೆಯಲ್ಲಿ ಹಲವಾರು ಸರ್ಕಾರೇತರ ಸಂಸ್ಥೆಗಳು ಭಾಗಿಯಾಗುವಂತೆ ಮಾಡಿದ್ದು ಅದರ ಮುಖ್ಯ ಗುರಿ ರಾಜ್ಯದ 12

ಜಿಲ್ಲೆಗಳಲ್ಲಿ 72 ಸಾರ್ವಜನಿಕ ಶಿಕ್ಷಣ ಕಾರ್ಯಕ್ರಮಗಳ ಮೂಲಕ ಮಕ್ಕಳಲ್ಲಿ ಹಕ್ಕುಗಳ ಜಾಗೃತಿಯನ್ನು ಹೆಚ್ಚಿಸುವುದಾಗಿತ್ತು.

---

ಚತ್ತೀಸಘಡದ ಆಯೋಗ ಹಾಗೂ ಕಾಮನ್ ವೆಲ್ತ್ ಮಾನವ ಹಕ್ಕುಗಳ ಇನಿಷಿಯೇಟಿವ್ (Commonwealth Human Rights Initiative) ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ಮಲ್ಟಿಪಲ್ ಆಕ್ಷನ್ ರಿಸರ್ಚ್ ಗ್ರೂಪ್ (Multiple Action Research Group) ಇವುಗಳು ಒಡಗೂಡಿ ಪೊಲೀಸ್ ಠಾಣೆಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಮಾನವ ಹಕ್ಕುಗಳ ತರಬೇತಿ ಹಾಗೂ ಸೂಕ್ಷ್ಮಗೊಳಿಸುವ ಕಾರ್ಯಕ್ರಮಗಳನ್ನು ಕೈಗೊಂಡಿವೆ.



---

## 6. ಮಾನವ ಹಕ್ಕುಗಳ ಆಯೋಗಗಳಿಂದ ನೀಡಲಾಗುವ ತಕ್ಷಣ ಪರಿಹಾರಗಳು

---

ಈ ಭಾಗದಲ್ಲಿ ಕೆಳಕಂಡವುಗಳನ್ನು ಚರ್ಚಿಸಲಾಗುವುದು:

- ಪರಿಹಾರವನ್ನು ಏಕೆ ನೀಡಲಾಗುತ್ತದೆ

- ಯಾವ ರೀತಿಯ ಪರಿಹಾರ ನೀಡಲಾಗುತ್ತದೆ
- ಕೆಲವು ಉದಾಹರಣೆಗಳು

**ತಕ್ಷಣದ ಪರಿಹಾರ ಎಂದರೇನು?**

---

ತಕ್ಷಣದ ಪರಿಹಾರವು ಒಂದು ವಿಶೇಷ ರೀತಿಯ ಪರಿಹಾರವಾಗಿದ್ದು ಅವುಗಳನ್ನು ತೊಂದರೆಗೊಳಗಾದವರಿಗೆ ಅಥವಾ ಅವರ ಕುಟುಂಬವರ್ಗದವರಿಗೆ ನೀಡುವಂತೆ ಮಾನವ ಹಕ್ಕುಗಳ ಆಯೋಗಗಳು ಶಿಫಾರಸ್ಸು ಮಾಡುವುವು. ಅವುಗಳನ್ನು ಹಣವನ್ನು ಲಭ್ಯವಾಗುವಂತೆ ಮಾಡಿ ತಡವಿಲ್ಲದೆ ಪುನರ್ವಸತಿ ಕಾರ್ಯ ಕೈಗೊಳ್ಳುವ ಸಲುವಾಗಿ ನೀಡಲಾಗುವುದು. **ತಪ್ಪಿತಸ್ಥರ ವಿರುದ್ಧ ನ್ಯಾಯಾಲಯದಲ್ಲಿ ಸಿವಿಲ್ ಮೊಕದ್ದಮೆಯನ್ನು ಹೂಡಿ ಇನ್ನೂ ಹೆಚ್ಚಿನ ಪರಿಹಾರವನ್ನು ಪಡೆಯುವ ಹಕ್ಕಿಗೆ ಯಾವುದೇ ರೀತಿಯ ಧಕ್ಕೆಯುಂಟಾಗುವುದಿಲ್ಲ.**

ಆದಕಾರಣ ಮಾನವ ಹಕ್ಕುಗಳ ಆಯೋಗಗಳು ಅವುಗಳನ್ನು **'ತಾತ್ಕಾಲಿಕ ಪರಿಹಾರ'** ಎಂದು ಕರೆಯುತ್ತವೆ.

---

ಬಿಹಾರದಲ್ಲಿ ಬಿರುಗಾಳಿಯ ನಂತರ ವಿದ್ಯುಚ್ಛಕ್ತಿ ಪ್ರಸರಣದ ಲೈನ್ ಸಡಿಲವಾದ ಕಾರಣ ವ್ಯಕ್ತಿಯೊಬ್ಬನು ಜೀವಂತ ಲೈನ್ ಒಂದನ್ನು ಸಂಪರ್ಕಿಸಿದ ಪರಿಣಾಮವಾಗಿ ವಿದ್ಯುನ್ಮರಣವಾಯಿತು. ಆತನ ಪತ್ನಿಯು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸಿ ಆಕೆಯ ಪತಿಯ



ಮರಣದಿಂದಾಗಿ ತೀವ್ರವಾದ ಆರ್ಥಿಕ ಮುಗ್ಗಟ್ಟನ್ನು ಅನುಭವಿಸುತ್ತಿರುವುದಾಗಿ ತಿಳಿಸಿದರು. ರಾಜ್ಯ ವಿದ್ಯುಚ್ಛಕ್ತಿ ಮಂಡಳಿಯು ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ತಕ್ಷಣ ವೈರ್ ಅನ್ನು ತೆಗೆಯುವುದಾಗಲಿ ಅಥವಾ ವಿದ್ಯುಚ್ಛಕ್ತಿಯ ಸರಬರಾಜನ್ನು ನಿಲ್ಲಿಸುವಲ್ಲಿ ಉದಾಸೀನತೆಯನ್ನು ತೋರಿರುವುದಾಗಿ ಆಯೋಗಕ್ಕೆ ಕಂಡುಬಂದಿತು. ಮಂಡಳಿಯು ನಿರ್ಲಕ್ಷ್ಯತನ ವಹಿಸಿದೆ ಎಂಬ

ಅಪರಾಧದ ಮೇಲೆ ಆಯೋಗವು ಮೃತರ ಕುಟುಂಬದವರಿಗೆ ತಕ್ಷಣ 2 ಲಕ್ಷ ರೂಪಾಯಿಗಳ ಪರಿಹಾರ ನೀಡುವಂತೆ ಆದೇಶಿಸಿತು. ಆಯೋಗವು 2 ಲಕ್ಷ ರೂಪಾಯಿಗಳನ್ನು ಪರಿಹಾರ ರೂಪದಲ್ಲಿ ನೀಡಬೇಕೆಂದು ಆದೇಶ ಮಾಡುವಾಗ, ಈ ಪರಿಹಾರ ಹಣದ ನೀಡಿಕೆಯು ಇನ್ನೂ ಹೆಚ್ಚಿನ ಪರಿಹಾರವನ್ನು ನ್ಯಾಯಾಲಯದಲ್ಲಿ ಪಡೆದುಕೊಳ್ಳುವ ಮೃತರ ಕುಟುಂಬದವರ ಹಕ್ಕಿನ ಮೇಲೆ ಯಾವುದೇ ಪರಿಣಾಮವನ್ನುಂಟು ಮಾಡುವುದಿಲ್ಲವೆಂದು ತಿಳಿಸಿತು.

---

**ತಕ್ಷಣದ ಪರಿಹಾರವನ್ನು ಎಂಥಹ ಪ್ರಕರಣಗಳಲ್ಲಿ ಪಡೆಯಬಹುದಾಗಿದೆ?**

ಇದರಲ್ಲಿ ಯಾವುದೇ ನಿರ್ದಿಷ್ಟ ನೀತಿ ನಿಯಮಗಳಿಲ್ಲದಿದ್ದರೂ ಬಂಧನದಲ್ಲಿರುವಾಗ ಉಂಟಾಗುವ ಸಾವು; ಚಿತ್ರಹಿಂಸೆ; ಅತ್ಯಾಚಾರ; ಅಕ್ರಮ ಬಂಧನ; ಅಪಹರಣ; ಖಾಸಗಿ ಆಸ್ತಿಗಳ ನಾಶ; ವೈಯುಕ್ತಿಯ ಘನತೆಗೆ ಅಪಮಾನ; ಪೊಲೀಸಿನವರಿಂದ, ಭದ್ರತಾ ಪಡೆಗಳು ಅಥವಾ ಸರ್ಕಾರಿ ಪ್ರತಿನಿಧಿಗಳಿಂದ ನಿರ್ಲಕ್ಷ್ಯತನ ಇವುಗಳು ತಕ್ಷಣದ ಪರಿಹಾರ ನೀಡಿಕೆಗೆ ಅರ್ಹತೆಯನ್ನು ಗಳಿಸುತ್ತವೆ.

---



ಉತ್ತರ ಪ್ರದೇಶದಲ್ಲಿ ಪೆಟ್ರೋಲ್ ಸ್ಟೇಷನ್‌ಅನ್ನು ಲೂಟಿ ಮಾಡಲಿದ್ದರು ಎಂಬ ಆಧಾರದ ಮೇಲೆ ನಾಲ್ಕು ಜನ 'ಅಪರಾಧಿ'ಗಳನ್ನು ಪೊಲೀಸರು ಕೊಂದಿದ್ದೇವೆಂದು ತಿಳಿಸಿದರು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಪೊಲೀಸರ ಹೇಳಿಕೆಯು ಸುಳ್ಳೆಂದೂ, ನಾಲ್ಕು ಜನ ಅಮಾಯಕರನ್ನು ಸಮೀಪದ ಉಪಹಾರಗೃಹವೊಂದರಿಂದ ಕರೆತಂದು ಗುಂಡಿಕ್ಕಿ ಕೊಂದರೆಂದು

ಕಂಡುಬಂದಿತು. ಬಲಿಯಾದವರ ಕುಟುಂಬದವರಿಗೆ ತಲಾ 4 ಲಕ್ಷ ರೂಪಾಯಿಗಳನ್ನು ನೀಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಆಯೋಗವು ಆದೇಶ ನೀಡಿತು. ಅಲ್ಲದೆ, ಈ ಘಟನೆಯ ಬಗ್ಗೆ ತಪ್ಪಿತಸ್ಥ ಪೊಲೀಸರನ್ನು ನ್ಯಾಯಾಲಯದಲ್ಲಿ ದಂಡಿಸುವ ದೃಷ್ಟಿಯಿಂದ ವಿಚಾರಣೆಯನ್ನು ಶೀಘ್ರವಾಗಿ ನಡೆಸುವಂತೆ ಸರ್ಕಾರಕ್ಕೆ ಸೂಚನೆ ನೀಡಿತು.

**ಮಾನವ ಹಕ್ಕುಗಳ ಆಯೋಗಗಳು ಏಕೆ ತಕ್ಷಣದ ಪರಿಹಾರವನ್ನು ನೀಡುವುವು?**

ರಾಜ್ಯವು ಒಂದು ತಪ್ಪನ್ನು ಮಾಡಿದೆ ಎಂಬುದನ್ನು ತೋರಿಸುವ ಸಲುವಾಗಿ ತಕ್ಷಣದ ಪರಿಹಾರವನ್ನು ನೀಡಲಾಗುವುದು. ರಾಜ್ಯವು ತನ್ನ ನಾಗರೀಕರ ಜೀವರಕ್ಷಣೆ ಮಾಡುವುದರಲ್ಲಿ ವಿಫಲವಾಗಿದೆ ಎಂಬುದಕ್ಕೆ ಅದು ಸಾಕ್ಷಿಯಾಗಿದೆ. ನೊಂದವರು ಮತ್ತು ಅವರ ಕುಟುಂಬದವರು ಅನುಭವಿಸಿದ ನೋವು ಮತ್ತು ಯಾತನೆ ಹಾಗೂ ಉಂಟಾದ ನಷ್ಟವನ್ನು ಭರಿಸುವ ಸಲುವಾಗಿ ಆ ರೀತಿಯ ಆದೇಶ ಮಾಡಲಾಗುತ್ತದೆ.

ಮಾನವನ ಜೀವವನ್ನು ದುಡ್ಡಿನಿಂದ ಅಳೆಯಲು ಸಾಧ್ಯವಿಲ್ಲ. ತಮಗೆ ಪ್ರೀತಿಪಾತ್ರರಾದವರನ್ನು ಕಳೆದುಕೊಳ್ಳುವುದರಿಂದ ಆಗುವ ದು:ಖವನ್ನು ಅಳೆಯಲು ಸಾಧ್ಯವಾಗದಿರುವುದಿರಲಿ, ಯಾವುದೇ ರೀತಿಯ ತಕ್ಷಣದ ಪರಿಹಾರವು ಒಬ್ಬ ದುಡಿಯುವ ವ್ಯಕ್ತಿಯ ಅವಲಂಬಿತರಿಗೆ ಆಗುವ ಆರ್ಥಿಕ ನಷ್ಟವನ್ನು ಭರಿಸಲು ಸಾಧ್ಯವಾಗುವುದಿಲ್ಲ.



ಯಾರು ಚಿತ್ರಹಿಂಸೆ ಅಥವಾ ಹೊಡೆತದಿಂದ ಅಥವಾ ಅವಮಾನದಿಂದ ಅಥವಾ ಕೀಳುದರ್ಜೆಯ ನಡವಳಿಕೆಯಿಂದ ಆಘಾತವನ್ನು ಅನುಭವಿಸುವರೋ ಅವರು ಜೀವನಪರ್ಯಂತ ದೈಹಿಕವಾಗಿ ಹಾಗೂ ಮಾನಸಿಕವಾಗಿ ಅದರ ಗುರುತನ್ನು ತೆಗೆದುಕೊಂಡುಹೋಗುವರು. ಅವರ

ನೋವು ಅಥವಾ ದು:ಖವನ್ನು ಹಣದಿಂದ ಭರಿಸಲು ಸಾಧ್ಯವಾಗದಿದ್ದರೂ ತಕ್ಷಣದ ಪರಿಹಾರದ ಘೋಷಣೆಯಿಂದಾಗಿ ಅವರಿಗೆ ನ್ಯಾಯ ದೊರಕಿಸಿಕೊಟ್ಟ ಹಾಗೂ ನೆಮ್ಮದಿಯನ್ನು ತರುತ್ತದೆ.

**ತಕ್ಷಣದ ಪರಿಹಾರದ ಶಿಫಾರಸ್ಸು ಮಾಡುವಾಗ ಮಾನವ ಹಕ್ಕುಗಳ ಆಯೋಗಗಳು ಏನನ್ನು ನೋಡುತ್ತವೆ?**

ಆಯೋಗಗಳು ತಕ್ಷಣದ ಪರಿಹಾರವನ್ನು ಶಿಫಾರಸ್ಸು ಮಾಡುವಾಗ ಲೆಕ್ಕಕ್ಕೆ ತೆಗೆದುಕೊಳ್ಳುವ ಕೆಲವು ಸಂಗತಿಗಳೆಂದರೆ:

- ನೊಂದವರಿಗೆ ಆಗಿರುವ ನಷ್ಟದ ಪ್ರಮಾಣ
- ವೈದ್ಯಕೀಯ ಚಿಕಿತ್ಸೆಗಾಗಿ ವೆಚ್ಚಮಾಡಿದ ಹಣ
- ಉಂಟಾದ ಘಾಯಗಳಿಂದಾಗಿ ದುಡಿಯಲು ಅಸಮರ್ಥರಾದ ಕಾರಣ ಆದಾಯದಲ್ಲಿ ನಷ್ಟ
- ನೊಂದವರ ದುಡಿಯುವ ಸಾಮರ್ಥ್ಯದ ವೈಫಲ್ಯದಿಂದ ನೇರವಾಗಿ ಪರಿಣಾಮವಾದ ಅವಲಂಬಿತರ ಸಂಖ್ಯೆ
- ನೊಂದವರು ಮತ್ತು/ಅಥವಾ ಅವರ ಕುಟುಂಬವರ್ಗದವರಿಗಾದ ಅವಮಾನ ಹಾಗೂ ಅನುಭವಿಸಿದ ಮಾನಸಿಕ ಯಾತನೆ



ಪಂಜಾಬಿನಲ್ಲಿ, ಸೇನಾಧಿಕಾರಿಯೊಬ್ಬರನ್ನು ರಸ್ತೆ ಬದಿಯ ದಾಬಾದಲ್ಲಿ ಪೋಲೀಸರು ಕ್ರೂರವಾಗಿ ಥಳಿಸಿ ಅವರನ್ನು ಅಕ್ರಮವಾಗಿ ಬಂಧಿಸಿ ನಂತರ ಅವರ ಗಂಟಲಿಗೆ ಮದ್ಯವನ್ನು ಸುರಿದು ಆತನು

ಕುಡಿದು ಗಲಾಟೆ ಮಾಡಿದ್ದಾನೆನ್ನುವಂತೆ ತೋರಿಸಿದರು. ಪಂಜಾಬಿನ ಮಾನವ ಹಕ್ಕುಗಳ ಆಯೋಗವು ಆತನ ಪತ್ನಿ, ಅವರ ನಾದಿನಿ ಮತ್ತು ಮಗನ ಮುಂದೆ ಥಳಿಸಿದುದಕ್ಕಾಗಿ ಅವರು ಅನುಭವಿಸಿದ ಯಾತನೆಯನ್ನು ಹಾಗೂ ಅವರನ್ನು ಕೆಳದರ್ಜೆಯ ವೈದ್ಯಕೀಯ ಸೇವೆಗೆ ಇಳಿಸಿದುದನ್ನು ಗಮನದಲ್ಲಿಟ್ಟುಕೊಂಡು, 1 ಲಕ್ಷ ರೂಪಾಯಿಗಳ ತಕ್ಷಣದ ಪರಿಹಾರವನ್ನು ನೀಡಬೇಕೆಂದು ನಿರ್ದೇಶಿಸಿತು.

---

**ತಕ್ಷಣದ ಪರಿಹಾರವನ್ನು ಯಾರು ನೀಡುವರು?**

ರಾಜ್ಯವು ಒಬ್ಬ ವ್ಯಕ್ತಿಯ ಮಾನವ ಹಕ್ಕುಗಳನ್ನು ಸಂರಕ್ಷಿಸಲು ವಿಫಲವಾಗಿದೆ ಎಂಬುದು ಒಮ್ಮೆ ಸ್ಥಾಪಿತವಾದರೆ, ಆಯೋಗವು ನೊಂದವರಿಗೆ ಅಥವಾ ಅವನ/ಅವಳ ಕುಟುಂಬವರ್ಗದವರಿಗೆ ತಕ್ಷಣ ಪರಿಹಾರ ನೀಡುವಂತೆ ಶಿಫಾರಸ್ಸು ಮಾಡುವುದು. ಈ ತಕ್ಷಣದ ಪರಿಹಾರವನ್ನು ಉಲ್ಲಂಘನೆಯಾದ ಸ್ಥಳವು ಯಾವ ಸರ್ಕಾರದ ವ್ಯಾಪ್ತಿಗೆ ಬರುತ್ತದೋ ಅಥವಾ ಉಲ್ಲಂಘನೆಗೆ ಕಾರಣವಾದ ಇಲಾಖೆಯು ಯಾವ ಸರ್ಕಾರದ ನಿಯಂತ್ರಣದಲ್ಲಿ ಬರುತ್ತದೋ ಅದು ನೀಡಬೇಕೆಂದು ಶಿಫಾರಸ್ಸು ಮಾಡಲಾಗುವುದು. ಕೆಲವೊಮ್ಮೆ ತಕ್ಷಣದ ಪರಿಹಾರವನ್ನು ನೀಡಿದ ತರುವಾಯ ಸಂಬಂಧಪಟ್ಟ ಸರ್ಕಾರವು ತಪ್ಪಿತಸ್ಥ ಅಧಿಕಾರಿಗಳಿಂದ ಹಣ ವಸೂಲಿ ಮಾಡುತ್ತದೆ. ಕೆಲವೊಮ್ಮೆ ನಿರ್ದಿಷ್ಠ ಆದೇಶ ಮಾಡಲಾಗುತ್ತದೆ.

ಮಣಿಪುರದಲ್ಲಿ ಅಸ್ಸಾಂ ರೈಫಲ್‌ನ ಬೆಟಾಲಿಯನ್ ಕೇಂದ್ರಸ್ಥಾನಕ್ಕೆ ಪ್ರಶ್ನೆ ಮಾಡುವ ಸಲುವಾಗಿ ಕರೆದುಕೊಂಡು ಹೋದ ನಂತರ ಆತನು ನಾಪತ್ತೆಯಾದನು. ಆತನ ಜೀವದ ಬಗ್ಗೆ ಹೆದರಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಆತನ ಪತ್ನಿಯು ದೂರು ನೀಡಿದ್ದರಿಂದ ಆಯೋಗವು ಅಸ್ಸಾಂ ರೈಫಲ್ಸ್ ನಿಂದ ವರದಿಯನ್ನು ಕೇಳಿತು. ಅಸ್ಸಾಂ ರೈಫಲ್ಸ್‌ರವರು ಆತನನ್ನು ಬಿಡುಗಡೆ ಮಾಡಿರುವುದಾಗಿ ತಿಳಿಸಿದರು. ಆದರೆ ಅದರಿಂದ ಆಯೋಗಕ್ಕೆ ತೃಪ್ತಿಯಾಗಲಿಲ್ಲ. ಎಲ್ಲಾ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಪರಿಶೀಲಿಸಲಾಗಿ, ನೊಂದವರ ಪರವಾಗಿ ಆತನನ್ನು ಬಂಧನಕ್ಕೆ ಒಳಪಡಿಸಿರುವುದನ್ನು ನಿರೂಪಿಸಲಾಗಿದ್ದರೂ ಅಸ್ಸಾಂ ರೈಫಲ್ಸ್‌ನವರು ಆತನನ್ನು ಬಿಡುಗಡೆ ಮಾಡುವಾಗ ಆತ ಜೀವಂತವಾಗಿದ್ದ ಎಂಬುದನ್ನು ನಿರೂಪಿಸಲು ವಿಫಲವಾಯಿತೆಂದು ಆಯೋಗವು ತೀರ್ಮಾನಕ್ಕೆ ಬಂದಿತು. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ನೊಂದವರ ಕುಟುಂಬದವರಿಗೆ 3 ಲಕ್ಷ ರೂಪಾಯಿಗಳನ್ನು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತು. ಮಣಿಪುರ ರಾಜ್ಯದಲ್ಲಿ ಅಪರಾಧ ನಡೆದಿದ್ದರೂ, ಅಸ್ಸಾಂ ರೈಫಲ್ಸ್ ಕೇಂದ್ರ ಸರ್ಕಾರದ ನೇರ ನಿಯಂತ್ರಣದಲ್ಲಿ ಬರುವುದರಿಂದ ಆಯೋಗವು ಕೇಂದ್ರ ಸರ್ಕಾರವನ್ನು ತಕ್ಷಣದ ಪರಿಹಾರ ನೀಡಬೇಕೆಂದು ಕೇಳಿತು.

**ಮಾನವ ಹಕ್ಕುಗಳ ಆಯೋಗಗಳು ಶಿಫಾರಸ್ಸು ಮಾಡುವ ತಕ್ಷಣ ಪರಿಹಾರದ ಮೊತ್ತವೆಷ್ಟು?**

ತಕ್ಷಣದ ಪರಿಹಾರದ ಮೊತ್ತದಲ್ಲಿ ಪ್ರಕರಣದಿಂದ ಪ್ರಕರಣಕ್ಕೆ ಸಂದರ್ಭಕ್ಕೆ ತಕ್ಕಂತೆ ಒಂದು ಆಯೋಗಕ್ಕೂ ಮತ್ತೊಂದು ಆಯೋಗಕ್ಕೂ ವ್ಯತ್ಯಾಸವಿರುತ್ತದೆ. ಕೆಲವು ಪ್ರಕರಣಗಳನ್ನು ಉದಾಹರಣೆಯಾಗಿ ಕೆಳಕಂಡಂತೆ ನೀಡಲಾಗಿದೆ:

ಉತ್ತರ ಪ್ರದೇಶದಲ್ಲಿ, 15 ವರ್ಷದ ದಲಿತ ಹುಡುಗಿಯೊಬ್ಬಳನ್ನು ಇಬ್ಬರು ಅಗ್ನಿಶಾಮಕ ದಳದವರು ಹಾಗೂ ಒಬ್ಬ ಪೊಲೀಸ್ ಪೇದೆ ಸೇರಿ ಅವರ ಮನೆಗೆ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿದ ಪರಿಣಾಮವಾಗಿ ಆಕೆ ಆತ್ಮಹತ್ಯೆ ಮಾಡಿಕೊಂಡಳು. ಬಲಿಪಶುವಾದವಳು ವರದಿ ಮಾಡಲು ಹೋದಾಗ, ಪೊಲೀಸ್ ಠಾಣೆಯ ಉಪ ನಿರೀಕ್ಷಕ ಹಾಗೂ ಅಗ್ನಿಶಾಮಕ ಕೇಂದ್ರದ ಅಧಿಕಾರಿಗಳು ದೂರಿನ ಬಗ್ಗೆ ಕ್ರಮ ತೆಗೆದುಕೊಳ್ಳುವುದರ ಬದಲು ಅವಮಾನಕರವಾದ ಮಾತುಗಳನ್ನಾಡಿ ಆಕೆಯ ವಿರುದ್ಧ ಸುಳ್ಳು ದೂರನ್ನು ದಾಖಲಿಸುವುದಾಗಿ ಬೆದರಿಸಿದರು. ಆಕೆ ತನಗೆ ನ್ಯಾಯ ದೊರೆಯುವುದಿಲ್ಲವೆಂದು ನಿರಾಸೆಹೊಂದಿ ತನ್ನ ಪ್ರಾಣವನ್ನೇ ಕಳೆದುಕೊಂಡಳು. ಅವರ ವರ್ತನೆಯು ಆಕೆಯ ಸಾವಿಗೆ ನೇರ ಕಾರಣವಾದುದರಿಂದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಬಲಿಯಾದವಳ ಕುಟುಂದವರಿಗೆ ಎರಡು ಲಕ್ಷ ರೂಪಾಯಿಗಳ ಹಣವನ್ನು ನೀಡಬೇಕೆಂದು ನಿರ್ದೇಶಿಸಿತು.

ದೆಹಲಿಯಲ್ಲಿ, ತಂದೆಯೊಬ್ಬರು ತನ್ನ ಮಗನ ಸಾವಿನ ಬಗ್ಗೆ ಸ್ವತಂತ್ರ್ಯವಾಗಿ ತನಿಖೆ ನಡೆಸಬೇಕೆಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಮನವಿ ಮಾಡಿದರು. ಪೊಲೀಸರು ಆತನು ಹೇಗೆ ಸತ್ತ ಎಂಬುದನ್ನು ತಿಳಿಸಲು ನಿರಾಕರಿಸಿದರು ಹಾಗೂ ಈ ವಿಷಯದಲ್ಲಿ ಮುಂದುವರೆಯಬಾರದೆಂದು ಬೆದರಿಕೆ ಹಾಕಿದರು. ಆಯೋಗವು ಪ್ರಕರಣದಲ್ಲಿ ತನಿಖೆಗೆ ಆದೇಶ ಮಾಡಿದಾಗ, ಮೃತಪಟ್ಟವರು ಒಬ್ಬ ಸೈಕಲ್ ರಿಕ್ಷಾದವನೊಡನೆ ಜಗಳವುಂಟಾಗಿತ್ತೆಂಬ ಅಂಶ ಹೊರಗೆ ಬಂತು. ಪೊಲೀಸಿನವರು ಮಧ್ಯಪ್ರವೇಶ ಮಾಡಿ ಆತನನ್ನು ಯಾವ ರೀತಿ ಹೊಡೆದರೆಂದರೆ ಆತನು ಸ್ಥಳದಲ್ಲೇ ಕುಸಿದುಬಿದ್ದು ಆತನು ಆಸ್ಪತ್ರೆಗೆ ಕರೆತಂದಾಗಲೇ ಮೃತಪಟ್ಟಿದ್ದನು. ಪೊಲೀಸರು ನಿರ್ಲಕ್ಷ್ಯತನ ತೋರಿದ್ದಾರೆಂಬುದನ್ನು ಮನಗಂಡ ಆಯೋಗವು

ಮೃತರ ಕುಟುಂಬದವರಿಗೆ ಮೂರು ಲಕ್ಷ ರೂಪಾಯಿಗಳ ತಕ್ಷಣದ ಪರಿಹಾರವನ್ನು ನೀಡಬೇಕೆಂದು ಆದೇಶಿಸಿತು.

ಪಶ್ಚಿಮ ಬಂಗಾಳದಲ್ಲಿ, ವಿಚಾರಣಾಧೀನ ಬಂದಿಯೊಬ್ಬಳ ಮೇಲ್ಛಾವಣಿಯ ಒಂದು ಭಾಗವು ಆಕೆಯ ಮೇಲೆ ಬಿದ್ದು ಆಕೆಯ ಕೈ ಜೆಜ್ಜಿ ಹೋದ ಕಾರಣ ಅದನ್ನು ಕತ್ತರಿಸಬೇಕಾಯಿತು. ಕಳಪೆ ದರ್ಜೆಯ ಉಸ್ತುವಾರಿ ಹಾಗೂ ದುರಸ್ತಿ ಕೈಗೊಳ್ಳದಿರುವುದೇ ಮೇಲ್ಛಾವಣಿ ಕುಸಿತಕ್ಕೆ ಕಾರಣವೆಂದು ಪಶ್ಚಿಮ ಬಂಗಾಳದ ಮಾನವ ಹಕ್ಕುಗಳ ಆಯೋಗಕ್ಕೆ ಕಂಡುಬಂದಿತು. ಜೈಲು ಅಧಿಕಾರಿಗಳು ಪದೇ ಪದೇ ನೆನಪು ಮಾಡಿ ಅಗತ್ಯ ದುರಸ್ತಿ ಕೆಲಸಗಳನ್ನು ಕೈಗೊಳ್ಳುವಂತೆ ಮನವಿ ಮಾಡಿದ್ದರೂ, ಅದನ್ನು ಕೈಗೊಳ್ಳದಿದ್ದುದರಿಂದ, ಈ ರೀತಿಯ ನಿರ್ಲಕ್ಷ್ಯತನಕ್ಕೆ ಲೋಕೋಪಯೋಗಿ ಇಲಾಖೆಯನ್ನು ಜವಾಬ್ದಾರಿಯನ್ನಾಗಿ ಮಾಡಿ ನೊಂದವರಿಗೆ ತಕ್ಷಣದ ಪರಿಹಾರವಾಗಿ 25,000 ರೂಪಾಯಿಗಳನ್ನು ನೀಡಬೇಕೆಂದು ಆದೇಶಿಸಿತು.

ಜಮ್ಮು ಮತ್ತು ಕಾಶ್ಮೀರದಲ್ಲಿ, ಶೋಧನಾ ಕಾರ್ಯ ಕೈಗೊಳ್ಳುವ ಸಂದರ್ಭದಲ್ಲಿ ಆಧುನಿಕ ಸ್ಫೋಟಕ ಯಂತ್ರದಿಂದಾಗಿ ಒಬ್ಬ ವ್ಯಕ್ತಿಯು ಶಾಶ್ವತವಾಗಿ ಅಂಗವಿಕಲನಾದನು. ಆತ ಒಂದು ಮದುವೆ ಮುಗಿಸಿಕೊಂಡು ಬರುವಾಗ ಸೇನಾ ಪಡೆಯ ಗಸ್ತು ತಿರುಗುವವರು ಆತನ ಕಾರನ್ನು ಕೆಲವು ಅನುಮಾನಾಸ್ಪದ ಉಗ್ರರು ಅಡಗಿಕೊಂಡಿದ್ದರೆನ್ನಲಾದ ಮನೆಯೊಂದಕ್ಕೆ ಸೇನೆಯವರನ್ನು ಸಾಗಿಸುವ ಸಲುವಾಗಿ ತಮ್ಮ ವಶಕ್ಕೆ ನೀಡುವಂತೆ ಬಲಾತ್ಕರಿಸಿದರು. ಆತನನ್ನೂ ಸಹ ಆ ಮನೆಯಲ್ಲಿ ಶೋಧನಾ ಕಾರ್ಯ ಕೈಗೊಳ್ಳುವಾಗ ತಮ್ಮೊಡನೆ ಬರಬೇಕೆಂದು ಬಲಾತ್ಕರಿಸಿದರು. ಶೋಧನಾ ಸಮಯದಲ್ಲಿ ಬಾಂಬ್ ಒಂದು ಸ್ಫೋಟಿಸಿ ಆತನಿಗೆ ತೀವ್ರವಾದ ಗಾಯವಾಯಿತು.

ಜಮ್ಮು ಮತ್ತು ಕಾಶ್ಮೀರದ ಮಾನವ ಹಕ್ಕುಗಳ ಆಯೋಗವು ಆತನಿಗೆ ತಕ್ಷಣದ ಪರಿಹಾರವಾಗಿ 75,000 ರೂಪಾಯಿಗಳನ್ನು ನೀಡಬೇಕೆಂದು ಆದೇಶಿಸಿತು.

ಚತ್ತೀಸಘಡದಲ್ಲಿ ಆರೋಗ್ಯ ಕಾರ್ಯಕರ್ತರ ಸಂಘದವರ ಸಹಾಯದಿಂದ ಒಂದು ನೇತ್ರ ಶಿಬಿರವನ್ನು ಏರ್ಪಡಿಸಲಾಗಿತ್ತು. ಹಲವಾರು ಜನರು ತಮ್ಮ ಕಣ್ಣುಗಳ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ಒಂದು ಸರ್ಕಾರಿ ಆಸ್ಪತ್ರೆಗೆ ಧಾವಿಸಿದರು. ನಿರೀಕ್ಷೆಗೂ ಮೀರಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ನೇತ್ರ ಶಿಬಿರಕ್ಕೆ ಬಂದ ಕಾರಣ ಕೆಲವರನ್ನು ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸಲಾಯಿತು. ದುರಾದೃಷ್ಟವಶಾತ್, 13 ಜನರು ಖಾಸಗಿ ಆಸ್ಪತ್ರೆಯಲ್ಲಿ ಕಳಪೆ ದರ್ಜೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿದ ಕಾರಣ ತಮ್ಮ ಕಣ್ಣುಗಳನ್ನು ಕಳೆದುಕೊಳ್ಳಬೇಕಾಯಿತು. ಅವರನ್ನು ಸರ್ಕಾರಿ ಆಸ್ಪತ್ರೆಯಿಂದ ಕಳುಹಿಸಲಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯನ್ನು ಕೈಗೊಳ್ಳಲು ಸಾಮರ್ಥ್ಯವಿದೆಯೇ ಅಥವಾ ಇಲ್ಲವೇ ಎಂಬುದನ್ನು ಸರ್ಕಾರಿ ಆಸ್ಪತ್ರೆಯವರು ಖಾತರಿಪಡಿಸಿಕೊಳ್ಳುವುದರಲ್ಲಿ ವಿಫಲರಾದ ಕಾರಣ ತೊಂದರೆಗೊಳಗಾದ ಪ್ರತಿಯೊಬ್ಬರಿಗೂ 50,000 ರೂಪಾಯಿಗಳನ್ನು ನೀಡಬೇಕೆಂದು ಚತ್ತೀಸಘಡದ ಆಯೋಗವು ಆದೇಶಿಸಿತು.

**ಕರ್ನಾಟಕ ರಾಜ್ಯದಲ್ಲಿನ ಪ್ರಕರಣಗಳು:**

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕು ಗಂಡಗಟ್ಟೆ ಅಂಚೆ ಕೇಸುಮುಡಿ ಗ್ರಾಮದಲ್ಲಿ ಶ್ರೀ ವೆಂಕಟೇಶ್ ಎನ್ನುವವರನ್ನು ಅವರ ಪತ್ನಿ ಶ್ರೀಮತಿ ಮಧುರ ಮತ್ತು ಪುತ್ರ ಅನುದೀಪ ಇವರ ಕಣ್ಣುಮುಂದೆ ಬರ್ಬರವಾಗಿ ನಕ್ಸಲೀಯರು ಹತ್ಯೆ ಮಾಡಿದರು. ಈ ಪ್ರಕರಣದಲ್ಲಿ ಕೊಲೆಯಾದ ಶ್ರೀ ವೆಂಕಟೇಶ್ ಅವರ ಪತ್ನಿ ಶ್ರೀಮತಿ ಮಧುರ ಅವರು ಮಾನವ

ಹಕ್ಕುಗಳ ಆಯೋಗದ ಅಧ್ಯಕ್ಷರಿಗೆ ಮನವಿಯನ್ನು ಸಲ್ಲಿಸಿ ತಮಗೆ ಸರ್ಕಾರದ ಯಾವುದಾದರೂ ಹುದ್ದೆಯನ್ನು ನೀಡಬೇಕು ಎಂದು ಕೋರಿಕೆ ಸಲ್ಲಿಸಿದ್ದರು. ಅದರಂತೆ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರಿಗೆ ಮಾನವೀಯತೆ ದೃಷ್ಠಿಯಿಂದ ಆಕೆಗೆ ಉದ್ಯೋಗ ನೀಡಬೇಕೆಂದು ಸೂಚನೆ ನೀಡಲಾಯಿತು. ಅದರ ಮೇಲೆ ಎಂತಹ ಉದ್ಯೋಗ ನೀಡಬೇಕೆಂದು ಪರಿಶೀಲನೆ ಮಾಡುತ್ತಿರುವುದಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಪರವಾಗಿ ಮಧ್ಯಂತರ ವರದಿ ಆಯೋಗಕ್ಕೆ ಬಂದಿತು. ಅಷ್ಟರಲ್ಲಿಯೇ ಪತ್ರಿಕೆಗಳಲ್ಲಿ ಬಂದ ವರದಿಯಲ್ಲಿ ಶ್ರೀಮತಿ ಮಧುರ ಅವರೂ ಸಹ ದಿನಾಂಕ 5.3.2008ರಂದು ಅನಾರೋಗ್ಯದಿಂದ ನಿಧನರಾಗಿದ್ದಾರೆ ಎನ್ನುವುದನ್ನು ಗಮನಿಸಿದ ಆಯೋಗ ಸ್ಥಳೀಯ ಅಧಿಕಾರಿಗಳ ವರದಿಯನ್ನು ತರಿಸಿಕೊಂಡು ಅನಾಥವಾಗಿರುವ ಮಗುವಿನ ವಿದ್ಯಾಭ್ಯಾಸ ಮತ್ತು ಯೋಗಕ್ಷೇಮಕ್ಕಾಗಿ ಐದು ಲಕ್ಷ ರೂಪಾಯಿಗಳ ಪರಿಹಾರವನ್ನು ಮಂಜೂರು ಮಾಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಈ ರೀತಿ ಮಂಜೂರಾದ ಹಣವನ್ನು ಬ್ಯಾಂಕಿನಲ್ಲಿ ಠೇವಣಿಯಾಗಿ ಇಟ್ಟು ಅದರಿಂದ ಬರುವ ಬಡ್ಡಿಯ ಮೇಲೆ ಆತನ ವಿದ್ಯಾಭ್ಯಾಸಕ್ಕಾಗಿ ಸರ್ಕಾರ ವ್ಯವಸ್ಥೆ ಮಾಡಬೇಕೆಂದೂ ಸಹ ಸೂಚನೆ ನೀಡಲಾಗಿದೆ. ಚಿಕ್ಕಮಗಳೂರು ಜಿಲ್ಲಾಧಿಕಾರಿಗಳು ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳಿಗೆ ಜವಾಬ್ದಾರಿಯನ್ನು ವಹಿಸಿ ನಿರ್ದೇಶನ ನೀಡಬೇಕೆಂದು ಸಹ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಗಿದೆ.

## 7. ಸುಧಾರಣೆಯ ಆದ್ಯತಾ ಕ್ಷೇತ್ರಗಳು

ಈಗ ಮಾನವ ಹಕ್ಕುಗಳ ಆಯೋಗಗಳನ್ನು ಈಗ ಪ್ರಜಾಪ್ರಭುತ್ವದ ಕಾರ್ಯನೀತಿಯ ಒಂದು ಪ್ರಮುಖ ಅಂಗವೆಂದು ಪರಿಗಣಿಸಲಾಗುತ್ತಿದೆ. ಭಾರತವು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವನ್ನು 1993ರಲ್ಲಿ ಹೆಮ್ಮೆಯಿಂದ ಸ್ಥಾಪಿಸಿದ್ದು ಇತರ ರಾಜ್ಯ ಆಯೋಗಗಳು ಅದನ್ನು ಹಿಂಬಾಲಿಸಿವೆ. ಏನೇ ಆದರೂ, ಆಯೋಗಗಳು ರಾಜ್ಯ ಆಡಳಿತವನ್ನು ಅಲಂಕಾರಗೊಳಿಸುವುದಕ್ಕಿಂತ ಹೆಚ್ಚಿನ ಪಾತ್ರ ವಹಿಸಬೇಕಾಗಿವೆ. ದೇಶಾದ್ಯಂತ ಮಾನವ ಹಕ್ಕುಗಳ ಸಂಸ್ಕೃತಿಯನ್ನು ವೃದ್ಧಿಪಡಿಸಿ ಮನುಷ್ಯರ ಹಕ್ಕುಗಳನ್ನು ಸಂರಕ್ಷಿಸಲು ಅವುಗಳಿಗೆ ಸಾಕಷ್ಟು ಅಧಿಕಾರ ಮತ್ತು ಸ್ವಾತಂತ್ರ್ಯ ಬೇಕಾಗುತ್ತವೆ. ಕಳೆದಿರುವ ವರ್ಷಗಳಲ್ಲಿ ರಾಷ್ಟ್ರ ಮತ್ತು ರಾಜ್ಯ ಆಯೋಗಗಳು ತಮ್ಮ ದುರ್ಬಲತೆಗಳನ್ನು ಬಹಿರಂಗಪಡಿಸಿವೆ.

ಒಂದು ಸಮರ್ಥ ಆಯೋಗವು ತಾನು ಕಾರ್ಯಮಾಡಲು ಬಲಾಢ್ಯವಾದ ಚೌಕಟ್ಟಿನಿಂದ ಸ್ಥಾಪಿತವಾದ ಶಾಸನವನ್ನು ಅವಲಂಬಿಸಿದೆ. ದುರದೃಷ್ಟವಶಾತ್ 1993ರ ಮಾನವ ಹಕ್ಕುಗಳ ಸಂರಕ್ಷಣಾ ಕಾಯಿದೆಯು ಅಂತಹ ಬಲವಾದ ಅಡಿಪಾಯವನ್ನು ನೀಡಿಲ್ಲ. ಅದು ಪೂರ್ಣವಾಗಿ ಪ್ಯಾರೀಸ್ ನೀತಿಯಂತೆ ನಡೆದುಕೊಂಡಿಲ್ಲ – ರಾಜ್ಯಗಳು ಬಲಿಷ್ಠವಾದ, ಸಮರ್ಥವಾದ ಮಾನವ ಹಕ್ಕುಗಳ ಆಯೋಗಗಳನ್ನು ರಚಿಸಿ ಅವುಗಳಿಗೆ ಮಾರ್ಗದರ್ಶನವನ್ನು ನೀಡುವಂತಹ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದ ಮಾನದಂಡಗಳು. ಪ್ಯಾರೀಸ್ ನೀತಿಯು, ಆಯೋಗಗಳ ರಚನೆ ಹಾಗೂ ಕಾನೂನಿನ ಕ್ಷೇತ್ರ ಮತ್ತು ಕಾರ್ಯಗತಗೊಳಿಸುವ ಸಾಮರ್ಥ್ಯದ ವಿಷಯಗಳಿಗೆ ಕಾನೂನಿನ ಪ್ರಕಾರ ಎಷ್ಟು ಸಾಧ್ಯವೋ ಅಷ್ಟು ಹೆಚ್ಚಿನ ಮಾನ್ಯತೆಯನ್ನು ನೀಡಬೇಕೆಂದು ತಿಳಿಸುತ್ತದೆ. ಆಯೋಗಗಳ ಮೇಲೆ ಸರ್ಕಾರಗಳು ಆರ್ಥಿಕವಾಗಿ ಹಿಡಿತವನ್ನು

ಸಾಧಿಸಿ ಅವುಗಳ ಸ್ವಾತಂತ್ರ್ಯದ ಮೇಲೆ ಪರಿಣಾಮವನ್ನುಂಟುಮಾಡುವಂತೆ ಸರ್ವೇಸಾಮಾನ್ಯವಾಗಿ ಮಾಡುವ ನಿಯಂತ್ರಣವನ್ನು ಮಾಡದೆ ಅವುಗಳಿಗೆ ಸಾಕಷ್ಟು ಹಣಕಾಸನ್ನು ಒದಗಿಸಬೇಕು.

---

ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993ರಲ್ಲಿರುವ ದುರ್ಬಲತೆ, ಅಸಮರ್ಪಕ ಆಯವ್ಯಯದ ಹಂಚಿಕೆ, ಒಟ್ಟಾರೆ ತರಬೇತಿ ಹೊಂದಿದ ಸಿಬ್ಬಂದಿಯ ಕೊರತೆ, ಸರ್ಕಾರಿ ಇಲಾಖೆಗಳಿಂದ ವಿರೋಧ ಹಾಗೂ ಅಸಮರ್ಪಕ ತನಿಖಾ ಹಾಗೂ ಫಾರೆನ್ಸಿಕ್‌ನ ಸಾಮರ್ಥ್ಯ ಮುಂತಾದವುಗಳು ಮಾನವ ಹಕ್ಕುಗಳ ಆಯೋಗಗಳ ಕೆಲಸಗಳನ್ನು ಕುಂಠಿತಗೊಳಿಸುತ್ತವೆ.

---

**ಕಳಕಳಿಯಿರುವ ಕೆಲವು ಆದ್ಯತಾ ಕ್ಷೇತ್ರಗಳೆಂದರೆ:**

**ಆಯೋಗಗಳಿಗೆ ಹೆಚ್ಚಿನ ಅಧಿಕಾರ**

ಮಾನವ ಹಕ್ಕುಗಳ ಆಯೋಗಗಳು ಪ್ರತಿ ವರುಷ ಸಾವಿರಾರು ದೂರುಗಳನ್ನು ಸ್ವೀಕರಿಸಿದರೂ ಕೂಡ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಬಹುದಾದ ಅಧಿಕಾರವಿರುತ್ತದೆ. ಆಯೋಗಗಳು ಸರ್ಕಾರವನ್ನು ತನ್ನ ಶಿಫಾರಸ್ಸುಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಪಡಿಸುವಂತಿಲ್ಲ. ಕೇಂದ್ರ ಸಕಾರವಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ – ಕೆಲವೊಮ್ಮೆ ಆಯೋಗಗಳ ಶಿಫಾರಸ್ಸುಗಳನ್ನು ಪಾಲಿಸುತ್ತವೆಯಾದರೂ ಅವುಗಳಿಗೆ ನೀಡಲಾದ ಗಡುವಿನಂತೆ ಕ್ರಮ ಕೈಗೊಳ್ಳಲು ಉದಾಸೀನತೆಯನ್ನು ತೋರುತ್ತವೆ. ಕ್ರಮ ಕೈಗೊಳ್ಳಲು ತಡಮಾಡುವ ಹವ್ಯಾಸವಿರುವುದರಿಂದ ಮಾನವ ಹಕ್ಕುಗಳ ಆಯೋಗಗಳು

ಹೆಚ್ಚಿನ ಸಮಯ ಹಾಗೂ ಶಕ್ತಿಯನ್ನು ಜ್ಞಾಪನಗಳನ್ನು ಕಳುಹಿಸುವಲ್ಲಿ ಹಾಗೂ ಕೆಲವೊಮ್ಮೆ ಸರ್ಕಾರವು ಅದರ ಶಿಫಾರಸ್ಸುಗಳನ್ನು ವಿರೋಧಿಸಿದರೆ ಉಚ್ಛ ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ. ನೊಂದವರಿಗೆ ಹಾಗೂ ಅವರ ಕುಟುಂಬದವರಿಗೆ ಪರಿಹಾರವನ್ನು ಒದಗಿಸುವ ಭರವಸೆ ಕೊಡುವ ದೃಷ್ಠಿಯಿಂದ, ಶಿಫಾರಸ್ಸುಗಳು ಸರ್ಕಾರಗಳ ಮೇಲೆ ಕಡ್ಡಾಯವಾಗಿ ವಿಳಂಬ ಮಾಡುವ ಅಥವಾ ತಡೆ ಮಾಡುವ ಅಧಿಕಾರಿಗಳಿಗೆ ದಂಡ ಹಾಕುವಂತಾಗಬೇಕು.

ಮಾನವ ಹಕ್ಕುಗಳ ಆಯೋಗಗಳಿಗೆ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ಯಾರೇ ಮಾಡಿದ್ದರೂ ಅದನ್ನು ಸಂಬೋಧಿಸುವ ಅಧಿಕಾರವಿರುತ್ತದೆ. ಸೇನಾ ಪಡೆಗಳವರು ಏನಾದರೂ ಉಲ್ಲಂಘನೆ ಮಾಡಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಮಾನವ ಹಕ್ಕುಗಳ ಆಯೋಗಗಳಿಗೆ ಅಧಿಕಾರವಿರಬೇಕಾದುದು ಬಹಳ ಮುಖ್ಯ. ದಂಗೆಕೋರರಿರುವ ಪ್ರದೇಶಗಳಲ್ಲಿ ಅಥವಾ ಆಂತರಿಕ ಕಲಹಗಳಾಗುವ ಕಡೆಗಳಲ್ಲಿ ಸೇನಾ ಪಡೆಗಳನ್ನು ನಿಯೋಜಿಸಿದಾಗ ಉದ್ದೇಶಿಸಲಾರದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಉಲ್ಲಂಘನೆಗಳಾಗುತ್ತವೆ.

**ನೇಮಕಾತಿಗಳು**

ಅಧಿನಿಯಮದಲ್ಲಿ ಸದಸ್ಯರುಗಳನ್ನು ನೇಮಿಸುವ ಕ್ರಮವನ್ನು ಟೀಕೆ ಮಾಡಲಾಗಿದೆ. ನೇಮಕಾತಿಗಳನ್ನು ಮಾಡುವ ಸಮಿತಿಯು ಸಂಪೂರ್ಣವಾಗಿ ರಾಜಕೀಯ ವ್ಯಕ್ತಿಗಳಿಂದ ಕೂಡಿವೆ. ಬೇರೆಯವರ ಧ್ವನಿಗಳನ್ನು ಕೇಳಿಕೆಗೆ ಅವಕಾಶವೇ ಇಲ್ಲದಂತಾಗಿದೆ. ನೇಮಕಾತಿಗಳನ್ನು ಪರಿಗಣಿಸುವ ಪ್ರಕ್ರಿಯೆಯು ಹಿಂಬಾಗಿಲಿನಲ್ಲಿ ನಡೆಯುವುದರಿಂದ ಅದು ಪಾರದರ್ಶಕವಾಗಿರುವುದಿಲ್ಲ. ಸಾರ್ವಜನಿಕ ಚರ್ಚೆಯಾಗುವಂತಹ ವಿಚಾರಗಳಲ್ಲಿ

ಸಿದ್ಧಪಡಿಸಿರುವ ಪಟ್ಟಿಯಿರುವುದಿಲ್ಲ. ಶಾಸನದಲ್ಲಿರುವಂತಹ ಮಾಪನಗಳ ಪ್ರಕಾರ ಒಬ್ಬ ಅಭ್ಯರ್ಥಿಯ ಅರ್ಹತೆಯನ್ನು ಪರೀಕ್ಷೆ ಮಾಡುವುದರ ಬದಲು ಈ ಪ್ರಕ್ರಿಯೆಯು ರಾಜಕೀಯ ಪ್ರೇರಿತವಾಗುತ್ತದೆ. ಹೊಸದಾಗಿ ಸದಸ್ಯರುಗಳನ್ನು ನೇಮಕ ಮಾಡುವಾಗ ಹಾಲಿ ಇರುವ ಆಯೋಗದ ಸಲಹೆ ಪಡೆಯುವುದು ಕಡ್ಡಾಯವೇನೂ ಅಲ್ಲ. ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993ರಲ್ಲಿ ಮಾನವ ಹಕ್ಕುಗಳ ಆಯೋಗದ ಐದು ಜನ ಸದಸ್ಯರುಗಳಲ್ಲಿ ಮೂವರು ಸದಸ್ಯರುಗಳು ಈ ಹಿಂದೆ ನ್ಯಾಯಾಧೀಶರಾಗಿರಬೇಕು ಎಂಬುದಾಗಿ ತಿಳಿಸಲಾಗಿದ್ದರೂ ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಸಂವಿಧಾನಗಳಲ್ಲಿರುವ ಮೌಲ್ಯಗಳನ್ನು ಎತ್ತಿ ಹಿಡಿಯುವುದನ್ನು ನಿರೂಪಿಸುವಂತಹ ದಾಖಲೆಗಳಿರುವ ನ್ಯಾಯಾಧೀಶರುಗಳಾಗಿರಬೇಕು ಎಂದೇನೂ ತಿಳಿಸಿರುವುದಿಲ್ಲ. ಇನ್ನಿಬ್ಬರು ಸದಸ್ಯರುಗಳಿಗೆ "ಮಾನವ ಹಕ್ಕುಗಳ ವಿಷಯಗಳ ಬಗ್ಗೆ ಜ್ಞಾನ ಅಥವಾ ಪ್ರಾಯೋಗಿಕ ಅನುಭವ" ವಿರಬೇಕು ಎನ್ನುವ ಮಾಪನವಿದೆ. ಈ ಸಡಿಲ ಪದಗಳಿಂದಾಗಿ ಅವರು ಈ ಹಿಂದೆ ಕೆಲಸ ಮಾಡಿ ಅನುಭವ ಪಡೆದಿರುವುದರ ಆಧಾರದ ಮೇಲೆ, ಉದಾಹರಣೆಗೆ: ಒಬ್ಬ ಪೊಲೀಸಿನವರು ಅಥವಾ ಅಧಿಕಾರಶಾಹಿಯನ್ನು ಅವರಿಗೆ ಮಾನವ ಹಕ್ಕುಗಳ ಮೌಲ್ಯಗಳ ಬಗ್ಗೆ ನಂಬಿಕೆಯಿದೆಯೇ ಎನ್ನುವುದನ್ನು ಪರೀಕ್ಷಿಸದೆ ನೇಮಕಾತಿಗಳನ್ನು ಮಾಡಲು ಅವಕಾಶವಾಗುತ್ತದೆ.

ನೇಮಕಾತಿ ಪ್ರಕ್ರಿಯೆಯಲ್ಲಿ ಎದ್ದು ಕಾಣುವಂತಹ ಕೊರತೆಯೆಂದರೆ ಎಲ್ಲಾ ಸದಸ್ಯರುಗಳು ಮಾನವ ಹಕ್ಕುಗಳ ಸಂರಕ್ಷಣೆಗೆ ಬದ್ಧರಾಗಿರುವುದನ್ನು ಪ್ರದರ್ಶನ ಮಾಡಿ ತೋರಿಸುವಂತಹ ಯಾವುದೇ ನಿರ್ದಿಷ್ಟವಾದ ಅವಶ್ಯಕತೆಯಿರುವುದಿಲ್ಲ. ಇದು ವಿವಾದಕ್ಕೆ ಎಡೆಮಾಡಿಕೊಟ್ಟಿದ್ದು ಆಯುಕ್ತರುಗಳು ಉಪಯುಕ್ತವಾಗಿ ಕೆಲಸ ಮಾಡುವ ಸಾಮರ್ಥ್ಯದ ಬಗ್ಗೆ ಪ್ರಶ್ನೆಯನ್ನೆತ್ತಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದಲ್ಲಿ ಈವರೆಗೆ ಸರ್ಕಾರೇತರ ಕ್ಷೇತ್ರದಿಂದ ಯಾರನ್ನೂ ನೇಮಕ ಮಾಡದಿರುವುದು ಹಾಗೂ ಕೇವಲ ಇಬ್ಬರು ಮಹಿಳೆಯರನ್ನು ಮಾತ್ರ ನೇಮಕ ಮಾಡಿರುವುದು ವಿಷಾದನೀಯ. ಪ್ಯಾರೀಸ್ ನೀತಿಗಳಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರುಗಳ ನೇಮಕಾತಿ ಮಾಡುವಾಗ ಮಾನವ ಹಕ್ಕುಗಳ ಸಂರಕ್ಷಣ ಮತ್ತು ವೃದ್ಧಿಯಲ್ಲಿ ತೊಡಗಿಕೊಳ್ಳುವುದಲ್ಲದೆ ಇತರ ಸೇವೆಗಳಲ್ಲೂ ಇರುವಂತಹ ಸಾಮಾಜಿಕ ಶಕ್ತಿಗಳುಳ್ಳ ಪ್ರತಿನಿಧಿಗಳನ್ನು ನೇಮಿಸುವ ವ್ಯವಸ್ಥೆಯಿರಬೇಕೆಂದು ತಿಳಿಸಿವೆ. ಆದಕಾರಣ ಮಾನವ ಹಕ್ಕುಗಳ ಹಾಗೂ ತಾರತಮ್ಯಗಳ ವಿಷಯಗಳನ್ನು ಕೈಗೆತ್ತಿಕೊಳ್ಳುವಂತಹ ಸರ್ಕಾರೇತರ ಸಂಸ್ಥೆಗಳು, ಕಾರ್ಮಿಕ ಸಂಘಗಳು, ವೈದ್ಯರು, ಪತ್ರಕರ್ತರು ಹಾಗೂ ಪ್ರಖ್ಯಾತ ಸಾಮಾಜಿಕ ವಿಜ್ಞಾನಿಗಳು, ದಲಿತರು, ಮಹಿಳೆಯರು, ಅಲ್ಪಸಂಖ್ಯಾತರು, ಅಂಗವಿಕಲರು ಇವರೆಲ್ಲರ ಧ್ವನಿಗಳೂ ಮಾನವ ಹಕ್ಕುಗಳ ಆಯೋಗಗಳಲ್ಲಿ ಪ್ರತಿನಿಧಿಸಬೇಕು.

---

ಅಧ್ಯಕ್ಷರ ಹಾಗೂ ಪೂರ್ಣ ಪ್ರಮಾಣದ ಸದಸ್ಯರುಗಳ ಹಾಗೂ ಸಿಬ್ಬಂದಿಯ ನೇಮಕಾತಿಯಲ್ಲಿ ಆಗುವ ದೀರ್ಘಕಾಲದ ವಿಳಂಬದಿಂದ ತನ್ನದೇ ಪರಿಣಾಮವನ್ನು ಬೀರುತ್ತದೆ – ಅದರಲ್ಲಿ ಪ್ರಕರಣಗಳ ಬಾಕಿಯು ಗಮನಿಸುವಂತಹುದ್ದು. ಆಯೋಗಗಳಲ್ಲಿ ಸಾಕಷ್ಟು ಸದಸ್ಯರುಗಳಿಲ್ಲದೆ ಅವುಗಳನ್ನು ತೀರ್ಮಾನ ಮಾಡದೇ ಹಾಗೇ ಉಳಿದಿರುವುದರಿಂದ ಹೆಚ್ಚಿನ ಪ್ರಕರಣಗಳು ಆಯೋಗಗಳಲ್ಲಿ ಬಾಕಿ ಇರುತ್ತವೆ. ಇದರಿಂದ ಸಾರ್ವಜನಿಕರಿಗೆ ಆಯೋಗಗಳಲ್ಲಿರುವ ನಂಬಿಕೆ ಹಾಗೂ ವಿಶ್ವಾಸ ಕಡಿಮೆಯಾಗುತ್ತವೆ.

---

**ಆಯೋಗಗಳಿಗೆ ಸ್ವತಂತ್ರ್ಯ ವೃಂದ**

ಆಯೋಗಗಳ ಸಿಬ್ಬಂದಿಗಳನ್ನು ನಿವೃತ್ತಿ ಹೊಂದಿದ ನೌಕರರನ್ನು ಪುನರ್ ನೇಮಕ ಮಾಡಿಕೊಳ್ಳುವುದು ಅಥವಾ ಬೇರೆ ಇಲಾಖೆಗಳಿಂದ ನಿಯೋಜನೆಯ ಮೇಲೆ ತೆಗೆದುಕೊಳ್ಳುವುದನ್ನೇ ಅವಲಂಬಿಸುವುದರಿಂದ ಆಯೋಗಗಳ ಸ್ವಾತಂತ್ರಗಳಲ್ಲಿ ಸಂದಿ ಮಾಡಿಕೊಳ್ಳಲಾಗುತ್ತಿದೆ. ಪ್ಯಾರಿಸ್ ನೀತಿಯ ಪ್ರಕಾರ ಆಯೋಗಗಳು ಸರ್ಕಾರದಿಂದ ಸ್ವಾತಂತ್ರ್ಯವನ್ನು ಪಡೆದು ತನ್ನದೇ ಆದ ಸ್ವಂತ ಆವರಣ ಹಾಗೂ ಸಿಬ್ಬಂದಿಯನ್ನು ಹೊಂದಬೇಕಾಗಿರುವ ಅವಶ್ಯಕತೆಯಿರುತ್ತದೆ.

ಸರ್ಕಾರಿ ವೃಂದದಲ್ಲಿರುವ ಜನರಿಗೆ ದೂರುಗಳನ್ನು ತನಿಖೆ ಮಾಡುವಾಗ ಅವರಿಗಿರುವ ಸಂಪರ್ಕ ಹಾಗೂ ನಂಬಿಕೆ ಅಥವಾ ನೀತಿಗಳನ್ನು ಅನುಷ್ಠಾನಗೊಳಿಸುವಾಗ ಅವರಿಗಿರುವ ಅಪಾರವಾದ ಅನುಭವವನ್ನು ಪಡೆಯಬಹುದೆಂಬ ತರ್ಕ ಮಾಡಬಹುದಾದರೂ, ಅಧಿಕಾರಶಾಹಿ ಅಥವಾ ಪೋಲೀಸರಿಂದ ಕೂಡಿದ ಸಿಬ್ಬಂದಿಯನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಳ್ಳುವುದು ಅಪೇಕ್ಷಣೀಯವಲ್ಲ. ತನಿಖೆಗಳನ್ನು ಕೈಗೊಳ್ಳುವಾಗ ಅಥವಾ ಒಂದು ನಿರ್ದಿಷ್ಟ ಕ್ರಮವನ್ನು ಒತ್ತಾಯ ಪಡಿಸುವಾಗ ಈ ಸಂಪರ್ಕಗಳು ಅಥವಾ ಅವರುಗಳು ತಮ್ಮ ಮಾತೃ ಇಲಾಖೆಗೆ ಹಿಂದಿರುಗುವಂತಾದಾಗ ಹೆಚ್ಚು ಅಪಾಯಕಾರಿಯಾಗಿ ಕಂಡುಬರುತ್ತದೆ.

ಮಾನವ ಹಕ್ಕುಗಳ ಆಯೋಗಗಳ ಕೆಲಸಕಾರ್ಯಗಳು ಪರಿಣಿತಿಯನ್ನು ಹೊಂದಿರುವುದರಿಂದ, ಅವರಿಗೆ ವಿಶೇಷವಾಗಿ ನೇಮಕ ಅಥವಾ ತರಬೇತಿ ಹೊಂದಿದಂತಹ ಸಿಬ್ಬಂದಿಯೇ ಬೇಕಾಗುತ್ತದೆ. ಸರ್ಕಾರದ ಅಧಿಕಾರಷಾಹಿಯಿಂದ ಪರಿಮಿತಗೊಳಿಸಿದಂತಹ ಸಿಬ್ಬಂದಿಯನ್ನು ತೆಗೆದುಕೊಳ್ಳುವುದರ

ಬದಲು ಮಾನವ ಹಕ್ಕುಗಳ ಆಯೋಗಗಳು ತನ್ನದೇ ಆದ ವೃಂದವನ್ನು ಸೃಜನೆ ಮಾಡಿ ಹೊರಗಿನಿಂದ ಸಿಬ್ಬಂದಿಯ ನೇಮಕಾತಿ ಮಾಡಿಕೊಂಡರೆ ಅವುಗಳ ಕಾರ್ಯ ಹಾಗೂ ಸ್ವಾಯತ್ತತೆಯನ್ನು ಕಾಪಾಡಿಕೊಂಡು ಸ್ಪಂದಿಸುವಂತಹ ಸಂಸ್ಥೆಗಳಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ.

**ಶಾಸನದ ಕಣ್ತಪ್ಪು**

ಕಾನೂನಿನ ಪ್ರಕಾರ, ಆಯೋಗಗಳು ತನ್ನ ವಾರ್ಷಿಕ ವರದಿಗಳನ್ನು ಶಾಸನಸಭೆ ಅಥವಾ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಬೇಕಾಗುತ್ತದೆ. ಕೆಲವೊಮ್ಮೆ ಆಯೋಗಗಳೇ ತಮ್ಮ ವರದಿಗಳನ್ನು ಸಲ್ಲಿಸಲು ನಿಧಾನ ಮಾಡುತ್ತವೆ. ಮಂಡಿಸುವುದಕ್ಕಿಂತ ಮುಂಚೆ, ಬಹಳಷ್ಟು ಬಾರಿ, ವರದಿಗಳು ಶಾಸನಸಭೆ ಅಥವಾ ವಿಧಾನಮಂಡಲದ ಕಾರ್ಯಕಲಾಪಗಳು ನಡೆಯುತ್ತಿಲ್ಲ ಅಥವಾ ಶಾಸಕರಿಗೆ ಬೇರೆ ಆದ್ಯತೆಯ ವಿಚಾರಗಳನ್ನು ಚರ್ಚೆ ಮಾಡಬೇಕಾದ ಅಗತ್ಯತೆ ಇದೆ ಎಂಬ ಕಾರಣದ ಮೇಲೆ ಸರ್ಕಾರದ ಮುಂದೆಯೇ ಇರುತ್ತದೆ. ಮೊದಲು ವರದಿಯನ್ನು ಶಾಸಕರು ಚರ್ಚಿಸಿ ನಂತರ ಅನುಮೋದನೆಯಾಗುವ ಮೊದಲೇ ಸಾರ್ವಜನಿಕರಿಗೆ ತಲುಪಿಸಿದರೆ ಅದು 'ಶಾಸನದ ಆದ್ಯತೆ'ಯನ್ನು ಉಲ್ಲಂಘನೆಯಾಗುತ್ತದೆ ಎಂಬ ಕಾರಣದಿಂದ ಸಾರ್ವಜನಿಕರಿಗೆ ಇದು ಲಭ್ಯವಾಗುವುದನ್ನು ನಿರಾಕರಿಸಲಾಗುತ್ತದೆ.

ವರದಿಗಳನ್ನು ಮಂಡಿಸುವಾಗ ಅದನ್ನು ಆಳವಾಗಿ ಚರ್ಚಿಸುವುದು ಬಹಳ ವಿರಳ. ಯಾಂತ್ರಿಕವಾಗಿ ವಾರ್ಷಿಕ ವರದಿಗಳನ್ನು ಅನುಮೋದಿಸಿ ಅದರಲ್ಲಿರುವ ಅಂಶಗಳನ್ನು ಸರಿಯಾಗಿ

ಪರಿಶೀಲನೆ ಮಾಡದಿದ್ದರೆ, ಹಕ್ಕುಗಳ ಉಲ್ಲಂಘನೆಗಳನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಒಂದು ಮಾನವ ಹಕ್ಕುಗಳ ಸಂಸ್ಕೃತಿಯನ್ನು ನಿರ್ಮಾಣ ಮಾಡುವ ವಿಷಯದಲ್ಲಿ ಚರ್ಚೆ ಹಾಗೂ ವಾದ ಮಾಡುವ ಅವಕಾಶವು ಕೈತಪ್ಪಿದಂತಾಗುತ್ತದೆ. ಅದೇ ರೀತಿ ಮಾನವ ಹಕ್ಕುಗಳ ಆಯೋಗಗಳ ಕಾರ್ಯವೈಖರಿಯನ್ನು ನೋಡುವ ಹಾಗೂ ಅದರ ಕಾರ್ಯದಲ್ಲಿ ಉಂಟಾಗುವ ತೊಡಕುಗಳನ್ನು ನಿವಾರಿಸುವ ಅವಕಾಶದಿಂದ ವಂಚಿಸಿದಂತಾಗುತ್ತದೆ.

---

ಕಾನೂನು ರೂಪಿಸುವವರು ಆಯೋಗದ ವರದಿಗಳ ಮೇಲೆ ಕೂಲಂಕುಷವಾಗಿ ಚರ್ಚಿಸುವಂತೆ ಒತ್ತಾಯಪಡಿಸಬೇಕು; ಪ್ರಕರಣಗಳನ್ನು ಪರಿಶೀಲಿಸಬೇಕು; ಮಾನವ ಹಕ್ಕುಗಳ ದುರುಪಯೋಗಗಳ ವೈಖರಿಯನ್ನು ಗುರುತಿಸಬೇಕು; ಮತ್ತು ಬೇಕಾಗಿರುವಂತಹ ಮುಂಜಾಗರೂಕತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ನಮ್ಮ ದೇಶದಲ್ಲಿ ಪ್ರತಿ ವರುಷ ಮಾನವ ಹಕ್ಕುಗಳ ದಾಖಲೆಗಳನ್ನು ಅಭಿವೃದ್ಧಿಪಡಿಸುತ್ತಿವೆ ಎನ್ನುವ ಮೌಲ್ಯನಿರ್ಣಯ ಮಾಡುವ ದೃಷ್ಠಿಯಿಂದ ಕಾನೂನು ರಚನೆ ಮಾಡುವವರು ಸಮಯಕ್ಕೆ ಸರಿಯಾಗಿ ನಿಯಮಿತವಾಗಿ ವಾರ್ಷಿಕ ವರದಿಗಳ ಬಗ್ಗೆ ಚರ್ಚೆ ನಡೆಸುವುದು ಅತ್ಯಗತ್ಯವಾಗಿದೆ.

---

ಮಾನವ ಹಕ್ಕುಗಳ ಆಯೋಗಗಳು ತನ್ನದೇ ಆದ ಸ್ಥಳ ಪರಿಶೀಲನೆಗಳನ್ನು ನಡೆಸಲು; ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ನಡೆಸಲು; ಸರ್ಕಾರೇತರ ಸಂಸ್ಥೆಗಳ ಕೆಲಸಕ್ಕೆ ಬೆಂಬಲ ನೀಡುವುದು; ತಜ್ಞರ ಸೇವೆಯನ್ನು ಪಡೆಯುವುದು ಹಾಗೂ ತನ್ನ ಮೂಲ ಸೌಕಯಗಳನ್ನು ಕಾಪಾಡಿಕೊಂಡು ಅಭಿವೃದ್ಧಿ ಪಡಿಸಲು ಅನೇಕ ಬಾರಿ ಹಣದ ಕೊರತೆಯನ್ನು ಎದುರಿಸುತ್ತವೆ. ಇದನ್ನು ಒತ್ತಿಹೇಳಬೇಕೆಂದರೆ, ಆಯೋಗಗಳು ತನ್ನ ಚಟುವಟಿಕೆಗಳನ್ನು ಚೆನ್ನಾಗಿ ನಡೆಸಿಕೊಂಡು ಹೋಗಬೇಕಾದರೆ ಅದಕ್ಕೆ ತಕ್ಕಂತೆ ಇರುವ ಮೂಲ ಸೌಕರ್ಯಗಳು,

ಅದರಲ್ಲೂ ವಿಶೇಷವಾಗಿ ಸಾಕಷ್ಟು ನಿಧಿಯಿರಬೇಕೆಂದು ಪ್ಯಾರೀಸ್ ನೀತಿಯು ತಿಳಿಸುತ್ತದೆ. ಮಾನವ ಹಕ್ಕುಗಳ ಆಯೋಗವು ಮತ್ತು ಸರ್ಕಾರದ ಮಧ್ಯೆ ಇರುವ ಒತ್ತಡವು, ಕಣ್ತಪ್ಪಿನ ಒಂದು ಸಂಸ್ಥೆಯಾಗಿ ಪರಿಗಣಿಸಲ್ಪಟ್ಟು, ಅಸಮರ್ಪಕ ಆಯವ್ಯಯದ ಹಂಚಿಕೆಯಲ್ಲಿ ಪರ್ಯವಸನಗೊಳ್ಳುತ್ತವೆ. ಆಯೋಗಗಳ ನಿಧಿಯನ್ನು ಒಂದು ಮಾದರಿಯಾಗಿ ಕೇಂದ್ರದ ಅಥವಾ ರಾಜ್ಯದ ಸಂಗ್ರಹದಿಂದ ತೆಗೆಯಬೇಕಾಗಿದ್ದು ಅದನ್ನು ಯಾವುದೇ ಮಂತ್ರಾಲಯದ ಆಯವ್ಯಯಕ್ಕೆ ಸೇರಿಸಬಾರದಾಗಿದ್ದರೂ ಅದನ್ನು ಗೃಹ ಮಂತ್ರಾಲಯದ ಆಯವ್ಯಯದಿಂದ ತೆಗೆಯಲಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಮಾನವ ಹಕ್ಕುಗಳನ್ನು ಸಂರಕ್ಷಿಸುವುದು ಹಾಗೂ ವೃದ್ಧಿಗೊಳಿಸುವುದು ಅತ್ಯುನ್ನತವಾದುದು ಎಂಬುದನ್ನು ಶಾಸಕರುಗಳು ಅರಿತು ಆಯವ್ಯಯದ ಮೇಲಿನ ಚರ್ಚೆಯ ಸಮಯದಲ್ಲಿ, ಆಯೋಗಗಳಿಗೆ ಸರಿಯಾಗಿ ಒದಗಿಸುವುದರಲ್ಲಿ ತೊಡಗಬೇಕು.

ಒಂದು ಪ್ರಕರಣದಲ್ಲಿ ತನಿಖೆಯನ್ನು ಕೈಗೊಳ್ಳುವಾಗ ಘಟನೆಯು ನಡೆದ ಸ್ಥಳವನ್ನು ತಲುಪಬೇಕಾದಾಗ ಅಥವಾ ಆ ಸ್ಥಳವು ನಿರ್ಜನ ಪ್ರದೇಶದಲ್ಲಿದ್ದಾಗ, ಯಾವ ಇಲಾಖೆಯ ನೌಕರರ ವಿರುದ್ಧ ತನಿಖೆ ಮಾಡಲಾಗುತ್ತದೆಯೋ ಅದೇ ಇಲಾಖೆಯ ಸಹಾಯವನ್ನು ಮಾನವ ಹಕ್ಕುಗಳ ತನಿಖಾಧಿಕಾರಿಗಳು ಪಡೆಯುವಂತಾಗಿ ಆಯೋಗಗಳು ಸ್ಥಳ ಪರಿಶೀಲನೆ ನಡೆಸುವುದಕ್ಕೆ ದೈಹಿಕವಾಗಿ ಬೇಕಾಗುವ ಖರ್ಚನ ದೃಷ್ಠಿಯಿಂದ ಸಂಬಂಧಪಟ್ಟ ಇಲಾಖೆಯ ವಿಚಾರಣಾ ವರದಿಯನ್ನು ಒತ್ತಾಯಪೂರ್ವಕವಾಗಿ ಒಪ್ಪಿಕೊಳ್ಳಬೇಕಾದ ಪರಿಸ್ಥಿತಿಯನ್ನು ಸಮರ್ಪಕ ಆಯವ್ಯಯದ ಹಂಚಿಕೆಯಿಂದಾಗಿ ತಪ್ಪಿಸಬಹುದಾಗಿದೆ.

---

ಮಾನವ ಹಕ್ಕುಗಳ ಆಯೋಗಗಳು ತನ್ನ ಕಾರ್ಯವನ್ನು ಮಾಡಲು ಬೇಕಾಗುವಷ್ಟು ಹಣವನ್ನು ಆಯವ್ಯಯದಲ್ಲಿ ಹಂಚಿಕೆ ಮಾಡುವುದಲ್ಲದೆ, ಶಾಸನಸಭೆ ಹಾಗೂ ರಾಜ್ಯ ವಿಧಾನಮಂಡಲಗಳು

ಮಾನವ ಹಕ್ಕುಗಳ ಆಯೋಗಗಳ ಕಾರ್ಯಗಳಿಗೆ ಬೆಂಬಲ ನೀಡುವ ಸಾರ್ವಜನಿಕ ನಿಧಿಯ ಖರ್ಚನ್ನು ಪರಿಶೀಲಿಸುವ ಕರ್ತವ್ಯವಿರುತ್ತದೆ. ಲೆಕ್ಕ ಪತ್ರಗಳ ನಿಯಂತ್ರಕರು ಮತ್ತು ಮಹಾ ಲೇಖಪಾಲರು ತಯಾರಿಸಿರುವ ವರದಿಗಳಲ್ಲಿ ಮಾನವ ಹಕ್ಕುಗಳ ಆಯೋಗಗಳು ಖರ್ಚು ಮಾಡುವ ಹಣದ ವಿವರಗಳನ್ನು ತೋರಿಸಬೇಕೆಂದಿದ್ದರೂ ಅವುಗಳನ್ನು ತೋರಿಸುವುದು ಬಹಳ ವಿರಳ. ವಾರ್ಷಿಕ ವರದಿಗಳಲ್ಲಿ ಹಣಕಾಸಿನ ಖರ್ಚನ್ನು ನಮೂದಿಸದೆ ಸಾರ್ವಜನಿಕರಿಗೆ ತಮ್ಮ ಹಣವನ್ನು ಯಾವ ರೀತಿ ಖರ್ಚು ಮಾಡಲಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳುವ ಹಕ್ಕಿನಿಂದ ವಂಚಿತರನ್ನಾಗಿ ಮಾಡಿದಂತಾಗುತ್ತದೆ. ಶಾಸಕರು ಆಯವ್ಯಯಗಳ ಕಡಿಮೆ ಖರ್ಚು ಮಾಡಿ ಬೊಕ್ಕಸಕ್ಕೆ ಹಿಂತಿರುಗಿಸುವಂತೆ ಮಾಡದೆ ಹಂಚಿಕೆಮಾಡಿರುವ ಹಣವನ್ನು ಪ್ರವಾಸ, ಸವಲತ್ತುಗಳು, ಸಂಬಳ, ಮೂಲಭೂತ ಸೌಕರ್ಯಗಳನ್ನು ಕಾಪಾಡಿಕೊಂಡು ಮಾಡದೆ ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ವೃದ್ಧಿಯಾಗುವಂತಹ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೇಲೆ ಖರ್ಚು ಮಾಡುವ ಭರವಸೆ ನೀಡಬೇಕು.

**ಮಾನವ ಹಕ್ಕುಗಳ ಸಂಸ್ಕೃತಿಯನ್ನು ಪೋಷಿಸುವುದು**

ಮಾನವ ಹಕ್ಕುಗಳ ಸಂಸ್ಕೃತಿಯನ್ನು ವೃದ್ಧಿಗೊಳಿಸುವುದು ಮಾನವ ಹಕ್ಕುಗಳ ದುರುಪಯೋಗಗಳನ್ನು ಮಟ್ಟಹಾಕುವ ಒಂದು ಪ್ರಮುಖ ಅಸ್ತ್ರವಾಗಿದೆ. ಮಾನವ ಹಕ್ಕುಗಳ ಜಾಗೃತ ಸಮಾಜವು ಉಲ್ಲಂಘನೆಗಳಿಗೆ ಪ್ರವೇಶ ನೀಡುವುದಿಲ್ಲ. ರಾಜ್ಯವನ್ನು ಎದುರಿಸಬೇಕಾದ ಸಂದರ್ಭಗಳಲ್ಲಿ ಜನರು ತಮ್ಮ ಹಕ್ಕುಗಳೇನು ಎಂಬುದನ್ನು ತಿಳಿದುಕೊಳ್ಳುವ ಅವಶ್ಯಕತೆಯಿದೆ. ಉದಾಹರಣೆಗೆ, ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವಾಗ ಅಥವಾ ಬಂಧನಕ್ಕೆ ಒಳಪಟ್ಟಾಗ ಹಲವಾರು ಜನರಿಗೆ ತಮ್ಮ ಹಕ್ಕುಗಳೇನು ಎಂಬುದರ ಅರಿವಿಲ್ಲದಂತಾಗಿ

ಉಲ್ಲಂಘನೆಗಳು ಹಾಗೆಯೇ ಇರುತ್ತವೆ. ಆದಕಾರಣ ವೈಯುಕ್ತಿಕ ದೂರುಗಳನ್ನು ಬಗೆಹರಿಸುವುದಕ್ಕಿಂತ ಹೆಚ್ಚಿನ ಸಮಯವನ್ನು ಆಯೋಗಗಳು ಮಾನವ ಹಕ್ಕುಗಳನ್ನು ವೃದ್ಧಿಗೊಳಿಸುವಂತಹ ಯೋಜನೆಗಳಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಸಿಕೊಳ್ಳಬೇಕು. ನಾಗರೀಕ ಸಮಾಜದ ಒಂದು ನಿರಂತರವಾದ ದೂರೆಂದರೆ ಹಕ್ಕುಗಳ ಜಾಗೃತಿ ಕಾರ್ಯಕ್ರಮಗಳಿಗಾಗಿ ಆಯೋಗಗಳ ಹಣವನ್ನು ಅತ್ಯಲ್ಪವಾಗಿ ಬಳಸುತ್ತಿರುವುದು. ವಿಭಿನ್ನ ಕ್ಷೇತ್ರಗಳಾದ ಕೈಗಾರಿಕೆ, ಶೈಕ್ಷಣಿಕ ಸಂಸ್ಥೆಗಳು ಮತ್ತು ಸ್ಥಳೀಯ ಸ್ವಾಯತ್ತತೆಯ ಸಂಸ್ಥೆಗಳನ್ನು ಗುರಿಯಾಗಿಟ್ಟುಕೊಂಡು ಜಾಗೃತಿಯನ್ನು ಹೆಚ್ಚಿಸಿ ದೇಶದಲ್ಲಿ ದುರ್ಬಲ ರೀತಿಯ ಸಂರಕ್ಷಣೆಯಿರದಂತೆ ನೋಡಿಕೊಳ್ಳುವುದು ಬಹಳ ಮುಖ್ಯ.

**ನಾಗರೀಕ ಸಮಾಜದೊಡನೆ ಹತ್ತಿರದ ಸಹಕಾರ**

ಮಾನವ ಹಕ್ಕುಗಳ ಕ್ಷೇತ್ರಗಳಲ್ಲಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರಯತ್ನಗಳಿಗೆ ಪ್ರೋತ್ಸಾಹ ನೀಡುವುದು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1993ರ ಒಂದು ಕಾರ್ಯವಾಗಿದೆ. ಘನತೆಯನ್ನು ಹೊಂದಿದ ನಾಗರೀಕ ಸಮಾಜದ ಗುಂಪುಗಳು ದೇಶಾದ್ಯಂತ, ಅದರಲ್ಲೂ ವಿಶೇಷವಾಗಿ, ದೂರದ ಪ್ರದೇಶಗಳಲ್ಲಿ ಆಯೋಗಗಳ ಕಣ್ಣು ಮತ್ತು ಕಿವಿಗಳನ್ನು ತೆರೆಯುವಂತೆ ಮಾಡುತ್ತವೆ. ಪೋಲೀಸ್ ಅಥವಾ ಜಿಲ್ಲಾ ಆಡಳಿತಗಳ ಮೇಲೆ ಭಾರಿ ಅವಲಂಬನೆಯನ್ನು ಹೊಂದುವುದರ ಬದಲು ನಾಗರೀಕ ಸಮಾಜದ ಸಹಯೋಗದಿಂದಾಗಿ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಮತ್ತೊಮ್ಮೆ ಪರೀಕ್ಷೆ ಮಾಡುವ ದಾರಿಗಳು ದೊರೆಯುತ್ತವೆ. ನಾಗರೀಕ ಸಮಾಜವು ಮಾನವ ಹಕ್ಕುಗಳ ಆಯೋಗಗಳಿಗೆ ವಿಭಿನ್ನ ರೀತಿಯ ತಜ್ಞರನ್ನು ಒದಗಿಸುತ್ತವೆ – ವೈದ್ಯರುಗಳು, ಪರಿಸರ ತಜ್ಞರು, ಅಭಿವೃದ್ಧಿ ತಜ್ಞರು

ಇತ್ಯಾದಿ. ದೀರ್ಘಕಾಲದಿಂದ ಬಾಕಿಯಿದ್ದು ಹೆಚ್ಚಾಗಿ ಕಾಡುತ್ತಿರುವ ಮಾನವ ಹಕ್ಕುಗಳ ಪ್ರಕರಣಗಳ ಬಗ್ಗೆ ಆಯೋಗಗಳು ರಾಷ್ಟ್ರದ ಗಮನವನ್ನು ಸೆಳೆಯಲು ಅವುಗಳ ಸಹಕಾರದಿಂದ ಸಾಧ್ಯವಾಗಿವೆ. ಆಸಕ್ತ ಚಟುವಟಿಕೆಯುಳ್ಳ ಗುಂಪುಗಳು ಮತ್ತು ಆಯೋಗಗಳ ಸಿಬ್ಬಂದಿ ಇವುಗಳ ಸಾಮರ್ಥ್ಯವನ್ನು ಬಲಪಡಿಸಿ ಮಾನವ ಹಕ್ಕುಗಳ ಒಳ – ಹೊರಗಿನ ಹಾಗೂ ತಾಂತ್ರಿಕತೆಗಳನ್ನು ಅರ್ಥಮಾಡಿಕೊಂಡು ಮಾನವ ಹಕ್ಕುಗಳ ಜಾಗೃತಿಯನ್ನು ಪ್ರಚಾರ ಮಾಡಲು ನಾಗರೀಕ ಸಮಾಜದ ಸಹಭಾಗಿತ್ವವು ಸಹಾಯಕವಾಗಿವೆ.

---

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಾಗೂ ಕೆಲವು ರಾಜ್ಯ ಆಯೋಗಗಳು ಸರ್ಕಾರೇತರ ಸಂಸ್ಥೆಗಳಿಗೆ ಬೆಂಬಲನೀಡಿ ಅವುಗಳೊಡನೆ ಸಹಭಾಗಿತ್ವ ಪಡೆದಿದ್ದರೂ, ಇನ್ನೂ ಹೆಚ್ಚಿನ ಸಹಭಾಗಿತ್ವಕ್ಕೆ ಸಾಕಷ್ಟು ಅವಕಾಶಗಳಿವೆ. ದುರದೃಷ್ಟವಶಾತ್, ಆಯೋಗಗಳು ನಾಗರೀಕ ಸಮಾಜದೊಡನೆ ಇನ್ನೂ ಹೆಚ್ಚು ಕ್ರಮಬದ್ಧವಾದ ಹಾಗೂ ಔಪಚಾರಿಕವಾದ ಮಾರ್ಗಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ಇರುವ ಹಿಂಜರಿಕೆಯು ಹಾಗೆಯೇ ಮುಂದುವರೆದಿದೆ. ಹಲವಾರು ಬಾರಿ ನಾಗರೀಕ ಸಮಾಜದ ಗುಂಪುಗಳು ಆಯೋಗಗಳನ್ನು ಸ್ಪಂದಿಸದಂತಹ ಅಧಿಕಾರಷಾಹಿಗಳು ಎಂದು ಅವುಗಳನ್ನು ತಳ್ಳಿಹಾಕುವ ಪ್ರವೃತ್ತಿ ಇಟ್ಟುಕೊಂಡಿದ್ದರೂ ಸಹ ಈ ರೀತಿಯ ನಿರ್ಲಕ್ಷ್ಯತನದಿಂದಾಗಿ ಅವುಗಳು ಹೇಗಿರಬೇಕೋ ಹಾಗಿರುವಲ್ಲಿ ಮತ್ತು ಏನು ಮಾಡಬೇಕೋ ಅವುಗಳನ್ನು ಮಾಡುವ ಸಾಮರ್ಥ್ಯತೆಯು ಕುಂಟಿತವಾಗುತ್ತವೆ. ಆಯೋಗಗಳೂ ಕೂಡ ತಮ್ಮ ಸಾಮರ್ಥ್ಯತೆಯು ಹೆಚ್ಚಾಗಬೇಕಾದರೆ ನಾಗರೀಕ ಸಮಾಜದ ಬೆಂಬಲ ಎಷ್ಟು ಮುಖ್ಯ ಎಂಬುದನ್ನು ಅರಿತುಕೊಳ್ಳಬೇಕು.

---

ದೇಶಾದ್ಯಂತ ಮಾನವ ಹಕ್ಕುಗಳನ್ನು ರಕ್ಷಣೆ ಮಾಡಲು ಸಮಾಜ, ಸರ್ಕಾರ ಮತ್ತು ಆಯೋಗಗಳ ಪಾಲುದಾರಿಕೆಯು ಸಹಾಯ ಮಾಡುತ್ತವೆ. ಆಯೋಗಗಳು ಪ್ರಚೋದಕ ಶಕ್ತಿಗಳಾಗಿದ್ದು, ರಾಜ್ಯವು, ಮಾನವ ಹಕ್ಕುಗಳ ದುರುಪಯೋಗಿ ಮುಖದಿಂದ ಸಮರ್ಥಗಾರ ಸ್ಥಾನಕ್ಕೆ ಬದಲಾವಣೆ ಹೊಂದಬೇಕಾದರೆ ಆಯೋಗಗಳ ಸ್ವಾತಂತ್ರ್ಯ ಹಾಗೂ ಸಾಮರ್ಥ್ಯವು ಯಾವುದೇ ರೀತಿಯಲ್ಲಿ ಕುಂಟಿತವಾಗದಂತೆ ನೋಡಿಕೊಳ್ಳುವ ಪ್ರಮುಖವಾದ ಜವಾಬ್ದಾರಿ ರಾಜ್ಯದ ಮೇಲಿರುತ್ತದೆ. ನಾಗರೀಕರು, ಪದ್ಧತಿಯ ಬಳಕೆದಾರರು ಹಾಗೂ ಫಲಾನುಭವಿಗಳಾಗಿ – ಹಲವಾರು ಬಾರಿ ನೊಂದವರು – ಆಯೋಗಗಳೊಂದಿಗೆ ಸಮಾನರಾಗಿ ಹಾಗೂ ಪಾಲುದಾರರಾಗಿ ಸಮೀಪದಿಂದ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾಗುತ್ತದೆ. ಆಯೋಗಗಳ ಕೊರತೆಗಳನ್ನು ಸರಿಪಡಿಸಲು ಜಾಗೃತ ಸಾರ್ವಜನಿಕರು ಅವಶ್ಯಕತೆಯಿದೆ.

**ಅನುಬಂಧ – 1**

| ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣೆ(Universal Declaration of Human Rights) | ಭಾರತ ಸಂವಿಧಾನದಲ್ಲಿರುವ ಮೂಲಭೂತ ಹಕ್ಕುಗಳು (Fundamental Rights in the Indian Constitution) |
|---|---|
| ಸಮಾನತೆ ಮತ್ತು ತಾರತಮ್ಯದಿಂದ ಮುಕ್ತವಾಗುವ ಹಕ್ಕು | ಅನುಚ್ಛೇದ 14 – ಕಾನೂನಿನ ಮುಂದೆ ಸಮಾನತೆ ಮತ್ತು ಕಾನೂನಿನ ಸಮಾನ ರಕ್ಷಣೆ<br>ಅನುಚ್ಛೇದ 15 – ಜನ್ಮಸ್ಥಳ, ಲಿಂಗ, ಜಾತಿ, ವರ್ಣ ಅಥವಾ ಧರ್ಮದ ಆಧಾರದ ಮೇಲೆ ತಾರತಮ್ಯ ಮಾಡುವುದರ ಬಹಿಷ್ಕಾರ |
| ವೈಯುಕ್ತಿಕ ಭದ್ರತೆ, ಸ್ವಾತಂತ್ರ್ಯ ಹಾಗೂ ಜೀವಿಸುವ ಹಕ್ಕು | ಅನುಚ್ಛೇದ 21 – ವೈಯುಕ್ತಿಕ ಸ್ವಾತಂತ್ರ್ಯ ಮತ್ತು ಜೀವಕ್ಕೆ ರಕ್ಷಣೆ |
| ಗುಲಾಮಗಿರಿಯಿಂದ ಬಿಡುಗಡೆ | ಅನುಚ್ಛೇದ 23 – ಮಾನವನ ಮಾರಾಟ, ಜೀತದಾಳು ಮುಂತಾದ ಬಲವಂತವಾಗಿ ಕೆಲಸ ಮಾಡಿಸಿಕೊಳ್ಳುವುದರ ನಿಷೇಧ |
| ಮನಬಂದಂತೆ ಬಂಧಿಸುವ ಹಾಗೂ ಬಂಧನದಲ್ಲಿಡುವುದರಿಂದ ಮುಕ್ತಿ | ಅನುಚ್ಛೇದ 22: ಬಂಧನದ ಕಾರಣವನ್ನು ತಿಳಿಸುವ ಹಕ್ಕು; ಒಬ್ಬ ವಕೀಲರ ಸಲಹೆ |

| | |
|---|---|
| | ಕೇಳುವ ಹಾಗೂ ಅವರಿಂದ ಸಮರ್ಥಿಸಿಕೊಳ್ಳುವುದು; ಬಂಧನದ ನಂತರ 24 ಗಂಟೆಗಳೊಳಗಾಗಿ ನ್ಯಾಯಾಧೀಶರ ಮುಂದೆ ಹಾಜರುಪಡಿಸುವುದು |
| ಧರ್ಮ, ಮನಸ್ಸಾಕ್ಷಿ ಮತ್ತು ಆಲೋಚಿಸುವ ಸ್ವಾತಂತ್ರ್ಯದ ಹಕ್ಕು | ಅನುಚ್ಛೇದ 25 – ಧರ್ಮವನ್ನು ಪ್ರಚಾರ ಮಾಡುವ ಹಾಗೂ ಬೋಧಿಸುವ ಮತ್ತು ಮನಸ್ಸಾಕ್ಷಿಯಂತೆ ನಡೆದುಕೊಳ್ಳುವ ಸ್ವಾತಂತ್ರ್ಯ |
| ಮುಕ್ತವಾದ ಸಾರ್ವಜನಿಕ ವಿಚಾರಣೆ; ಎಲ್ಲಾ ರೀತಿಯಿಂದಲೂ ಸಮರ್ಥಿಸಿಕೊಳಲು ಭರವಸೆ; ನಡೆದ ಘಟನೆಯು ಅದು ನಡೆದಾಗ ಶಿಕ್ಷಾರ್ಹವಾಗಿರದಿದ್ದರೆ ಬಂಧಿಸದಿರುವುದು ಅಥವಾ ಅಪರಾಧ ನಡೆದಾಗ ಶಿಕ್ಷೆಯ ಪ್ರಮಾಣಕ್ಕಿಂತ ಹೆಚ್ಚಾಗಿ ನೀಡದಿರುವುದು | ಅನುಚ್ಛೇದ 20 – ತನ್ನ ವಿರುದ್ಧವೇ ಸಾಕ್ಷಿಹೇಳುವಂತೆ ಒತ್ತಾಯಪಡಿಸುವುದು ಹಾಗೂ ಘಟನೆಯು ನಡೆದಾಗ ಅದು ಶಿಕ್ಷಾರ್ಹವಾಗಿಲ್ಲದಿದ್ದರೆ ಶಿಕ್ಷಿಸದಿರುವುದು ಅಥವಾ ಘಟನೆಯು ನಡೆದಾಗ ನೀಡಬೇಕಾದ ಶಿಕ್ಷೆಗಿಂತ ಹೆಚ್ಚಾಗಿ ನೀಡದಿರುವುದು |
| ರಾಷ್ಟ್ರದ ಗಡಿಯೊಳಗೆ ವಾಸಿಸುವ ಹಾಗೂ ಸಂಚರಿಸುವ ಹಕ್ಕು | ಅನುಚ್ಛೇದ 19(ಇ) ಮತ್ತು (ಎಫ್) – ಭಾರತದ ಗಡಿಯೊಳಗೆ ಎಲ್ಲಿಯಾದರೂ ಮುಕ್ತವಾಗಿ ಸಂಚರಿಸುವ ಹಕ್ಕು ಹಾಗೂ ಭಾರತದ ಯಾವುದೇ ಒಂದು ಭಾಗದಲ್ಲಿ ಶಾಶ್ವತವಾಗಿ ನೆಲೆಸುವುದು |
| ಮಾಹಿತಿಯನ್ನು ಪಡೆಯುವುದು ಹಾಗೂ | ಅನುಚ್ಛೇದ 19(ಅ) – ಮಾತನಾಡುವ |

| | |
|---|---|
| ಸಲಹೆಗಳನ್ನು ಪಡೆಯುವ ಸ್ವಾತಂತ್ರ್ಯ | ಹಾಗೂ ವ್ಯಕ್ತಪಡಿಸುವ ಸ್ವಾತಂತ್ರ್ಯ |
| ಶಾಂತಿಯಿಂದ ಒಂದೆಡೆ ಕಲೆತು ಸಂಘಗಳನ್ನು ಸ್ಥಾಪಿಸುವ ಹಕ್ಕು | ಅನುಚ್ಛೇದ 19 (ಬಿ) ಮತ್ತು (ಸಿ) – ಶಸ್ತ್ರಾಸ್ತ್ರವಿಲ್ಲದೆ ಒಂದೆಡೆ ಶಾಂತಿಯಿಂದ ಸೇರುವ ಹಕ್ಕು; ಸಂಘಗಳು ಅಥವಾ ಸಂಘಟನೆಗಳನ್ನು ರಚಿಸುವ ಹಕ್ಕು |
| ಶಿಕ್ಷಣದ ಹಕ್ಕು | ಅನುಚ್ಛೇದ 21ಎ – 6ರಿಂದ 14 ವರುಷದವರೆಗಿನ ಮಕ್ಕಳ ಶಿಕ್ಷಣದ ಹಕ್ಕು |
| ಮೂಲಭೂತ ಹಕ್ಕುಗಳ ಉಲ್ಲಂಘನೆಯಾದರೆ ಅದನ್ನು ಬಗೆಹರಿಸಲು ಅರ್ಹತೆಯುಳ್ಳ ಪ್ರಾಧಿಕಾರದಿಂದ ಪರಿಹಾರ ಕಂಡುಕೊಳ್ಳುವ ಹಕ್ಕು | ಅನುಚ್ಛೇದ 32 – ಮೂಲಭೂತ ಹಕ್ಕುಗಳ ಸಂರಕ್ಷಣೆ ಹಾಗೂ ಜಾರಿಗೆ ತರಲು ಸರ್ವೋಚ್ಚ ನ್ಯಾಯಾಲಯದ ಮುಂದೆ ಹೋಗುವ ಹಕ್ಕು |

**ಅನುಬಂಧ – 2**

| ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಘೋಷಣೆ(Universal Declaration of Human Rights) | ಭಾರತ ಸಂವಿಧಾನದಲ್ಲಿರುವ ರಾಜ್ಯ ನೀತಿಯ ನಿರ್ದೇಶಕ ತತ್ವಗಳು (Directive Principles of State Policy in the Indian Constitution) |
|---|---|
| ಸಾಮಾಜಿಕ ಭದ್ರತೆಯ ಹಕ್ಕು | ಅನುಚ್ಛೇದ 41ರಲ್ಲಿ ನಿರುದ್ಯೋಗ, ವೃದ್ಧಾಪ್ಯ, ಅನಾರೋಗ್ಯ ಮತ್ತು ಇತರ ಅನಪೇಕ್ಷಿತ ಆಕಾಂಕ್ಷಿಗಳಿಗೆ ಕೆಲಸ ಮಾಡುವ ಹಕ್ಕು, ಶಿಕ್ಷಣ ಹಾಗೂ ಸಾರ್ವಜನಿಕ ಸಹಾಯವನ್ನು ಒದಗಿಸುವುದರಲ್ಲಿ ಪರಿಣಾಮಕಾರಿಯಾದ ಅವಕಾಶಗಳನ್ನು ರೂಪಿಸುವ ಜವಾಬ್ದಾರಿಯು ರಾಜ್ಯದ ಮೇಲಿದೆ |
| ಅನುಕೂಲಕರವಾದ ವಾತಾವರಣದಲ್ಲಿ ನ್ಯಾಯಯುತವಾಗಿ ಕೆಲಸ ಮಾಡುವ ಹಕ್ಕು; ಹಾಗೂ ಯಾವುದೇ ತಾರತಮ್ಯವಿಲ್ಲದೆ ಸಮಾನ ಕೆಲಸಕ್ಕೆ ಸಮಾನ ವೇತನ ಪಡೆಯುವು | ಕೆಲಸ ಮಾಡುವ ಕಡೆ ನ್ಯಾಯಯುತ ಹಾಗೂ ಮಾನವೀಯ ವಾತಾವರಣವಿರುವ ಹಾಗೆ ಅವಕಾಶಮಾಡಿಕೊಡುವ ಜವಾಬ್ದಾರಿಯನ್ನು ಅನುಚ್ಛೇದ 42 ರಾಜ್ಯದ ಮೇಲೆ ವಿಧಿಸುತ್ತದೆ ಗಂಡಸರು, ಹೆಂಗಸರು ಮತ್ತು ಮಕ್ಕಳು ತಮ್ಮ ಜೀವನೋಪಾಯಕ್ಕೆ ಸಾಕಷ್ಟು ದಾರಿಯಿರುವಂತೆ; ಹಾಗೂ ಗಂಡಸರು ಮತ್ತು ಹೆಂಗಸರು |

| | |
|---|---|
| | ಸಮಾನ ಕೆಲಸಕ್ಕೆ ಸಮಾನ ವೇತನ ಪಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಅನುಚ್ಛೇದ 39(ಎ)ರಿಂದ (ಡಿ) ರಾಜ್ಯದ ಮೇಲೆ ಹೊರಿಸುತ್ತವೆ. |
| ವಿಶ್ರಾಂತಿ, ವಿಲಾಸ, ಸಮಂಜಸವಾದ ಕೆಲಸ ವೇಳೆ ಹಾಗೂ ರಜಾ ದಿನಗಳು; ಸಾಂಸ್ಕೃತಿಕ ಜೀವನದಲ್ಲಿ ಭಾಗಿಯಾಗುವುದು ಹಾಗೂ ವೈಜ್ಞಾನಿಕ ಪ್ರಗತಿಯ ಲಾಭವನ್ನು ಪಡೆಯುವ ಹಕ್ಕು | ಎಲ್ಲಾ ಕೆಲಸಗಾರರು, ಅವರು ವ್ಯವಸಾಯಗಾರರು, ಕೈಗಾರಿಕೆ ಅಥವಾ ಬೇರೆ ಯಾವುದಾದರೂ ಕ್ಷೇತ್ರವಾಗಲಿ, ಗೌರವಯುತ ಜೀವನ ಮಟ್ಟ ಹಾಗೂ ವಿಶ್ರಾಂತಿ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಕಾಶಗಳನ್ನು ಅನುಭವಿಸುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಅನುಚ್ಛೇದ 43 ರಾಜ್ಯದ ಮೇಲೆ ಹೊರಿಸುತ್ತದೆ |
| ವ್ಯಕ್ತಿಯೊಬ್ಬನ ಮತ್ತು ಆತನ ಕುಟುಂಬದವರ ಆರೋಗ್ಯ ಮತ್ತು ಸ್ವಾಸ್ಥ್ಯತೆಗೆ ಸಾಕಾಗುವಷ್ಟು ಜೀವನದ ಮಟ್ಟದ ಹಕ್ಕು | ಸಾರ್ವಜನಿಕ ಆರೋಗ್ಯವನ್ನು ಸುಧಾರಿಸುವುದು, ಜೀವನದ ಗುಣಮಟ್ಟ ಹಾಗೂ ಪೌಷ್ಠಿಕತೆಯ ಮಟ್ಟವನ್ನು ಹೆಚ್ಚಿಸುವ ಜವಾಬ್ದಾರಿಯನ್ನು ಅನುಚ್ಛೇದ 47 ರಾಜ್ಯದ ಮೇಲೆ ಹೊರಿಸುತ್ತದೆ.<br>ಮಕ್ಕಳು ಆರು ವರುಷ ಪೂರ್ಣಗೊಳ್ಳುವವರೆಗೆ ಅವುಗಳ ರಕ್ಷಣೆ ಹಾಗೂ ಶಿಕ್ಷಣ ನೀಡುವ |

| | |
|---|---|
| | ಜವಾಬ್ದಾರಿಯನ್ನು ಅನುಚ್ಛೇದ 45 ರಾಜ್ಯದ ಮೇಲೆ ಹೊರಿಸುತ್ತದೆ |
| ಅಂತರರಾಷ್ಟ್ರೀಯ ಘೋಷಣೆಗಳಲ್ಲಿನ ಹಕ್ಕುಗಳು ದೊರೆಯುವಂತೆ ಮಾಡಲು ಇರುವ ಸಾಮಾಜಿಕ ಹಾಗೂ ಅಂತರರಾಷ್ಟ್ರೀಯ ಪದ್ಧತಿಯ ಹಕ್ಕು | ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ವೃದ್ಧಿಗೊಳಿಸುವ; ರಾಷ್ಟ್ರಗಳ ನಡುವೆ ನ್ಯಾಯಯುತ ಹಾಗೂ ಗೌರವಯುತ ಸಂಬಂಧಗಳನ್ನು ಕಾಪಾಡುವ; ಅಂತರರಾಷ್ಟ್ರೀಯ ಕಾನೂನುಗಳು ಮತ್ತು ಒಪ್ಪಂದಗಳನ್ನು ಗೌರವಿಸುವುದು; ಹಾಗೂ ಅಂತರರಾಷ್ಟ್ರೀಯ ವ್ಯಾಜ್ಯಗಳ ಪರಸ್ಪರ ಒಪ್ಪಂದಗಳನ್ನು ಪ್ರೋತ್ಸಾಹಿಸುವ ಜವಾಬ್ದಾರಿಯನ್ನು ಅನುಚ್ಛೇದ 51 ರಾಜ್ಯದ ಮೇಲೆ ಹೊರಿಸುತ್ತದೆ. |

## <u>ಮುನ್ನುಡಿ</u>

ಸಂಯುಕ್ತ ರಾಷ್ಟ್ರ ಸಂಸ್ಥೆಯ ಮಹಾ ಸಭೆಯು, ವಿಶ್ವ ಮಾನವ ಹಕ್ಕುಗಳ ಪ್ರಕಟಣಾ ಪತ್ರಿಕೆ 1948 ಅಳವಡಿಸಿಕೊಂಡು "ಎಲ್ಲ ಮಾನವ ಜೀವಿಗಳು ಹುಟ್ಟಿನಿಂದ ಸ್ವತಂತ್ರ, ಘನತೆ ಮತ್ತು ಹಕ್ಕುಗಳಲ್ಲಿ ಸಮಾನ ಮತ್ತು ಪ್ರತಿಯೊಬ್ಬನಿಗೂ ಯಾವುದೇ ತರಹದ ತಾರತಮ್ಯವಿಲ್ಲದೆ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯಗಳನ್ನು ಹೊಂದುವ ಅಧಿಕಾರಉಳ್ಳವನಾಗಿದ್ದಾನೆ" ಎಂದು ಘೋಷಿಸಿದಾಗಿನಿಂದ ಮಾನವ ಹಕ್ಕುಗಳ ಕಾಳಜಿಯು ಜಾಗತಿಕ ಮಟ್ಟದಲ್ಲಿ ಕಾಲೂರಿದೆ. ಅದರ ಮಹತ್ವವು ಎಲ್ಲ ಆಂತರಿಕ ರಾಜ್ಯಗಳ, ಅಂತರ ರಾಜ್ಯಗಳ ರಾಜಕೀಯ ಸಂಬಂಧಗಳಲ್ಲಿ ಬೆಳೆದುಕೊಂಡಿದೆ. ಅದು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ, ಮಾತುಕತೆಗಳಲ್ಲಿ, ವ್ಯವಹಾರಗಳಲ್ಲಿ, ಸಂಧಾನಗಳಲ್ಲಿ ಚರ್ಚಿಸುವ ವಿಷಯವಾಗಿದೆ. ಅದು ಎಲ್ಲ ಧಾರ್ಮಿಕ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಧ್ಯೇಯ ಧೋರಣೆಗಳಲ್ಲಿ ವ್ಯಾಖ್ಯಾನಕ್ಕೆ ಒಳಪಟ್ಟಿದೆ. ಅದು ಹಲವಾರು ಶೈಕ್ಷಣಿಕ ವಿಷಯಗಳಲ್ಲಿ ಬೋಧನೆಯ ವಿಷಯವಾಗಿದೆ.

ಮಾನವ ಹಕ್ಕುಗಳ ಸಂರಕ್ಷಣೆಯ ಅರಿವು ಎಷ್ಟರಮಟ್ಟಿಗೆ ಬೆಳೆದಿದೆ ಎಂದರೆ, ಇಂದಿನ ಸಮಾಜಗಳನ್ನು, ರಾಜ್ಯಗಳನ್ನು, ಆಡಳಿತಗಳನ್ನು ಮತ್ತು ಕಾನೂನುಗಳನ್ನು ಅಳೆಯುವ ಮಾನದಂಡವಾಗಿದೆ. ಇಂದು ಅದು ವ್ಯಕ್ತಿಗಳು ಮತ್ತು ಸರ್ಕಾರಗಳು ತೆಗೆದುಕೊಳ್ಳುವ ನಿರ್ಣಯಗಳ ಅಳತೆಗೋಲಾಗಿದೆ. ಅದು ಸರ್ಕಾರ ಮತ್ತು ಆಡಳಿತಗಳಿಗೆ ಮಿತಿಗಳನ್ನು ಹೇರುವ ವ್ಯವಸ್ಥೆಯಾಗಿದೆ. ಅಂತರಾಷ್ಟ್ರೀಯ ಸಮಾಜವು ನೀಡುವ ಮಾನವೀಯ ಮತ್ತು ಆರ್ಥಿಕ ಸಹಾಯಕ್ಕೆ ತಳಹದಿಯಾಗಿದೆ.

ಜೀವನದಲ್ಲಿ ಮಾನವತೆಯ ಪ್ರತಿಯೊಂದು ಕ್ಷೇತ್ರದಲ್ಲೂ ಮಾನವ ಹಕ್ಕುಗಳು ಸಮಂಜಸವಾಗಿವೆ. ಅವುಗಳ ಸಂರಕ್ಷಣೆ ಮತ್ತು ವೃದ್ಧಿಯನ್ನು ಸಂವಿಧಾನದಲ್ಲಿ ಹಾಗೂ ಭಾರತವು ಒಪ್ಪಿಕೊಂಡು ಸಹಿ ಹಾಕಿರುವ ವಿವಿಧ ಅಂತರರಾಷ್ಟ್ರೀಯ ಒಪ್ಪಂದಗಳು ಹಾಗೂ ಒಡಂಬಡಿಕೆಗಳಲ್ಲಿ ಖಾತ್ರಿಗೊಳಿಸಲಾಗಿದೆ. ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಮಾನವ ಹಕ್ಕುಗಳ ತಿರುಳನ್ನು ವೃದ್ಧಿಪಡಿಸುವ ಹಾಗೂ ಮಾನವ ಹಕ್ಕುಗಳ ಕಾನೂನು ಮತ್ತು ರಾಜಕೀಯ ಅಡಿಪಾಯಗಳ ರಕ್ಷಣೆಯನ್ನು ಮಾಡುವ ಕಾರ್ಯಗಳಲ್ಲಿ ರಾಷ್ಟ್ರೀಯ ಮಾನವ

ಹಕ್ಕುಗಳ ಆಯೋಗ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗಗಳು ಸಮಾನ ಜವಾಬ್ದಾರಿಗಳನ್ನು ಹೊಂದಿವೆ ಹಾಗೂ ಸಮಾನ ಉದ್ದೇಶಗಳನ್ನು ಇಟ್ಟುಕೊಂಡಿವೆ.

ಅನೇಕ ವೇಳೆ, ಸಾಮಾನ್ಯ ನಾಗರೀಕರು ರಾಜ್ಯದ ಕ್ರಮ ಅಥವಾ ನಿಷ್ಕ್ರಿಯತೆಯಿಂದಾಗಿ ತೊಂದರೆಗೊಳಗಾದಾಗ, ತಮ್ಮ ದೂರುಗಳನ್ನು ಯಾವ ವೇದಿಕೆಯ ಮುಂದೆ ಕೊಂಡೊಯ್ಯಬೇಕು ಅಥವಾ ಮಾನವ ಹಕ್ಕುಗಳ ಉಲ್ಲಂಘನೆಯಾದರೆ ಯಾವ ರೀತಿಯ ಪರಿಹಾರಗಳಿವೆ ಎಂಬುದನ್ನು ತಿಳಿಯದೆ ಪರಿತಪಿಸುವಂತಹ ಸನ್ನಿವೇಶಗಳನ್ನು ನಾವು ಕಾಣುತ್ತೇವೆ. ಮಾನವ ಹಕ್ಕುಗಳ ಆಯೋಗಗಳನ್ನು ಮಾನವ ಹಕ್ಕುಗಳ ಸಂರಕ್ಷಣೆಯನ್ನು ಉತ್ತಮಗೊಳಿಸಲು ನಾಗರೀಕರಿಗೆ ಸಮಾಜದಲ್ಲಿ ನ್ಯಾಯಯುತವಾಗಿ ಮಾನವೀಯತೆಯಿಂದ ಮತ್ತು ಘನತೆಯಿಂದ ಬಾಳಲು ಅವು ಸಹಕರಿಸುವುವು ಎಂಬ ಭರವಸೆಯಿಂದ 1993ರ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮದಡಿಯಲ್ಲಿ ರಚಿಸಲಾಗಿವೆ. ಮಾನವ ಹಕ್ಕುಗಳ ದುರುಪಯೋಗಗಳಿಂದ ನೊಂದವರಿಗೆ ಕಾನೂನಿನ ನಿಯಮದಡಿಯಲ್ಲಿ ಪರಿಹಾರವನ್ನು ಒದಗಿಸುವುದು ಅವುಗಳ ಮುಖ್ಯ ಉದ್ದೇಶವಾಗಿದೆ. ಮಾನವ ಹಕ್ಕುಗಳ ಉಲ್ಲಂಘನೆಗಳು ಹತೋಟಿ ತಪ್ಪಿ ನಡೆಯದಂತೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಗೆ ಕಾರಣರಾದವರನ್ನು ತಮ್ಮ ಕೃತ್ಯಗಳಿಗೆ ಅಥವಾ ಕಾರ್ಯವೈಫಲ್ಯತೆಯ ಬಗ್ಗೆ ಜವಾಬ್ದಾರಾಗುವಂತೆ ಆಯೋಗಗಳು ಕ್ರಮಕೈಗೊಳ್ಳುವುದು ಅವುಗಳ ಆದ್ಯ ಕರ್ತವ್ಯವಾಗಿದೆ. ಇವೆಲ್ಲ ಕಾರಣಗಳಿಗಾಗಿ ನಾಗರೀಕರಿಗೆ ಮಾನವ ಹಕ್ಕುಗಳ ಬಗ್ಗೆ ಮತ್ತು ಮಾನವ ಹಕ್ಕುಗಳ ಆಯೋಗಗಳ ಬಗ್ಗೆ, ಅವುಗಳ ಕಾರ್ಯವೈಖರಿ ಬಗ್ಗೆ ಪರಿಚಯಿಸುವುದು ಅತೀ ಅವಶ್ಯಕವಾಗಿದೆ.

ಈ ಮಾಹಿತಿ ಕೈಹೊತ್ತಿಗೆಯನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ಆಯೋಗದ ಸನ್ಮಾನ್ಯ ಸದಸ್ಯರಾದ ಶ್ರೀ ಬ. ಪಾರ್ಥಸಾರಥಿಯವರ ನೇತೃತ್ವದಲ್ಲಿ ತಯಾರಿಸಲಾಗಿದ್ದು ಮಾನವ ಹಕ್ಕುಗಳ ಆಯೋಗಗಳ ಅಸ್ತಿತ್ವ; ಅವು ಯಾವ ರೀತಿಯ ದೂರುಗಳನ್ನು ಕೈಗೆತ್ತಿಕೊಳ್ಳಬಹುದು; ಅವುಗಳ ಕಾರ್ಯವಿಧಾನ; ಹಾಗೂ ಅವುಗಳು ನೀಡಬಹುದಾದ ಪರಿಹಾರ ಇವುಗಳನ್ನೆಲ್ಲಾ ನಾಗರೀಕರಿಗೆ ತಿಳಿಸುವ ಉದ್ದೇಶವನ್ನು ಈ ಕೈಹೊತ್ತಿಗೆ ಹೊಂದಿದೆ. ಈ ಕೈಹೊತ್ತಿಗೆಯಲ್ಲಿರುವ ವಿವರಗಳನ್ನು ತಿಳಿದುಕೊಂಡವರು ಮಾನವ ಹಕ್ಕುಗಳ ಉಲ್ಲಂಘನೆಯಾದಲ್ಲಿ ಮಾನವ ಹಕ್ಕುಗಳ ಆಯೋಗಗಳನ್ನು ಸಮರ್ಥವಾಗಿ ಸಂಪರ್ಕಿಸಿ ನೆರವು ಪಡೆಯಲು ಸಾಮಾನ್ಯ ಜನತೆಗೆ ನೆರವಾಗುತ್ತದೆ ಎಂದು ನಂಬಿದ್ದೇನೆ.

ಈ ಕೈಹೊತ್ತಿಗೆಯನ್ನು ತರುವುದರ ಹಿಂದಿರುವ ಸದುದ್ದೇಶವು ಸಫಲವಾಗಲಿ; ಈ ಪ್ರಯತ್ನವು ಮಾನವ ಹಕ್ಕುಗಳ ಜಾಗೃತಿಯನ್ನು ಸಮಾಜದ ಎಲ್ಲಾ ವರ್ಗಗಳ ಜನರಿಗೆ ತಲುಪಿಸುವುದರಲ್ಲಿ ಸಹಕರಿಸುತ್ತದೆ ಎಂದು ನಂಬಿದ್ದೇನೆ.

(ನ್ಯಾಯಮೂರ್ತಿ ಎಸ್.ಆರ್. ನಾಯಕ್)
ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

## ವಿಷಯಸೂಚಿ

ಮುನ್ನುಡಿ

1. ಮಾನವ ಹಕ್ಕುಗಳ ಆಯೋಗಗಳು – ಕಿರುನೋಟ ಮತ್ತು ಪರಿಚಯ 1
2. ಮಾನವ ಹಕ್ಕುಗಳು ಎಂದರೇನು 17
3. ಮಾನವ ಹಕ್ಕುಗಳ ಆಯೋಗಗಳ ಪಾತ್ರ 26
4. ದೂರುಗಳನ್ನು ದಾಖಲಿಸುವುದು ಹೇಗೆ 40
5. ಮಾನವ ಹಕ್ಕುಗಳ ಆಯೋಗವು ಯಾವ ರೀತಿಯಲ್ಲಿ ಕೆಲಸ ಮಾಡುತ್ತದೆ? 62
6. ಮಾನವ ಹಕ್ಕುಗಳ ಆಯೋಗಗಳಿಂದ ನೀಡಲಾಗುವ ತಕ್ಷಣದ ಪರಿಹಾರಗಳು 82
7. ಸುಧಾರಣೆಯ ಆದ್ಯತಾ ಕ್ಷೇತ್ರಗಳು 92

ಅನುಬಂಧ 1: ಮಾನವ ಹಕ್ಕುಗಳ ವಿಶ್ವ ಘೋಷಣೆ ಮತ್ತು ಮೂಲಭೂತ ಹಕ್ಕುಗಳು ಇವೆರಡರ ನಡುವಿನ ತುಲನಾತ್ಮಕ ತ:ಖ್ತೆ 105

ಅನುಬಂಧ 2: ಮಾನವ ಹಕ್ಕುಗಳ ವಿಶ್ವ ಘೋಷಣೆ ಮತ್ತು ರಾಜ್ಯ ನೀತಿಯ ನಿರ್ದೇಶಕ ತತ್ವಗಳ ನಡುವಿನ ತುಲನಾತ್ಮಕ ತ:ಖ್ತೆ 108

---

ಪರಿಹಾರಗಳೂ ಸಹ ಹಕ್ಕುಗಳ ಜೊತೆಯಲ್ಲಿ ಬಂದರೆ ಮಾತ್ರ ಹಕ್ಕುಗಳು ನಿಜವೆನಿಸಿಕೊಳ್ಳುತ್ತವೆ. ಹಕ್ಕುಗಳ ಅತಿಕ್ರಮಣವಾದಾಗ ಅದರಿಂದ ನೊಂದ ವ್ಯಕ್ತಿಗಳಿಗೆ ಕಾನೂನಿನಲ್ಲಿ ಪರಿಹಾರವಿಲ್ಲದಿದ್ದಲ್ಲಿ ಅವರಿಗೆ ಹಕ್ಕುಗಳನ್ನು ಕೊಡುವುದರಿಂದ ಏನೂ ಉಪಯೋಗವಾಗುವುದಿಲ್ಲ ––– ಡಾ: ಬಿ.ಆರ್. ಅಂಬೇಡ್ಕರ್

---

ಪ್ರತಿಯೊಬ್ಬ ವ್ಯಕ್ತಿಯ ಮಾನವ ಹಕ್ಕುಗಳನ್ನು ರಾಜ್ಯವು ಸಂರಕ್ಷಿಸುವುದು ಕಾನೂನಿನ ಪ್ರಕಾರ ಅನಿವಾರ್ಯವಾಗಿದೆ. ಪ್ರತಿಯೊಬ್ಬ ವ್ಯಕ್ತಿಯನ್ನೂ ಸಮಾನವಾಗಿ ನೋಡುವ ಹಕ್ಕು; ಚರಿತ್ರೆಯಿಂದಲೂ ಅವಕಾಶಗಳಿಂದ ವಂಚಿತರಾಗಿದ್ದು ಈಗಲೂ ಆ ಪರಿಸ್ಥಿತಿಯು ಮುಂದುವರೆಯುತ್ತಿರುವಂತಹವರು, ಅಂದರೆ, ಮಹಿಳೆಯರು, ಮಕ್ಕಳು, ದಲಿತರು, ಪರಿಶಿಷ್ಠ ಜಾತಿ ಮತ್ತು ವರ್ಗಗಳವರನ್ನು ಸಂರಕ್ಷಿಸಿ ಅವರಿಗೆಲ್ಲಾ ಸಮಾನ ಅವಕಾಶಗಳನ್ನು ಕಲ್ಪಿಸುವುದನ್ನು ಭಾರತೀಯ ಸಂವಿಧಾನವು ಖಾತ್ರಿಗೊಳಿಸುತ್ತದೆ. ಪ್ರತಿಯೊಬ್ಬ ನಾಗರೀಕನೂ ಮುಕ್ತವಾಗಿ ಮಾತನಾಡುವ; ಮುಕ್ತವಾಗಿ ಪೂಜಿಸುವ; ಸ್ವತಂತ್ರ ವಾಗಿ ಓಡಾಡುವ; ಸ್ವತಂತ್ರವಾಗಿ ಕೆಲಸ ಮಾಡುವ; ಭಾರತದಲ್ಲಿ ಎಲ್ಲಿ ಬೇಕಾದರೂ ನೆಲೆಸುವ; ತನ್ನದೇ ಆದ ಭಾಷೆ ಹಾಗೂ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುವ; ರಾಜಕೀಯ ಜೀವನದಲ್ಲಿ ಭಾಗವಹಿಸುವ; ಸರ್ಕಾರದ ನೀತಿಗಳನ್ನು ಶಾಂತಿಯಿಂದ ವಿರೋಧಿಸುವ; ತನ್ನ ಹಕ್ಕುಗಳನ್ನು ನಿರಾಕರಿಸಿದಲ್ಲಿ ನ್ಯಾಯಾಲಯಗಳ ಮುಂದೆ ಹೋಗುವ ಅವಕಾಶಗಳನ್ನು ಭಾರತೀಯ ಸಂವಿಧಾನದಲ್ಲಿ ಕಲ್ಪಿಸಿದ್ದು ಅವುಗಳನ್ನು ಖಾತ್ರಿಗೊಳಿಸಲಾಗಿದೆ.

ಸರ್ಕಾರ ಮಾನವ ಹಕ್ಕುಗಳನ್ನು ಅತಿಕ್ರಮಿಸದಂತೆ ನೋಡಿಕೊಂಡು ಮಾನವ ಹಕ್ಕುಗಳನ್ನು ಎತ್ತಿಹಿಡಿಯುವ ದೃಷ್ಠಿಯಿಂದ ಪೂರಕ ಸಂಸ್ಥೆಗಳಾಗಿ ಮಾನವ ಹಕ್ಕುಗಳ ಆಯೋಗಗಳನ್ನು ರಚಿಸಲಾಗಿವೆ; ಅವುಗಳು ಹಕ್ಕುಗಳ ಸಂರಕ್ಷಣೆ ಮತ್ತು ವೃದ್ಧಿಗಾಗಿ ಸಕಾರಾತ್ಮಕ ಹೆಜ್ಜೆಗಳನ್ನು ತೆಗೆದುಕೊಳ್ಳುತ್ತವೆ. ಈ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು 1993ರ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮವನ್ನು ಜಾರಿಗೊಳಿಸಲಾಗಿದ್ದು ಅದರಡಿಯಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗಗಳು ರಚಿತವಾಗಿವೆ.

ಮಾನವ ಹಕ್ಕುಗಳ ಆಯೋಗಗಳ ಮುಂದೆ ಪ್ರತಿ ವರುಷ ಹೆಚ್ಚಿನ ಜನರು ಸಾವಿರಾರು ದೂರುಗಳನ್ನು ತಂದರೂ ಸಹ, ವಿಶಾಲವಾಗಿರುವ ಈ ರಾಷ್ಟ್ರದಲ್ಲಿನ ಸಾಕಷ್ಟು ಜನರಿಗೆ ಈ ಆಯೋಗಗಳ ಅಸ್ತಿತ್ವದ ಬಗ್ಗೆ ಹಾಗೂ ಅವುಗಳಿಂದ ಯಾವ ರೀತಿಯ ಸಹಾಯವನ್ನು ಪಡೆಯಬಹುದು ಎಂಬುದರ ಅರಿವಿರುವುದಿಲ್ಲ. ಮಾನವ ಹಕ್ಕುಗಳ ಆಯೋಗಗಳನ್ನು ಯಾವ ರೀತಿ ಉಪಯೋಗಿಸಿಕೊಳ್ಳಬಹುದು, ಅವುಗಳು ಯಾವ ರೀತಿ ಕೆಲಸ ಮಾಡುತ್ತವೆ, ಅವುಗಳು ಯಾವ ರೀತಿಯ ಉಲ್ಲಂಘನೆಗಳನ್ನು ಕೈಗೆತ್ತಿಕೊಳ್ಳುತ್ತವೆ ಹಾಗೂ ಯಾವ ರೀತಿ ಅದರ ಸಂಪರ್ಕ ಮಾಡಬಹುದು ಎಂಬುದನ್ನು ಓದುಗರಿಗೆ ತಿಳಿಸಿಕೊಡುವುದು ಈ ಕೈಹೊತ್ತಿಗೆಯ ಉದ್ದೇಶವಾಗಿದೆ. ಏಕೆಂದರೆ ನಾಗರೀಕರಾದ ನಮಗೆ ನಮ್ಮ ಹಕ್ಕುಗಳ ಅರಿವುಂಟಾಗದೆ

ಹಾಗೂ ಅವುಗಳನ್ನು ಎತ್ತಿಹಿಡಿಯಲು ಸ್ಥಾಪನೆಯಾಗಿರುವ ಬೇರೆ ಬೇರೆ ಸಂಸ್ಥೆಗಳ ಹಾಗೂ ಸಾಧನಗಳ ಅರಿವಿಲ್ಲದಿದ್ದರೆ, ನಮ್ಮ ಸ್ವಾತಂತ್ರ್ಯ ಹೋರಾಟದ ಉದಾತ್ತ ಧ್ಯೇಯಗಳು ಫಲಪ್ರದವಾಗದೆ ಹಾಗೆಯೇ ಉಳಿಯುತ್ತದೆ.

**ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ**

**"ನಾಗರಿಕರ ಕೈಹೊತ್ತಿಗೆ"**

ಎಲ್ಲಾ ಮಾನವರು ಹುಟ್ಟುವಾಗ ಸ್ವತಂತ್ರರಾಗಿರುತ್ತಾರೆ. ಆದರೆ ಎಲ್ಲಾ ಕಡೆ ಅವರನ್ನು ಶೃಂಖಲೆಯಲ್ಲಿಡಲಾಗಿದೆ – ರೂಸೋ

ಕಾಮನ್‌ವೆಲ್ತ್ ಮಾನವ ಹಕ್ಕುಗಳ ಇನಿಷಿಯೇಟಿವ್‌ರವರು 2006ರಲ್ಲಿ ಹೊರತಂದ ಕೈಹೊತ್ತಿಗೆಯ ಕನ್ನಡ ಅನುವಾದ (ಕೆಲವು ಕರ್ನಾಟಕ ಘಟನೆಗಳ ಸೇರ್ಪಡೆ)

ಡಿಸೆಂಬರ್ 10, 2008

1993ರಲ್ಲಿ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮವು ಜಾರಿಗೆ ಬಂದರೂ ಕರ್ನಾಟಕದಲ್ಲಿ ಇದನ್ನು ಕೂಡಲೇ ಜಾರಿಗೆ ತರಲಿಲ್ಲ. ದಿನಾಂಕ 28ನೇ ಜೂನ್ 2005ರಂದು ರಾಜ್ಯ ಸರ್ಕಾರ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವನ್ನು ಬೆಂಗಳೂರಿನಲ್ಲಿ ಕೇಂದ್ರ ಸ್ಥಾನವಾಗಿ ಇಟ್ಟು ಅಸ್ತಿತ್ವಕ್ಕೆ ತಂದಿತು. ದಿನಾಂಕ 28.06.2005ರಲ್ಲಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದರೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರ ಮತ್ತು ಸದಸ್ಯರ ನೇಮಕಾತಿಗಳನ್ನು ಮಾಡುವ ಬಗ್ಗೆ ಇರುವ ಸಮಿತಿ ಸಭೆ ಸೇರಿ ಮಾನ್ಯ ರಾಜ್ಯ ಪಾಲರಿಗೆ

ಶಿಫಾರಸ್ಸು ಮಾಡಿದ ಅನುಗುಣವಾಗಿ ಜುಲೈ 18, 2007ರಂದು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993ರ ಕಲಂ 22ರ ಪ್ರಕಾರ ನೇಮಕ ಮಾಡಲಾಯಿತು. ಕರ್ನಾಟಕ ರಾಜ್ಯದ ರಾಜ್ಯಪಾಲರು ಚತ್ತೀಸಘಡ್ ಉಚ್ಛ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಶ್ರೀ ಎಸ್.ಆರ್. ನಾಯಕ್ ಅವರನ್ನು ಅಧಿಸೂಚನೆ ಸಂ. ಲಾ 17 ಹೆಚ್.ಆರ್.ಸಿ. 2005 ದಿನಾಂಕ 23.07.2007ರ ಅನ್ವಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ.  ಮಾನ್ಯ ರಾಜ್ಯಪಾಲರು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಆರ್.ಹೆಚ್. ರಡ್ಡಿ ಇವರನ್ನು ಅಧಿಸೂಚನೆ ಸಂಖ್ಯೆ: ಲಾ 17 ಹೆಚ್.ಆರ್.ಸಿ. 05 ದಿನಾಂಕ 28.07.2007ರನ್ವಯ ಸದಸ್ಯರನ್ನಾಗಿ ನೇಮಕ ಮಾಡಿದ್ದಾರೆ.  ಅದೇ ರೀತಿ ನಿವೃತ್ತ ಐ.ಎ.ಎಸ್. ಅಧಿಕಾರಿ ಶ್ರೀ ಬಿ. ಪಾರ್ಥಸಾರಥಿ ಅವರನ್ನು ಅಧಿಸೂಚನೆ ಸಂಖ್ಯೆ: ಲಾ 17 ಹೆಚ್.ಆರ್.ಸಿ. 05 ದಿನಾಂಕ 23.07.2007ರ ಅನ್ವಯ ಸದಸ್ಯರನ್ನಾಗಿ ನೇಮಕ ಮಾಡಿದ್ದಾರೆ.

ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಸದಸ್ಯರುಗಳಲ್ಲಿ ಒಬ್ಬರಾದ ಶ್ರೀ ಬಿ. ಪಾರ್ಥಸಾರಥಿ ಅವರು ದಿನಾಂಕ 25.07.2007ರಂದು ಹಾಗೂ ಮತ್ತೋರ್ವ ಸದಸ್ಯ ಶ್ರೀ ಆರ್.ಹೆಚ್. ರಡ್ಡಿ ಅವರು ದಿನಾಂಕ 28.07.2007ರಂದು ಅಧಿಕಾರ ವಹಿಸಿಕೊಂಡಿದ್ದಾರೆ.

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಅಸ್ತಿತ್ವಕ್ಕೆ ಬಂದ ದಿನಾಂಕ 25.07.2007ರಿಂದ ಇದುವರೆಗೆ ಒಟ್ಟು 5374 ಪ್ರಕರಣಗಳನ್ನು ಸ್ವೀಕರಿಸಿದ್ದು ಅವುಗಳಲ್ಲಿ 1125 ಸ್ವಯಂಪ್ರೇರಣೆಯಿಂದ ತೆಗೆದುಕೊಂಡ ಪ್ರಕರಣಗಳು ಸೇರಿವೆ.  ಅವುಗಳಲ್ಲಿ ಇದುವರೆಗೆ 2247 ಪ್ರಕರಣಗಳನ್ನು ( 69 ಸ್ವಯಂಪ್ರೇರಿತ ಪ್ರಕರಣಗಳೂ ಸೇರಿದಂತೆ) ಇತ್ಯರ್ಥಪಡಿಸಲಾಗಿದೆ.

**ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ**

**“ನಾಗರಿಕರ ಕೈಹೊತ್ತಿಗೆ”**

ಲಾಂಛನ

**ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ**

3 ಮತ್ತು 4ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು–560001
ದೂರವಾಣಿ: 080 – 22392200 ಫ್ಯಾಕ್ಸ್: 080 – 22392207

E-Mail: kshrc2007@gmail.com

**ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ**

ವಿಳಾಸ: ಫರೀದ್‌ಕೋಟ್ ಹೌಸ್, ಕೊಪರ್ನಿಕಸ್ ಮಾರ್ಗ್, ನವದೆಹಲಿ–110001

ದೂರವಾಣಿ: 011 – 23382742
ಫ್ಯಾಕ್ಸ್: 011 – 23384863, 223386521, 23382734

Website: www.nhrc.nic.in

**ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ**

ವಿಳಾಸ: 3 ಮತ್ತು 4ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು–560001

ದೂರವಾಣಿ: 080 – 22392200

ಫ್ಯಾಕ್ಸ್: 080 – 22392207

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಕೇಂದ್ರ ಸ್ಥಾನ ದೆಹಲಿಯಲ್ಲಿದ್ದು ರಾಜ್ಯ ಮಾನವ ಹಕ್ಕುಗಳ ಆಯೋಗಗಳ ಕೇಂದ್ರ ಸ್ಥಾನ ರಾಜ್ಯಗಳ ರಾಜಧಾನಿಗಳಲ್ಲಿರುತ್ತವೆ. ಅಂದರೆ, ಆಯೋಗದ ಕೆಲಸ ಕಾರ್ಯಗಳನ್ನು ರಾಜ್ಯದ ರಾಜಧಾನಿಯಲ್ಲಿಯೇ ಕೇಂದ್ರೀಕರಿಸಿರುವುದರಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಆಯೋಗದ ಶಾಖಾ ಕಚೇರಿಗಳಿಲ್ಲದೆ ಜನರು ದೂರು ಸಲ್ಲಿಸಲು ತೊಂದರೆಯಾಗುತ್ತಿದೆಯೆಂದು ಸಾರ್ವಜನಿಕರು ಹೇಳುತ್ತಿದ್ದಾರೆ. ಈ ದೃಷ್ಠಿಯಿಂದ ಕರ್ನಾಟಕ ರಾಜ್ಯದ ಲೋಕಾಯುಕ್ತದಲ್ಲಿ ಮಾಡಿದ ಹಾಗೆ ಜಿಲ್ಲಾ ಮಟ್ಟದಲ್ಲೂ ಮಾನವ ಹಕ್ಕುಗಳ ಆಯೋಗದ ತನಿಖಾ ತಂಡವಿರುವ ಹಾಗೆ ವ್ಯವಸ್ಥೆ ಮಾಡಬೇಕಾಗುತ್ತದೆ. ಜಿಲ್ಲಾ ಮಟ್ಟದ ಪೋಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ಅಗತ್ಯ ಸಿಬ್ಬಂದಿಯೊಡನೆ ಈ ತನಿಖಾ ತಂಡದ ಕೇಂದ್ರ ಕಚೇರಿ ಜಿಲ್ಲಾ ಕೇಂದ್ರದಲ್ಲಿರುವ ಹಾಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮೊದಲನೆಯ ಹಂತವಾಗಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಜಿಲ್ಲಾ ಕೇಂದ್ರದಲ್ಲಿ ಇದನ್ನು ವ್ಯವಸ್ಥೆ ಮಾಡಲು ಕೂಡಲೇ ಸಾಧ್ಯವಿಲ್ಲದಿದ್ದರೆ ಕಡೆಯ ಪಕ್ಷ ಪೋಲೀಸ್ ಪ್ರಾದೇಶಿಕ ವಲಯಗಳಿಗೆ ನೀಡಿರುವ ಕಾರ್ಯವ್ಯಾಪ್ತಿಯ ಕೇಂದ್ರ ಸ್ಥಾನಗಳಲ್ಲಿ ಆಯೋಗದ ತನಿಖಾ ತಂಡದ ಶಾಖಾ ಕಚೇರಿಯಲ್ಲಿ ವ್ಯವಸ್ಥೆ ಮಾಡುವುದು ಸೂಕ್ತವಾಗಿದೆ.